Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–18 | ಏಪ್ರಿಲ್ 29–ಮೇ 5, 2024 | ಪುಟ 16 | ರೂ.10/–
Volume-18 | Issue-18 | April 29-May 5, 2024 | Pages:16 | Price: 10/-



ಮೋದಿಯ ದ್ವೇಷ ಹಾಗೂ ಪರಮತ ನಿಂದನೆ ಭಾಷಣಗಳು



ಹಾಸನ: ಲೈಂಗಿಕ ಹಗರಣ ಆರೋಪಿ ಪ್ರಜ್ವಲ್ ರೇವಣ್ಣರನ್ನು ಬಂಧಿಸಿ ಮಹಿಳೆಯರ ಘನತೆ ಕಾಪಾಡಿ



ಮೇ ದಿನ ಪ್ರಣಾಳಿಕೆ

ಬರ ಪರಿಹಾರ ಬಿಡುಗಡೆ: ಪೂರ್ಣ ನ್ಯಾಯವಿನ್ನೂ ಸಿಗಲಿಲ್ಲ



ಕೇರಳ LDF ಗೆ ಮೇಲುಗೈ ಕೊಡುವುದೇ?



ಸಾರ್ವಜನಿಕ ಆರೋಗ್ಯ ಅನುದಾನ ಕಡಿತ, ಖಾಸಗಿ ವಿಮೆ ಕಂಪನಿಗಳಿಗೆ ಸುಗ್ಗಿ

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಘೋಷಣೆಗಳು

* ಮೋದಿ ಸರಕಾರದ ಒಂದು ಪ್ರಮುಖ ಪ್ರತಿಪಾದನೆ ಎಂದರೆ 'ಪ್ರಧಾನ ಮಂತ್ರಿ ಜನ ಆರೋಗ್ಯಯೋಜನೆ(ಪಿ.ಎಂ.–ಜೆ.ಎ.ವೈ.)ಯು ಕೋಟ್ಯಾಂತರ ಜನರನ್ನು ಅವರು ವೈದ್ಯಕೀಯ ವೆಚ್ಚದ ಕಾರಣಕ್ಕೆ ಬಡವರಾಗುವುದನ್ನು ತಪ್ಪಿಸಿದೆ ಎಂಬುದಾಗಿದೆ.
* ಈಗ 'ಆಯುಷ್ಮಾನ್ ಆರೋಗ್ಯ ಮಂದಿರ' ಎಂದು ಹೆಸರಿಸಲಾಗಿರುವ 'ಆಯುಷ್ಮಾನ್ ಭಾರತ್ – ಆರೋಗ್ಯ ಮತ್ತು ಕ್ಷೇಮ ಕೇಂದ್ರ (ಎಚ್.ಡಬ್ಲ್ಯೂ.ಸಿ.) ಗಳು ಜನರ ಆರೋಗ್ಯದ ಅಗತ್ಯಗಳನ್ನು ಪೂರೈಸುತ್ತವೆ.
* ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ(ಎ.ಐ.ಐ.ಎಂ.ಎಸ್.)ಗಳ ಸಂಖ್ಯೆಯು 7 ರಿಂದ 21 ಕ್ಕೆ ಏರಿಕೆಯಾಗಿದೆ.
* ಇಸವಿ 2025 ಕ್ಕೆ 'ಟಿ.ಬಿ. ಕಾಯಿಲೆ ಸೋಲುತ್ತದೆ. ದೇಶವು ಗೆಲ್ಲುತ್ತದೆ' (ಟಿಬಿ ಹಾರೆಗಾ, ದೇಶ್ ಜೀತೆಗಾ)
* ಇಸವಿ 2047ಕ್ಕೆ ರಕ್ತಹೀನತೆಗೆ ಸಂಬಂಧಿಸಿದ ಅನುವಂಶಿಕ ಕಾಯಿಲೆಯಾದ 'ಸಿಕ್ಕಲ್ ಸೆಲ್' ರೋಗವನ್ನು 'ನ್ಯಾಷನಲ್ ಸಿಕ್ಕಲ್ ಸೆಲ್ ಎಲಿಮಿನಿನೇಷನ್ ಮಿಷನ್' ಸಂಪೂರ್ಣ ನಿವಾರಿಸುತ್ತದೆ.

ವಾಸ್ತವ

ಪ್ರತಿ ವರ್ಷವೂ (ಪಿ.ಎಂ.–ಜೆ.ಎ.ವೈ.) ಪ್ರಯೋಜನೆಗಾಗಿ 6,000 ಕೋಟಿಗಳನ್ನು ಖರ್ಚು ಮಾಡುತ್ತಿದ್ದರೂ ಸಹ ಈ ಹಣದ ಬಹುಪಾಲು ಮೊತ್ತವು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತದೆ. ಆದರೆ ಈ ಆಸ್ಪತ್ರೆಗಳು ಕಾರ್ಡ್ ಹೊಂದಿರುವವರಿಗೆ ಉಚಿತ ಚಿಕಿತ್ಸೆ ಕೊಡುವುದಿಲ್ಲ. ಸರಕಾರವು ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತದೆ ಎಂದು ಪ್ರಚಾರ ಮಾಡಿಕೊಳ್ಳುತ್ತದೆ. ಆದರೆ ಬಹುತೇಕ ಯಾವ ಕುಟುಂಬಕ್ಕೂ ಪೂರ್ತಿ ಹಣವನ್ನು ಪಾವತಿಸಲಾಗಿಲ್ಲ. ಬಡ ಕುಟುಂಬಗಳಿಗೆ ಅರೋಗ್ಯ ವೆಚ್ಚಗಳು ಭರಿಸಲಾಗದಂತಹ ಹೊರೆಯಾಗಿರುವುದು ಇಂದಿನ ವಾಸ್ತವವಾಗಿದೆ.

ಸದರಿ ಕಾರ್ಡು ಆರೋಗ್ಯ ಚಿಕಿತ್ಸೆಯ ಎರಡನೇ ಮತ್ತು ಮೂರನೇ ಹಂತದ ಅಗತ್ಯಗಳನ್ನು ಸಹ ಪೂರೈಸುವುದಿಲ್ಲ. ಕೇಂದ್ರ ಸರಕಾರವು ಈ ಯೋಜನೆಯ ಎಲ್ಲ ಹಿರಿಮೆಯು ತನ್ನದೆಂದು ಹೇಳುತ್ತದೆ. ಆದರೆ ಬಹುತೇಕ ರಾಜ್ಯಗಳು ಆಗಲೇ ಆರೋಗ್ಯ ವಿಮಾ ಯೋಜನೆಯನ್ನು ಹೊಂದಿದ್ದವು ಮತ್ತು ಕೇಂದ್ರ ಸರಕಾರವು ಆರೋಗ್ಯ ವೆಚ್ಚದ ಒಂದು ಪಾಲನ್ನು ಮಾತ್ರವೇ ನೀಡಲು ಒಪ್ಪಿತು. ಉಳಿದ ಮೊತ್ತವನ್ನು ರಾಜ್ಯ ಸರಕಾರಗಳು ಭರಿಸುತ್ತಿವೆ.

ಕಳೆದ 70 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು 1.46 ಲಕ್ಷ ಆರೋಗ್ಯ ಉಪಕೇಂದ್ರಗಳನ್ನು ಮತ್ತು 26,000 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸಿವೆ. ಇದಕ್ಕೆ ಅಗತ್ಯವಾದ ಹಣಕಾಸಿನ ಬಹುತೇಕ ಪಾಲು ರಾಜ್ಯ ಸರಕಾರಗಳಿಂದ ಬಂದಿದೆ. ಮೋದಿ ಸರಕಾರವು ಈ ಆಸ್ಪತ್ರೆಗಳಿಗೆ ಹೊಸದಾಗಿ ಬಣ್ಣವನ್ನು ಬಳಿದು, ಹೆಸರನ್ನು ಬದಲಾಯಿಸಿ ತಾನು 1.6 ಲಕ್ಷ ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು ಸ್ಥಾಪಿಸಿರುವುದಾಗಿ ಹೇಳಿಕೊಳ್ಳುತ್ತಿದೆ. ಈ ಕೇಂದ್ರಗಳಲ್ಲಿ ಒಂದೇ ಒಂದು ಹೊಸ ಸೌಲಭ್ಯವನ್ನೂ ಕೇಂದ್ರ ಸರಕಾರ ನೀಡಿಲ್ಲ.

ಹೆಸರು ಬದಲಾಯಿಸುವ ಕೇಂದ್ರ ಸರಕಾರದ 'ಬ್ರಾಂಡಿಂಗ್' ಕ್ರಮವನ್ನು ಒಪ್ಪದ ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರವು ಈ ಆರೋಗ್ಯ ಸೇವೆಗಳಿಗಾಗಿ ಹಿಂದಿನಿಂದಲೂ ಯಾವತ್ತೂ ನೀಡಲಾಗುತ್ತಿದ್ದ ಹಣಕಾಸು ಬೆಂಬಲವನ್ನು ನಿರಾಕರಿಸುತ್ತಿದೆ. ಹಾಗೆಯೇ ಈ ಹಿಂದೆಯೇ



ಆರಂಭವಾಗಿರುವ ಜನೌಷಧಿ ಕೇಂದ್ರಗಳನ್ನು 'ಪ್ರಧಾನ ಮಂತ್ರಿ–ಭಾರತೀಯ ಜನೌಷಧಿ ಪರಿಯೋಜನ' (ಪಿಎಂ–ಬಿಜೆಪಿ!) ಎಂದು ಬದಲಾಯಿಸಲಾಗಿದೆ.

ಮೋದಿ ಸರಕಾರವು 15 ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ(ಎಐಐಎಂಎಸ್) ಗಳನ್ನು ಆರಂಭಿಸಿರುವುದು ನಿಜ. ಆದರೆ ಅವು ಅತ್ಯಂತ ಸೀಮಿತ ಸೇವೆಗಳನ್ನು ಮಾತ್ರ ನೀಡುತ್ತಿವೆ. ಅದೇ ರೀತಿಯಾಗಿ ಈ ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳ ಕೊರತೆ ಇದೆ. ಇರುವ ರಾಜ್ಯ ಸರಕಾರಗಳ ವೈದ್ಯಕೀಯ ಕಾಲೇಜುಗಳನ್ನು ವ್ಯವಸ್ಥಿತವಾಗಿ ಬಲಪಡಿಸುವ ಬದಲು ಕೇಂದ್ರ ಸರಕಾರವು ತನ್ನ ನಿಯಂತ್ರಣದ ಹೊಸ ಹೊಸ ಎಐಐಎಂಎಸ್ ಗಳ ಆರಂಭವನ್ನು ಪ್ರಚಾರಕ್ಕಾಗಿ ಘೋಷಿಸುತ್ತಿದೆ.

ಬಹಳಷ್ಟು ವೈದ್ಯಕೀಯ ಕಾಲೇಜುಗಳ ಮತ್ತು ವೈದ್ಯಕೀಯ ಸ್ನಾತಕೋತ್ತರ ಸೀಟುಗಳ ಹೆಚ್ಚಳವು ಖಾಸಗಿ ರಂಗದಲ್ಲಿ ಆಗಿದೆ. ಆದರೆ ಈ ಕಾಲೇಜುಗಳಲ್ಲಿನ ಶುಲ್ಕವು ಅತ್ಯಂತ ದುಬಾರಿಯಾದುದು ಮತ್ತು ಇಲ್ಲಿ ವೈದ್ಯರಾಗುವವರು ಸಾರ್ವಜನಿಕ ಸೇವೆಗೆ ಅಂದರೆ ಸರಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಜನರ ಸೇವೆಗೆ ಸಿಗುವುದು ಬಹಳ ಕಡಿಮೆ. ಪ್ರತಿ ವರ್ಷವೂ ಸುಮಾರು ಒಂದು ಲಕ್ಷದಷ್ಟು ವೈದ್ಯಕೀಯ ಪದವೀಧರರು ಸಿದ್ಧರಾಗಿ ಹೊರ ಬರುತ್ತಿದ್ದಾರೆ. ಆದರೆ ಅದಕ್ಕೆ ತಕ್ಕಂತೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚಿಸುತ್ತಿಲ್ಲ. ಇವೆಲ್ಲದರ ಒಟ್ಟು ಪರಿಣಾಮ ಎಂದರೆ ಉತ್ತಮ ಆರೋಗ್ಯ ಸೇವೆ ಎಂಬುದು ರೋಗಿಗಳ ಕೈಗೆಟುಕದಂತಾಗಿದೆ.

ಇಸವಿ 2025 ಕ್ಕೆ ಕ್ಷಯ ರೋಗ(ಟಿಬಿ) ವನ್ನು ನಿವಾರಿಸುವ ವಿಷಯದಲ್ಲಿ ವಾಸ್ತವ ಏನೆಂದರೆ, ಸ್ವತಃ ಸರಕಾರದ ಸಮೀಕ್ಷೆಯೇ ಹೇಳುತ್ತಿರುವಂತೆ 2021 ರ ಹೊತ್ತಿನಲ್ಲಿ ಕ್ಷಯರೋಗದ ಸ್ಪಷ್ಟ ಲಕ್ಷಣಗಳಿದ್ದ ಜನರಲ್ಲಿ ಶೇ.60 ರಷ್ಟು ಜನರನ್ನು ಗುರುತಿಸುವುದೇ ಸಾಧ್ಯವಾಗಿಲ್ಲ. ಇನ್ನು ರೋಗವನ್ನು ನಿರ್ಮೂಲನೆ ಮಾಡುವ ಮಾತೆಲ್ಲಿಯದು!!

ರಕ್ತಹೀನತೆಗೆ ಸಂಬಂಧಿಸಿದ ಅನುವಂಶಿಕ ಕಾಯಿಲೆಯಾದ 'ಸಿಕ್ಕಲ್ ಸೆಲ್' ರೋಗವನ್ನು ಸಂಪೂರ್ಣ ನಿವಾರಿಸುವ 'ನ್ಯಾಷನಲ್ ಸಿಕ್ಕಲ್ ಸೆಲ್ ಎಲಿಮಿನಿನೇಷನ್ ಮಿಷನ್'ನ ಪ್ರಚಾರದ ವಿಷಯಕ್ಕೆ ಬಂದರೆ, ಪ್ರಸ್ತುತ ಈ ಕಾಯಿಲೆ ಇರುವ ಬಹಳಷ್ಟು ಮಕ್ಕಳು ರೋಗ ಪತ್ತೆಗೆ ಮುಂಚೆಯೇ ಸಾಯುತ್ತಿವೆ ಮತ್ತು ಬದುಕಿ ಉಳಿಯುವ ಮಕ್ಕಳಿಗೆ ಚಿಕಿತ್ಸೆಯ ಅನುಕೂಲ ದೊರಕುತ್ತಿಲ್ಲ.

'ರಾಷ್ಟ್ರೀಯ ಆರೋಗ್ಯ ಮಿಷನ್'

ನಿಜವಾದ ಬೆಲೆಗಳನ್ನು ಪರಿಸ್ಥಿತಿಯನ್ನು ಪರಿಶೀಲಿಸಿದರೆ ಕೇಂದ್ರದ ಅನುದಾನದ ಪ್ರಮಾಣವು ಸ್ಥಗಿತಗೊಂಡಿದೆ. ಹೀಗಾಗಿ ಈ ಹಿಂದೆ ನೀಡಲಾಗುತ್ತಿದ್ದ ಆರೋಗ್ಯ ಸೇವೆ ಹಾಗೂ ಔಷಧಗಳ ವೆಚ್ಚದಲ್ಲಿನ ಏರಿಕೆಯನ್ನು ಸಹ ನಿಭಾಯಿಸಲು ಆಗುತ್ತಿಲ್ಲ. ಉತ್ತಮ 'ರಾಷ್ಟ್ರೀಯ ಆರೋಗ್ಯ ನೀತಿ'ಗಾಗಿ ಕೇಂದ್ರ ಸರಕಾರವು ಒಟ್ಟು ರಾಷ್ಟ್ರೀಯ ಉತ್ಪನ್ನದ (ಜಿಡಿಪಿಯ) ಶೇ.1.5 ರಷ್ಟನ್ನು ಆರೋಗ್ಯಕ್ಕೆ ಮೀಸಲಿಸಡಬೇಕಿದೆ. ಆದರೆ ಅದು ಈಗ ಕೇವಲ ಶೇ. 0.3 ಮಾತ್ರ ಇದೆ. ಇದು ಒಕ್ಕೂಟ ಸರಕಾರದ ಬಜೆಟ್‌ನ ಶೇ. 2 ಕ್ಕಿಂತಲೂ ಕಡಿಮೆ ಇದೆ. ಇದರಲ್ಲಿ ಗಣನೀಯ ಪ್ರಮಾಣದ ಹಣವನ್ನು ಖಾಸಗಿ ರಂಗಕ್ಕೆ ವರ್ಗಾವಣೆ ಮಾಡುತ್ತಿರುವುದು ಸಹ ನಡೆದಿದೆ. ಇದು ಹಿಂಬಾಗಿಲಿನ ಮೂಲಕ ಜಾರಿಗೆ ತರುತ್ತಿರುವ ಖಾಸಗೀಕರಣವಾಗಿದೆ.

ಕೇಂದ್ರ ಸರಕಾರವು ಸಕ್ರಿಯ ನೇರ ಖಾಸಗೀಕರಣಕ್ಕೆ ಸಹ ಬಹಳವೇ ಶ್ರಮಿಸಿದೆ. 'ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ'ವು ಜಿಲ್ಲಾ ಆಸ್ಪತ್ರೆಗಳು ಮತ್ತು ಇತರ ಸರಕಾರಿ ಸೌಲಭ್ಯಗಳನ್ನು ಹೇಗೆ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೊರಗುತ್ತಿಗೆ ಕೊಡಬಹುದು ಎಂಬ ಬಗೆಗೆ ಒಂದು ಮಾದರಿ ಒಪ್ಪಂದವನ್ನು ರೂಪಿಸಿದೆ. ಈ ವಿಷಯದಲ್ಲಿ ರಾಜ್ಯ ಸರಕಾರಗಳೂ ಸಹ ಹೀಗೆಯೇ ಮಾಡಬೇಕೆಂದು ಒತ್ತಾಯಿಸುತ್ತಿದೆ. ಹಾಗೆಯೇ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಖಾಸಗೀಕರಣಕ್ಕೂ ಪ್ರೋತ್ಸಾಹಿಸುತ್ತಿದೆ.

ಕೇಂದ್ರ ಸರಕಾರವು ಉದ್ದೇಶಪೂರ್ವಕವಾಗಿ ವಿಶ್ವಾಸಾರ್ಹ ಅಂಕಿ–ಅಂಶ–ಮಾಹಿತಿಗಳು ಮುಂತಾದ ಸಾಕ್ಷ್ಯಗಳು ಸಿಗದಂತೆ ಮಾಡುತ್ತಿದ್ದರೂ ಸಹ, ಜಾಗತಿಕ ಹಸಿವು(ನಿವಾರಣೆ) ಸೂಚ್ಯಂಕದಲ್ಲಿ ಭಾರತವು 125 ದೇಶಗಳ ಪಟ್ಟಿಯಲ್ಲಿ 111 ನೇ ಸ್ಥಾನದಲ್ಲಿದೆ ಎಂಬುದಂತೂ ಎಲ್ಲರಿಗೂ ತಿಳಿದಿದೆ.

ದೇಹಸವೆತಕ್ಕೆ ಸಂಬಂಧ ಪಟ್ಟದ್ದೇ ಇರಲಿ, ಅಥವಾ ಕುಂಠಿತ ಬೆಳವಣಿಗೆಯ ವಿಷಯವೇ ಆಗಿರಲಿ ಎಲ್ಲ ಅಂಕಿ–ಅಂಶ, ಸೂಚ್ಯಂಕಗಳು ಒಂದೋ ಸ್ಥಗಿತಗೊಂಡಿವೆ ಅಥವಾ ಇನ್ನಷ್ಟು ದುರವಸ್ಥೆಗಿಳಿದಿವೆ. ಯಾವ ಸೂಚಕವೂ ಪ್ರಗತಿ ತೋರಿಸುತ್ತಿಲ್ಲ. ಕಳೆದ 8 ವರ್ಷಗಳಲ್ಲಿ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತವು 0.5 ಅಂಶಗಳಷ್ಟು ಮಾತ್ರವೇ ಸುಧಾರಣೆಗೊಂಡಿದೆ. ಅದಕ್ಕಿಂತಲೂ ಹಿಂದಿನ 8 ವರ್ಷಗಳಲ್ಲಿ ಈ ಪ್ರಮಾಣದ 12 ಪಟ್ಟು ಸುಧಾರಣೆಯಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕಿದೆ. (ಮಾಹಿತಿ – ದಿ ಹಿಂದೂ ಅಕ್ಟೋಬರ್, 2023)

ಇಸವಿ 2017–18 ರಿಂದ ಭಾರತೀಯರ ಸರಾಸರಿ ಜೀವಿತಾವಧಿಯು ಸ್ಥಗಿತಗೊಂಡಿದೆ. ಇಸವಿ 2021 ರಲ್ಲಿ ಸಾಂಕ್ರಾಮಿಕ ರೋಗದ ಕಾರಣ ಜೀವಿತಾವಧಿ ಕುಸಿಯಿತು. ವಿಶ್ವ ಆರೋಗ್ಯ ಸಂಸ್ಥೆಯ ಲೆಕ್ಕಾಚಾರಗಳಂತೆ, ಕೊರೊನಾ ಮಹಾಸೋಂಕಿನಿಂದ ಭಾರತದಲ್ಲಿ 47 ಲಕ್ಷದಷ್ಟು ಹೆಚ್ಚುವರಿ ಸಾವುಗಳು ಸಂಭವಿಸಿವೆ. ಇದು ಇಡೀ ಜಗತ್ತಿನಲ್ಲೇ ಅತ್ಯಧಿಕ.

ಸರಕಾರವು ಆರೋಗ್ಯ ಸಂಬಂಧಿತವಾದ ಪ್ರಮುಖ ವೈಜ್ಞಾನಿಕ ಮೂಲದ ಮಾಹಿತಿ, ಅಂಕಿ–ಸಂಖ್ಯೆಗಳನ್ನು ಒಂದೋ ಮುಚ್ಚಿಹಾಕಿದೆ ಇಲ್ಲವೇ ಅವುಗಳ ಪ್ರಕಟಣೆಗೆ ಅನಗತ್ಯ ವಿಳಂಬ ಮಾಡಿದೆ. ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಸಬೇಕಾಗಿದ್ದ ಜನಗಣತಿಯನ್ನು ನಡೆಸಿಲ್ಲ. ಮಾತ್ರವಲ್ಲ, ವಾರ್ಷಿಕವಾದ ಮತ್ತು ಲಭ್ಯವಿರುವ 'ನಾಗರೀಕ ನೋಂದಣಿ ವ್ಯವಸ್ಥೆ(ಸಿ.ಆರ್.ಎಸ್.)ಯ ದತ್ತಾಂಶಗಳು ಮತ್ತು ಸ್ಯಾಂಪಲ್ ನೋಂದಣಿ ವ್ಯವಸ್ಥೆ(ಎಸ್.ಆರ್.ಎಸ್.)ಯ ದತ್ತಾಂಶ ಗಳನ್ನು ಸಹ 2020 ರ ನಂತರ ಪುಟ 15 ಕ್ಕೆ

ಸಂಪಾದಕೀಯ

ಬರ ಪರಿಹಾರ ಬಿಡುಗಡೆ:

ಮೋದಿಯವರ ಹೆಚ್ಚುಗಾರಿಕೆ ಏನಿಲ್ಲ. ಸಿಗಬೇಕಾದ ನ್ಯಾಯವಿನ್ನೂ ಸಿಗಲಿಲ್ಲ.

ಕೊನೆಗೂ ಕರ್ನಾಟಕ ರಾಜ್ಯಕ್ಕೆ ಭಾರತ ಒಕ್ಕೂಟ ಸರಕಾರವು 3,498 ಕೋಟಿ ರೂಪಾಯಿಗಳ ಬರ ಪರಿಹಾರವನ್ನು ಬಿಡುಗಡೆ ಮಾಡಿದೆ. ಚುನಾವಣಾ ಕೆಲಸಗಳ ಒತ್ತಡಗಳೇನೇ ಇದ್ದರೂ ರಾಜ್ಯ ಸರಕಾರವು ಪರಿಹಾರದ ಕೆಲಸಗಳನ್ನು ಚುರುಕುಗೊಳಿಸಬೇಕು. ಬರ ಪೀಡಿತ ಜನತೆಯ ನೋವುಗಳಿಗೆ ಸಾಂತ್ವನ ಒದಗಿಸಬೇಕು. ಈ ಬರ ಪರಿಹಾರ ಬಿಡುಗಡೆಯಾದ ಕೂಡಲೇ ಬಿಜೆಪಿ ಪಕ್ಷದ ರಾಜ್ಯ ಮುಖಂಡರು, ಎಂತಹ ಚುನಾವಣಾ ಒತ್ತಡಗಳ ನಡುವೆಯೂ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಕರ್ತವ್ಯ ಮರೆತಿಲ್ಲ, ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡುವುದನ್ನು ತಪ್ಪಿಸಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಹೊಗಳಿದ್ದಾರೆ. ಇನ್ನು ಕೆಲವರು ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರಕ್ಕೆ ಶಹಬ್ಬಾಸ್ ಗಿರಿ ಕೊಟ್ಟಿದ್ದಾರೆ. ಇದು ಬರ ಪರಿಹಾರದ ವಿಷಯದಲ್ಲಿ ಜನರ ಕಣ್ಣಿಗೆ ಮಂಕುಬೂದಿ ಎರಚುವ ಪ್ರಯತ್ನ ಎನ್ನದೇ ಬೇರೆ ದಾರಿಯಿಲ್ಲ.

ರಾಜ್ಯದ 240 ತಾಲೂಕುಗಳ ಪೈಕಿ 223 ತಾಲೂಕುಗಳು ಬರಪೀಡಿತವಾಗಿರುವುದು ಅವುಗಳಲ್ಲಿ 196 ತಾಲೂಕುಗಳು ತೀವ್ರ ಬರದ ಪರಿಸ್ಥಿತಿಯನ್ನು ಎದುರಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ಬರ ಪರಿಹಾರ ನೀಡಬೇಕೆಂದು ರಾಜ್ಯ ಸರಕಾರದ ಸಚಿವರುಗಳ ನಿಯೋಗ ಕಳೆದ 2023 ರ ಅಕ್ಟೋಬರ್ ತಿಂಗಳಿನಲ್ಲಿಯೇ ದೆಹಲಿಗೆ ತೆರಳಿ ಒಕ್ಕೂಟ ಸರಕಾರಕ್ಕೆ ಮನವಿ ಸಲ್ಲಿಸಿತ್ತು. ಬರ ಪರಿಸ್ಥಿತಿಯ ಪರಿಷ್ಕೃತ ಅಂದಾಜಿನಂತೆ 48.19 ಲಕ್ಷ ಹೆಕ್ಟೇರ್ ನಲ್ಲಿ ಅಂದಾಜು 38,000 ಕೋಟಿ ರೂ. ಮೌಲ್ಯದಷ್ಟು ಬೆಳೆ ನಷ್ಟ ಉಂಟಾಗಿದ್ದು, ಇದಕ್ಕೆ ಪರಿಹಾರವಾಗಿ 18,171 ಕೋಟಿ ಪರಿಹಾರವನ್ನು ಕೋರಿ ರಾಜ್ಯ ಸರಕಾರವು ಮನವಿ ಮಾಡಿತ್ತು. ಆ ನಂತರ ಒಕ್ಕೂಟ ಸರಕಾರದ ತಜ್ಞರ ತಂಡವೇ ರಾಜ್ಯಕ್ಕೆ ಬಂದು ಬರ ಪರಿಸ್ಥಿತಿಯ ಖುದ್ದು ಸಮೀಕ್ಷೆಗಳನ್ನು ಮಾಡಿಕೊಂಡು ಹೋಯಿತು. ಇದಾಗಿ ನಾಲ್ಕೈದು ತಿಂಗಳುಗಳ ನಂತರವೂ ಒಂದೇ ಒಂದು ರೂಪಾಯಿ ಬರಪರಿಹಾರವೂ ರಾಜ್ಯಕ್ಕೆ ಬಿಡುಗಡೆಯಾಗಲಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಮುಖ್ಯಮಂತ್ರಿ, ಮಂತ್ರಿಗಳಾದಿಯಾಗಿ ದೆಹಲಿಯಲ್ಲಿ ಪ್ರತಿಭಟನೆಯನ್ನೂ ನಡೆಸಲಾಗಿತ್ತು.

ರಾಜ್ಯಕ್ಕೆ ಎನ್.ಡಿ.ಆರ್.ಎಫ್.ನಿಂದ ಮೊದಲ ಹಂತದಲ್ಲಿ 4,663 ಕೋಟಿ ರೂಪಾಯಿ ಬರ ಪರಿಹಾರ ನೀಡಲು ಮನವಿ ಮಾಡಿದ್ದರೂ ಏನೂ ಪ್ರಯೋಜನವಾಗಿರಲಿಲ್ಲ. ಚುನಾವಣಾ ಪ್ರಚಾರದಲ್ಲಿ ಈ ಅನ್ಯಾಯದ ವಿಷಯ ತೀವ್ರವಾಗಿ ಚರ್ಚೆಯಾಗುವ ಸನ್ನಿವೇಶ ಬಂದಾಗ ಮೊದಲಿಗೆ ಬಿಜೆಪಿ ನಾಯಕರು ರಾಜ್ಯ ಸರಕಾರವು ಬರ ಪರಿಹಾರವನ್ನು ಕೋರುವ ಮನವಿಯನ್ನು ಬಹಳ ತಡವಾಗಿ ಕೊಟ್ಟಿರುವುದೇ ಪರಿಹಾರ ಬಿಡುಗಡೆಯಾಗದಿರಲು ಕಾರಣ ಎಂದು ಸುಳ್ಳುಗಳನ್ನು ಹೇಳಿದರು. ಈ ವಿಷಯದಲ್ಲಿ ರಾಜ್ಯದ ಜನತೆ ಆಕ್ರೋಶಗೊಳ್ಳಬಹುದು, ಚುನಾವಣೆಯಲ್ಲಿ ಬಿಜೆಪಿ ಕೂಟಕ್ಕೆ ಹೊಡೆತ ಬೀಳಬಹುದು ಎಂದು ಮನವರಿಕೆಯಾದ ಮೇಲೆ ಬಿಜೆಪಿ ರಾಷ್ಟ್ರೀಯ ನಾಯಕರೇ, ಬರ ಪರಿಹಾರ ಬಿಡುಗಡೆ ಮಾಡಲು ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗಿದೆ ಎಂದು ಹಸಿ ಹಸಿ ಸುಳ್ಳುಗಳನ್ನು ಹೇಳಿದರು. ಈ ನಡುವೆ ರಾಜ್ಯ ಸರಕಾರವು ಬರ ಪರಿಹಾರದ ವಿಷಯದಲ್ಲಿ ರಾಜ್ಯಕ್ಕೆ ನ್ಯಾಯವನ್ನು ಕೋರಿ ಸುಪ್ರೀಂ ಕೋರ್ಟಿನ ಮೆಟ್ಟಿಲು ಹತ್ತಿತ್ತು. ಕೊನೆಗೆ ಸುಪ್ರೀಂ ಕೋರ್ಟ್ ಚಾಟಿ ಬೀಸಿದ್ದರ ಪರಿಣಾಮವಾಗಿ ಈಗ ಒಕ್ಕೂಟ ಸರಕಾರ ಬರ ಪರಿಹಾರವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ನರೇಂದ್ರ ಮೋದಿಯವರ ಕರ್ತವ್ಯ ಪ್ರಜ್ಞೆಯಾಗಲಿ, ಅಥವಾ ಒಕ್ಕೂಟ ಸರಕಾರದ ಹೆಚ್ಚುಗಾರಿಕೆಯಾಗಲಿ ಏನೂ ಇಲ್ಲ.

ಅಸಲಿಗೆ ಒಕ್ಕೂಟ ಸರಕಾರ ರಾಜ್ಯಗಳಿಗೆ ಯಾಕೆ ಬರ ಪರಿಹಾರವನ್ನು ಕೊಡುತ್ತಿಲ್ಲ ಎಂಬುದು ಜನತೆಗೆ ತಿಳಿಯಬೇಕಿದೆ. ಬರ ಪರಿಹಾರದ ವಿಚಾರದಲ್ಲಿ ಒಕ್ಕೂಟ ಸರಕಾರವು ಬಹಳ ಕ್ರೂರವಾಗಿ ನಡೆದುಕೊಳ್ಳುತ್ತಿದೆ. ಬರ ಪರಿಹಾರದ ಮಾನದಂಡಗಳನ್ನು ಬದಲಾಯಿಸಿರುವ ಒಕ್ಕೂಟ ಸರಕಾರ ಬರ ಪರಿಹಾರದ ಬಹುತೇಕ ಜವಾಬ್ದಾರಿಯನ್ನು ರಾಜ್ಯ ಸರಕಾರಗಳ ಹೆಗಲ ಮೇಲೆ ಹೇರಿ ತಾನು ನಿರುಮ್ಮಳವಾಗಿ ಇರಲು ಬಯಸಿದೆ. ಇದು ಭಾರತ ಒಕ್ಕೂಟ ಸ್ವರೂಪಕ್ಕೆ ಮಾರಕವಾದ ಮತ್ತು ಒಕ್ಕೂಟ ತತ್ವದ ಆಶಯಗಳಿಗೆ ವಿರುದ್ಧವಾದ ಧೋರಣೆ. ಇದರ ಜೊತೆಗೆ ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಅಗತ್ಯ ಅನುದಾನ, ತೆರಿಗೆ ಪಾಲು ನೀಡದೇ ಅವುಗಳ ಉಸಿರುಗಟ್ಟಿಸಬೇಕು, ವಿರೋಧ ಪಕ್ಷಗಳಿಗೆ ಜನ ಬೆಂಬಲವಿಲ್ಲದಂತೆ ಮಾಡಿ ಅವುಗಳನ್ನು ಸೊರಗಿಸಬೇಕು ಎಂಬ ದುಷ್ಟ ಧೋರಣೆಯೂ ಈ ನಿರಾಕರಣೆಯ ಹಿಂದಿದೆ.

ಹೊಸ ಮಾನದಂಡಗಳು:

ಬರ ಎಂಬುದನ್ನು ನಿರ್ಧರಿಸುವ ಹೊಸ ಮಾನದಂಡಗಳ ಪ್ರಕಾರ 'ಸಾಧಾರಣ ಬರಗಾಲ'ಗಳಿಗೆಲ್ಲಾ ಒಕ್ಕೂಟ ಸರಕಾರ ಯಾವ ಪರಿಹಾರವನ್ನು ನೀಡುವ ಬಾಧ್ಯತೆ ಹೊಂದಿಲ್ಲ. ಇನ್ನು ಹೊಸ ಮಾನದಂಡಗಳಂತೆ ಎಂತಹ ಬರಗಾಲವೂ 'ತೀವ್ರ ಬರಗಾಲ' ಎನಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಮಳೆ ಕೊರತೆ – ಬೆಳೆ ನಷ್ಟವನ್ನು ಲೆಕ್ಕ ಹಾಕುವ ವಿಚಾರದಲ್ಲಿ ಒಕ್ಕೂಟ ಸರಕಾರದ ಹೊಸ ಮಾನದಂಡವು ಮುಖ್ಯವಾಗಿ ಬಿತ್ತನೆಯಾದ ಒಟ್ಟು ಪ್ರದೇಶವನ್ನು ಪರಿಗಣಿಸುವಂತೆ ಬದಲಾವಣೆಗಳನ್ನು ತಂದಿದೆ. ಅಂದರೆ ಮಳೆ ಕೊರತೆಯಿಂದ ಬಿತ್ತನೆಯೇ ಆಗದ ಪ್ರದೇಶಗಳ ರೈತರಿಗೆ ಪರಿಹಾರವಿಲ್ಲ.!! ಇನ್ನು ಉಪಗ್ರಹ ಸಮೀಕ್ಷೆಯ ತಂತ್ರಜ್ಞಾನದ ಮೂಲಕವೂ ಒಕ್ಕೂಟ ಸರಕಾರ ರೈತರಿಗೆ ಅನ್ಯಾಯ ಮಾಡಲು ಹೊರಟಿದೆ. ಉಪಗ್ರಹ ಸಮೀಕ್ಷೆಗಳ ಮೂಲಕ ಹಸಿಬರವನ್ನು ಅಂದಾಜು ಮಾಡುವುದು ಸಾಧ್ಯವಿಲ್ಲ. ಹಸಿ ಬರದ ಪರಿಸ್ಥಿತಿಯಲ್ಲಿ ಹೊಲ–ಗದ್ದೆಗಳಲ್ಲಿ ಮೇಲ್ನೋಟಕ್ಕೆ ಹಸಿರು ಕಾಣುತ್ತದೆ. ಆದರೆ ಸಕಾಲಿಕ ಮಳೆ ಕೊರತೆಯ ಕಾರಣದಿಂದ ಗಿಡ–ಪೈರುಗಳಲ್ಲಿ ಫಲ ದೊರೆಯುವುದಿಲ್ಲ. ಹಲವು ಸಂದರ್ಭಗಳಲ್ಲಿ ಬೆಳೆ ಕೈಗೆ ಬಂದರೂ, ಕೃಷಿ ಉತ್ಪನ್ನದ ಪ್ರಮಾಣ ಮತ್ತು ಗುಣಮಟ್ಟ ತೀವ್ರವಾಗಿ ಕುಸಿದಿರುತ್ತದೆ. ಆದರೆ ಒಕ್ಕೂಟ ಸರಕಾರ ಉಪಗ್ರಹ ಸಮೀಕ್ಷೆಯನ್ನೇ ಆಧರಿಸಿದೆ. ಇಷ್ಟು ಮಾತ್ರವಲ್ಲ. ಒಕ್ಕೂಟ ಸರಕಾರವು ಬರ ಪರಿಹಾರ ಎಂಬುದು ಬಹುತೇಕ ರಾಜ್ಯ ಸರಕಾರಗಳ ಜವಾಬ್ದಾರಿ ಎಂದು ಹೊಣೆಯನ್ನು ರಾಜ್ಯಗಳ ಹೆಗಲ ಮೇಲೆ ಹಾಕಿದೆ. ಈ ಒಟ್ಟು ಧೋರಣೆಯೇ ಅಮೂಲಾಗ್ರವಾಗಿ ಬದಲಾಗಬೇಕಿದೆ.

ರಾಜ್ಯದ ಬರ ಪರಿಸ್ಥಿತಿಯ ತೀವ್ರತೆಯನ್ನು ಗಮನಿಸಿದರೆ, ಈಗ ನೀಡಲಾಗಿರುವ ಪರಿಹಾರ ಏನೇನು ಸಾಲದು. ಈ ಪರಿಹಾರವನ್ನು ಮಧ್ಯಂತರ ಪರಿಹಾರ ಎಂದು ಪರಿಗಣಿಸಿ ಒಕ್ಕೂಟ ಸರಕಾರವು ಅಗತ್ಯ ಪ್ರಮಾಣದ ಬರ ಪರಿಹಾರವನ್ನು ಬಿಡುಗಡೆ ಮಾಡಬೇಕು. ಬರ ಪರಿಹಾರ ನೀಡಿಕೆಯಲ್ಲಿ ಕೀಳು ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು. ●

ಹಾಸನ–ಲೈಂಗಿಕ ದೌರ್ಜನ್ಯದ ಅಘಾತಕಾರಿ ಹಗರಣ:

ಆರೋಪಿ ಪ್ರಜ್ವಲ್ ರೇವಣ್ಣರನ್ನು ಬಂಧಿಸಿ ಮಹಿಳೆಯರ ಘನತೆ ಕಾಪಾಡಿ

ಈ ವಾರ

ಹಾಸನದ ಜೆಡಿ(ಎಸ್) ಸಂಸದ ಪ್ರಜ್ವಲ್ ರೇವಣ್ಣ ನಡೆಸಿದ್ದಾರೆ ಎಂಬುದು ಬಹುತೇಕ ಖಚಿತ ಎಂಬಂತೆ ಕಾಣುತ್ತಿರುವ ಬಹುದೊಡ್ಡ ಲೈಂಗಿಕ ದೌರ್ಜನ್ಯದ ಹಗರಣವೊಂದು ಸ್ಫೋಟಗೊಂಡಿದೆ. ವಿಷಯದ ಆಳ–ಅಗಲ ಅರಿಯಬಲ್ಲ ಸ್ಥಳೀಯರ ಮೂಲಕ, ಹಾಗೂ ಸಾಮಾಜಿಕ ಮಾಧ್ಯಮಗಳು, ಪ್ರಧಾನ ಧಾರೆಯ ಮಾಧ್ಯಮಗಳಲ್ಲೂ ಹಗರಣದ ಕುರಿತು ಬಯಲಾಗುತ್ತಿರುವ ಮಾಹಿತಿಗಳು ಅಘಾತಕಾರಿಯಾಗಿವೆ. ಈ ಹಗರಣಕ್ಕೆ ಸಂಬಂಧಿಸಿದ ವಿಡಿಯೋಗಳನ್ನು 'ಪೆನ್ ಡ್ರೈವ್'ನಂತಹ ಸಾಧನಗಳ ಮೂಲಕ ಜನರ ನಡುವೆ, ಅದರಲ್ಲಿಯೂ ಹಾಸನದ ಜನರ ನಡುವೆ ವ್ಯಾಪಕವಾಗಿ ಹರಡಲಾಗಿದೆ.

ಇದೊಂದು ಬಹಳ ಸೂಕ್ಷ್ಮವಾದ ಮತ್ತು ಅಷ್ಟೇ ಗಂಭೀರವಾದ ಪ್ರಕರಣ. ಲಭ್ಯವಾಗುತ್ತಿರುವ ವಿಶ್ವಾಸಾರ್ಹ ಮಾಹಿತಿಗಳ ಪ್ರಕಾರ ಪೆನ್ ಡ್ರೈವ್‌ನಲ್ಲಿ ಸುಮಾರು 2,900 ಕ್ಕೂ ಹೆಚ್ಚು ವಿಡಿಯೋಗಳಿವೆ. ವಿಡಿಯೋಗಳಲ್ಲಿ ನೂರಾರು ಮಹಿಳೆಯರ ಜೊತೆಗೆ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಕ್ರಿಯೆ ನಡೆಸಿರುವ ದೃಶ್ಯಾವಳಿಗಳಿವೆ. ಇವುಗಳಲ್ಲಿ ಹಲವಾರು ವಿಡಿಯೋಗಳಲ್ಲಿ ವಿಕೃತ ರೀತಿಯಲ್ಲಿ, ದೌರ್ಜನ್ಯಕಾರಿ ರೀತಿಯಲ್ಲಿ ನಡೆದಿರುವ ಲೈಂಗಿಕ ಚಟುವಟಿಕೆಗಳಿವೆ ಎಂದು ಹೇಳಲಾಗಿದೆ.

ಆರೋಪಿ ಹಾಸನದ ಮತ್ತು ರಾಜ್ಯದ ಒಂದು ಪ್ರಭಾವಶಾಲಿ ರಾಜಕೀಯ ಕುಟುಂಬಕ್ಕೆ ಸೇರಿರುವ ವ್ಯಕ್ತಿ. ಪ್ರಜ್ವಲ್ ರೇವಣ್ಣ ತನ್ನ ಮತ್ತು ತನ್ನ ಕುಟುಂಬದ ಅಧಿಕಾರ ಬಲ, ಹಣ ಬಲ, ಖ್ಯಾತಿ ಎಲ್ಲವನ್ನೂ ಬಳಸಿ, ಆಮಿಷ, ಒತ್ತಡ, ಬೆದರಿಕೆ, ಕುತಂತ್ರಗಳ ಮೂಲಕ ಜಿಲ್ಲೆಯ ನೂರಾರು ಜನ ಮಹಿಳೆಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿರುವುದು ಈ ಪ್ರಕರಣದಲ್ಲಿ ಕಂಡು ಬಂದಿದೆ. ಹಾಸನ ಜಿಲ್ಲೆಯ ಉದ್ಯೋಗಿಗಳು, ಪತ್ರಕರ್ತೆಯರು, ಅಧಿಕಾರಿಗಳು, ಮಹಿಳಾ ಪೋಲಿಸ್ ಸಿಬ್ಬಂದಿ, ತನ್ನದೇ ಪಕ್ಷದ ಮಹಿಳಾ ಕಾರ್ಯಕರ್ತೆಯರು, ಕೊನೆಗೆ ತನ್ನ ಮನೆ ಕೆಲಸದ ಮಹಿಳೆ ಮತ್ತು ಆಕೆಯ ಮಗಳನ್ನೂ ಬಿಡದೇ ಲೈಂಗಿಕ ದೌರ್ಜನ್ಯ ನಡೆಸಿ, ಘಟನಾವಳಿಗಳ ದೃಶ್ಯಗಳನ್ನು ಚಿತ್ರೀಕರಿಸಿಕೊಂಡಿರುವುದು ಈ ವಿಡಿಯೋಗಳಲ್ಲಿ ದಾಖಲಾಗಿದೆ ಎಂದು ವರದಿಗಳು ಹೇಳುತ್ತವೆ.

ಒಬ್ಬ ವ್ಯಕ್ತಿ, ಜನತೆಗೆ, ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ರಕ್ಷಣೆ, ನ್ಯಾಯ ಒದಗಿಸುವುದರಲ್ಲಿ ಮುಂಚೂಣಿಯಲ್ಲಿರಬೇಕಾದ ಜನಪ್ರತಿನಿಧಿಯು ನೂರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳನ್ನು ನಡೆಸುವುದು. ಮತ್ತು ಆ ದೃಶ್ಯಗಳನ್ನು ಚಿತ್ರೀಕರಿಸಿ ಸಂಗ್ರಹಿಸಿಟ್ಟುಕೊಳ್ಳುವುದು ಒಂದು ಘೋರ ವಿಕೃತಿಯ ದುಷ್ಟ ಮನೋಭಾವ ಮತ್ತು ದುರುದ್ದೇಶಪೂರ್ವಕವಾಗಿ ಎಸಗಿರುವ ಹೀನ ಅಪರಾಧ.

ಇಲ್ಲಿ ಮತ್ತೊಂದು ಕಳವಳಕಾರಿ ವಿಚಾರವಿದೆ. ಲೈಂಗಿಕ ದೌರ್ಜನ್ಯದ ವಿಡಿಯೋಗಳನ್ನು ಜನರ ನಡುವೆ ಪ್ರಸಾರ ಮಾಡುವ ಮೂಲಕ, ಬಲಾಢ್ಯ ಜನಪ್ರತಿನಿಧಿಯ ಒತ್ತಡ, ಒತ್ತಾಯ, ಬೆದರಿಕೆಗಳಿಗೆ ಮಣಿದು ಇಲ್ಲಿ ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗಿರುವ ಮತ್ತು ಒಡ್ಡಿಕೊಂಡಿರುವ ನೂರಾರು ಅಸಹಾಯಕ ಮಹಿಳೆಯರ ಘನತೆಗೆ ಧಕ್ಕೆ ತರಲಾಗಿದೆ. ಹೀಗಾಗಿ ತುರ್ತಾಗಿ ಈ ಸಂತ್ರಸ್ತ ಮಹಿಳೆಯರ ಖಾಸಗಿತನ ಮತ್ತು ಘನತೆಯನ್ನು ಕಾಪಾಡುವ ಕೆಲಸ ಆಗಬೇಕಿದೆ. ಈ ವಿಷಯದಲ್ಲಿ ಯಾರೇ ಅಸೂಕ್ಷ್ಮವಾಗಿ ನಡೆದುಕೊಂಡರೂ, ಅಸಹಾಯಕ ಮಹಿಳೆಯರು ಇನ್ನಷ್ಟು ತಲ್ಲಣಕ್ಕೆ ತುತ್ತಾಗುತ್ತಾರೆ ಮತ್ತು ಅನಾಹುತಗಳೂ ಸಂಭವಿಸಬಹುದಾದ ಸಾಧ್ಯತೆಗಳಿವೆ. ಹಾಗಾಗ ಕೂಡದು.

ಸಂಸದ ಪ್ರಜ್ವಲ್ ರೇವಣ್ಣ, ಅಲ್ಲದೇ, ಆತನ ತಂದೆ ಜೆಡಿ(ಎಸ್) ಹಿರಿಯ ಮುಖಂಡ ಮಾಜಿ ಸಚಿವ ಎಚ್.ಡಿ. ರೇವಣ್ಣ ಸಹ ತನಗೆ ಮತ್ತು ತನ್ನ ಮಗಳಿಗೆ ಲೈಂಗಿಕ ಕಿರುಕುಳ ನೀಡಿ ದೌರ್ಜನ್ಯ ನಡೆಸಿರುವ ಬಗೆಗೆ, ಅವರ ಮನೆ ಕೆಲಸದ ಮಹಿಳೆಯು ದೂರು ದಾಖಲಿಸಿದ್ದಾರೆ. ರಾಜ್ಯ ಸರಕಾರ ಈ ದೂರಿನ ಸಂಬಂಧ ಇಬ್ಬರ ವಿರುದ್ಧವೂ ಎಫ್.ಐ.ಆರ್. ದಾಖಲಿಸಿದ್ದು, ಲೈಂಗಿಕ ಹಗರಣದ ಕುರಿತು ಎಸ್.ಐ.ಟಿ. ತನಿಖೆಗೆ ಆದೇಶಿಸಿದೆ.

ವಿಡಿಯೋಗಳಲ್ಲಿ ಕಂಡು ಬಂದಿರುವಂತೆ ಸ್ಪಷ್ಟವಾಗಿ ಪ್ರಜ್ವಲನ ದೌರ್ಜನ್ಯದ ಸ್ವರೂಪವು ಅತ್ಯಾಚಾರವಾಗಿದೆ. ಹೀಗಾಗಿ ಅತ್ಯಾಚಾರದ ಕಠಿಣ ಸೆಕ್ಷನ್‌ಗಳಡಿ ದೂರು ದಾಖಲಿಸಿಕೊಂಡು ತಕ್ಷಣ ಪ್ರಜ್ವಲ್‌ನನ್ನು ಬಂಧಿಸಬೇಕಿದೆ. ಈ ಮಧ್ಯೆ ಚುನಾವಣೆ ಮುಗಿದ ಕೂಡಲೇ ಪ್ರಜ್ವಲ್ ವಿದೇಶಕ್ಕೆ ಹೋಗಿರುವುದಾಗಿ ವರದಿಯಾಗಿದ್ದು, ಆರೋಪಿಯನ್ನು ದೇಶಕ್ಕೆ ಕರೆತರುವ ಕೆಲಸವೂ ತುರ್ತಾಗಿ ಆಗಬೇಕಿದೆ. ಈ ಇಬ್ಬರು ಆರೋಪಿಗಳೂ ಬಲಾಢ್ಯ ರಾಜಕಾರಣಿಗಳು. ಪೋಲಿಸ್ ಇಲಾಖೆ ಸೇರಿದಂತೆ ಈ ಪ್ರಭಾವಿ ರಾಜಕಾರಣಿಗಳಿಗೆ ಅನುಕೂಲಕರವಾಗಿ ತಮ್ಮ ಅಧಿಕಾರ ಬಳಸಬಹುದಾದ ಎಲ್ಲ ಸ್ಥಳೀಯ ಅಧಿಕಾರಿಗಳು, ಸಿಬ್ಬಂದಿಗಳನ್ನೂ ದೂರದ ಸ್ಥಳಗಳಿಗೆ ವರ್ಗಾವಣೆ ಮಾಡಬೇಕು. ಸಂತ್ರಸ್ತ ಮಹಿಳೆಯರಿಗೆ ಎಲ್ಲ ಬಗೆಯ ರಕ್ಷಣೆ, ನೆರವು ನೀಡಬೇಕು. ಸಮಗ್ರವಾದ ಮತ್ತು ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕು. ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ವಿಷಯದ ಬಗೆಗೆ ಪ್ರತಿಕ್ರಿಯೆ ನೀಡಿದ ಎಚ್.ಡಿ.ರೇವಣ್ಣ ಇದು ಐದು ವರ್ಷಗಳ ಹಿಂದಿನ ವಿಡಿಯೋಗಳು ಎಂದಿದ್ದಾರೆ. ಈ ಪ್ರಕ್ರಿಯೆಯಲ್ಲಿ, ಹಗರಣದಲ್ಲಿ ಎಚ್.ಡಿ. ರೇವಣ್ಣನವರ ಪಾತ್ರ ಈಗಿನ ಆರೋಪಕ್ಕಿಂತಲೂ ಹೆಚ್ಚಿನದಾಗಿ ಕಂಡು ಬಂದರೆ ಅವರ ಮೇಲೆಯೂ ಇನ್ನೂ ಗಂಭೀರ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಬೇಕು.

ಕರ್ನಾಟಕ ರಾಜ್ಯ ಸರಕಾರ, ಮಹಿಳಾ ಆಯೋಗ, ಪೋಲಿಸ್ ಇಲಾಖೆ ಈ ಪ್ರಕರಣದಲ್ಲಿ ತಮ್ಮ ಪ್ರಬುದ್ಧತೆ, ಪ್ರೌಢಿಮೆಗಳನ್ನು, ದಕ್ಷತೆಯನ್ನು ತೋರಿಸಬೇಕಿದೆ. ಸಂತ್ರಸ್ತ ಮಹಿಳೆಯರನ್ನು ಕಾಪಾಡುವ, ಅವರಿಗೆ ನ್ಯಾಯ ಒದಗಿಸುವ ಕೆಲಸಕ್ಕೆ ವಿಶೇಷ ಆದ್ಯತೆ ನೀಡಬೇಕಿದೆ.

ಬಿಜೆಪಿ ನಾಯಕ ಗಣದ ಆತ್ಮ ವಂಚನೆ

ಕಳೆದ ಮೂರು ತಿಂಗಳ ಹಿಂದೆ ಹಾಸನ ಬಿಜೆಪಿ ಜಿಲ್ಲಾ ಪುಟ 14 ಕ್ಕೆ

ಭಾರತದಲ್ಲಿ ಇಂದು ಹಿಂದುತ್ವ ಶಕ್ತಿಗಳು ಅಧಿಕಾರದಲ್ಲಿವೆ. ಇವರು ಹೆಸರಿಗೆ ಮಾತ್ರ ಸಂವಿಧಾನಕ್ಕೆ ನಿಷ್ಠರಾಗಿರುತ್ತೇವೆ ಎಂದು ಪ್ರತಿಜ್ಞೆ ಮಾಡಿದರೂ, ವಾಸ್ತವದಲ್ಲಿ ಮನುವಾದವೇ ಇವರಿಗೆ ಹೆಚ್ಚು ಮಹತ್ವದ್ದಾಗಿದೆ. ಸನಾತನ ಧರ್ಮ ಎಂದರೆ ಅವರ ದೃಷ್ಟಿಯಲ್ಲಿ ಮನುಧರ್ಮ. ಮನುಧರ್ಮ ಎಂದರೆ ಚಾತುರ್ವರ್ಣ ಪದ್ಧತಿ. ಸನಾತನದ ಬಗ್ಗೆ ಇಸ್ಕಾನ್ ಆಂದೋಲನವು ತನ್ನ ವೆಬ್‌ಸೈಟ್‌ನಲ್ಲಿ ಹೀಗೆ ಬರೆದಿದೆ: "ಧರ್ಮ ಎಂದರೇನು? ಈ ಪದವು ಮನುಸ್ಮೃತಿಯಿಂದ ಬಂದಿದೆ. ನಿನಗೆ ಕೊಟ್ಟ, ನಿನ್ನ ಸಮುದಾಯಕ್ಕೆ ಕೊಟ್ಟ, ನಿನ್ನ ಜಾತಿಗೆ ಕೊಟ್ಟ ಕರ್ತವ್ಯವನ್ನು ನೀನು ಮಾಡಬೇಕು. ಅದು ಧರ್ಮ." ಇದರರ್ಥ ಇಷ್ಟೆ: ಒಂದು ಜಾತಿಯವರು ತನಗಿಂತ ಮೇಲಿನ ಜಾತಿಯವರು ಮಾಡುವ ಕೆಲಸವನ್ನು ತಾವೂ ಮಾಡುವುದನ್ನು ಯೋಚಿಸಲೂ ಬಾರದು. ಅವರು ತನ್ನ ಜಾತಿಗೆ ನಿಗದಿಪಡಿಸಿದ ಕರ್ತವ್ಯವನ್ನು ಮಾತ್ರ ಮಾಡಬೇಕು. ಮನುಧರ್ಮವನ್ನು ಜಾರಿಗೆ ತರುತ್ತೇವೆ ಎಂದು ನೇರವಾಗಿ ಹೇಳುವ ಧೈರ್ಯವನ್ನು ಹಿಂದುತ್ವವಾದಿಗಳು ಮಾಡಲಾರರು. ಆದುದರಿಂದ 'ಸನಾತನ ಧರ್ಮ' ಎಂಬ ಪದವನ್ನು ಮುಂದಿಡುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ, ಸ್ವಾತಂತ್ರ್ಯ ಮತ್ತು ಸಮಾನತೆಗೆ ಬೆಲೆಯೇ ಇಲ್ಲ.

ಏನಿದು 'ಸನಾತನ ಧರ್ಮ'?

ಪುರೋಹಿತರು ಬಂದಿದ್ದು ಸತ್ಯನಾರಾಯಣ ಪೂಜೆ ಮಾಡಲು: ಮಾಡಿದ್ದು 'ಸನಾತನ ಧರ್ಮ ಉಳಿಸಲು ಮತ ಹಾಕಿ' ಎಂಬ ಚುನಾವಣಾ ಭಾಷಣ!!

ಸಿ.ಸಿದ್ದಯ್ಯ

ಮೊದಲು ಆ ಪುರೋಹಿತರು ಮಾಡಿದ ನಾಲ್ಕು ನಿಮಿಷಗಳ ಪುಟ್ಟ 'ಚುನಾವಣಾ ಭಾಷಣ'ದ ಸಾರಾಂಶ ಏನೆಂಬುದನ್ನು ನೋಡೋಣ:

"ನಮ್ಮ ದೇಹ ಎಷ್ಟು ಮುಖ್ಯನೊ ನಮ್ಮ ದೇಶ ಅಷ್ಟೇ ಮುಖ್ಯ. ನಮ್ಮ ದೇಹ ಚೆನ್ನಾಗಿರ್ಲಿ ಅಂತ, ನಮ್ಮ ದೇಹಕ್ಕೆ ಹೊರಗಡೆಯಿಂದ ಕ್ರಿಮಿ ಕೀಟಗಳು, ಕ್ಯಾನ್ಸರ್ ಗಳು ಇತ್ಯಾದಿಗಳು ನಮ್ಮ ಮೇಲೆ ಪ್ರಭಾವ ಬೀರದೇ ಇರ್ಲಿ ಅಂತೇಳಿ, ಆ ಕಾಲಕ್ಕೆ ತಕ್ಕಂತೆ ನಾವು ವೈದ್ಯಕೀಯ ಸಲಹೆಯನ್ನು ತೆಗೆದುಕೊಂಡು, ಅದಕ್ಕೆ ಪರಿಹಾರವನ್ನು ಸಹ ಮಾಡ್ಕೊತ್ತೀವಿ. ಇದು ನಮ್ಮ ದೇಹಕ್ಕಾಯ್ತು. ನಮ್ಮ ದೇಶಕ್ಕೂ ಕೂಡ ಇದೇ ರೀತಿ ಖಾಯಿಲೆ ಬರೊವಂಥ ಪರಿಸ್ಥಿತಿ ಸದಾ ಕಾಲದಿಂದಲೂ ಇದ್ದೇ ಇದೆ. ಇಂದು ನಮ್ಮ ದೇಶಕ್ಕೆ ಮತ್ತೆ ನಮ್ಮ ಸನಾತನ ಧರ್ಮಕ್ಕೆ ಒಂದು ದೊಡ್ಡ ಖಾಯಿಲೆಗಳು ಬರುವಂಥ ಅವಕಾಶಗಳಿವೆ, ಮತ್ತೆ ನಾವು ಪ್ರತಿದಿನ ನೋಡ್ತಾಇದ್ದೀವಿ, ಆ ಖಾಯಿಲೆ ಬಂದಿದೆ.

> **ಧರ್ಮ ಎಂದರೆ ಆ ಕಾಲದಲ್ಲಿ ಸಮಾಜದಲ್ಲಿ ಪ್ರಭುತ್ವ ಸಾಧಿಸಿದವರು ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಮಾಡಿದ ನಿಯಮಗಳು. ಆದಿಕಾಲದಲ್ಲಿ ದೊರೆಗಳು ಮತ್ತು ಆಳುವವರು ಇರಲಿಲ್ಲ. ಈ ಕಾರಣದಿಂದ ಅಂದು ಧರ್ಮ ಎಂಬುದೇ ಇರಲಿಲ್ಲ. ಕೆಲವು ನಂಬಿಕೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು ಮಾತ್ರ ಅಂದು ರೂಪುಗೊಂಡಿದ್ದವು. ಸಮಾಜವನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ ಪ್ರಬಲ ಗುಂಪುಗಳು ರೂಪುಗೊಂಡ ನಂತರ ಧರ್ಮದ ಪ್ರಸ್ತಾಪವು ಮುಂದೆ ಬಂದಿತು.**

ನಮ್ಮ ದೇಶಕ್ಕೂ ಬಂದಿರತಕ್ಕಂಥ, ಮುಂದೆ ಬರತಕ್ಕಂಥ ಖಾಯಿಲೆಯನ್ನು ಪರಿಹಾರ ಮಾಡ್ಕೊಬೇಕು, ಮತ್ತೆ ನಮ್ಮ ಸನಾತನ ಧರ್ಮ ಸದಾ ಉಳಿದಿರಬೇಕು. ನಮ್ಗೆ ನಾವೆಲ್ಲಾ ಚೆನ್ನಾಗಿರ್ಬೇಕು. ಅಂದ್ರೆ ಈವತ್ತಿನ ದಿನ ಸತ್ಯನಾರಾಯಣ ಪೂಜೆ ಚೆನ್ನಾಗಿ ಮಾಡ್ತಿದ್ದೀವಿ ಕೂತ್ಕೊಂಡು. ಧೈರ್ಯದಿಂದ ಮಾಡ್ತಿದ್ದೀವಿ. ಇನ್ನೊಂದು ಹತ್ತು ವರ್ಷ ಕಾಲ ನಾವು ಇದೇ ರೀತಿ ನಿದ್ರೆ ಮಾಡಿದ್ದಾದ್ರೆ, ನಾವು ಈ ಸತ್ಯನಾರಾಯಣ ಪೂಜೆಯನ್ನು ಮಾಡುವಂಥ ಸಮಯದಲ್ಲಿ ಯಾರೋ ಬಂದು ನಮ್ಮನ್ನು ಹೊರಗಡೆ ಎಳೆದಾಕಿ, ನೀವು ಪೂಜೆ ಮಾಡಕೂಡದು, ನೀವು ಇನ್ಮುಂದೆ ಇವೆಲ್ಲ ಆಚರಿಸ್ಬೇಡಿ ಅಂತ ಹೇಳಿ, ನಮ್ಮನ್ನ ಹೊರಗಡೆ ದಬ್ಬುವಂತ ಕಾಲ ಬಂದೇ ಬರುತ್ತೆ. ಅದ್ಯಾವುದೂ ಬರಬಾರದು ಅಂದ್ರೆ, ನಮ್ಮ ದೇಹ ನಾವು ಚೆನ್ನಾಗಿರ್ಬೇಕು ಅಂತ ಹೇಗೆ ಬಯಸುತ್ತೇವೋ ಅದೇ ರೀತಿ, ನಮ್ಮ ದೇಶ ಚೆನ್ನಾಗಿರ್ಬೇಕು, ನಮ್ಮ ಸನಾತನ ಧರ್ಮ ಸದಾ ಹೀಗೇ ಉಳಿದಿರಬೇಕು ಅಂತೇಳಿದ್ರೆ, ಈ ತಿಂಗಳ 26ನೇ ತಾರೀಖು, ಚುನಾವಣೆ ಬರ್ತಾಯಿದೆ. ಚುನಾವಣೆಯಲ್ಲಿ ಮತವನ್ನು ಚಲಾಯಿಸುವುದರ ಮುಖಾಂತರ ಪ್ರತಿಯೊಬ್ಬರು, ಆ ಭಗವಂತನ ಕೃಪೆಗೆ ಪಾತ್ರರಾಗಬೇಕು, ಭಗವಂತನ ಕೃಪೆಗೆ ಅಂದ್ರೆ ಹೇಗಪ್ಪ, ಇದಕ್ಕೂ ಅದಕ್ಕೂ ಏನ್ ಸಂಬಂಧ ಅಂತ ಹೇಳಿದ್ರೆ, ನಮ್ಮ ಸನಾತನ ಧರ್ಮ ಉಳೀಬೇಕು ಅಂತೇಳಿದ್ರೆ ಉಳಿಯಿತು, ಉಳಿಯೋದಕ್ಕೆ ನಾವು ಸಹಾಯ ಮಾಡ್ತಿದ್ದೀವಿ ಅಂತೇಳಿದ್ರೆ, ಆ ಭಗವಂತನಿಗೆ ನಿಮ್ಮ ಮೇಲೆ ಪ್ರೀತಿ ಆಗುತ್ತೆ." ಇದಿಷ್ಟು ಪುರೋಹಿತರ ಮಾತುಗಳ ಸಾರಾಂಶ.



ಏನಿದು ಸನಾತನ ಧರ್ಮ?

ಬಿಜೆಪಿ ನಾಯಕರು, ಸಂಘಪರಿವಾರದವರು, ಪುರೋಹಿತಶಾಹಿಗಳು ಸದಾ ಹೇಳುವ ಮಾತು "ನಮ್ಮ ಸನಾತನ ಧರ್ಮ ಅಪಾಯದಲ್ಲಿದೆ, ನಮ್ಮ ಸನಾತನ ಧರ್ಮವನ್ನು ನಾವು ರಕ್ಷಣೆ ಮಾಡಬೇಕು" ಎಂಬುದು. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೂ "ಸನಾತನ ಧರ್ಮದ ಮೇಲೆ ದಾಳಿ ನಡೆಯುತ್ತಿದೆ ಮತ್ತು ಅದನ್ನು ತಡೆಯಿರಿ" ಎಂದು ಜನರಿಗೆ ಕರೆ ನೀಡಿದ್ದಾರೆ. ಆದರೆ, ಮೋದಿಯವರಾಗಲೀ, ಈ ಬ್ರಾಹ್ಮಣ ಪುರೋಹಿತರಾಗಲೀ ಸನಾತನ ಧರ್ಮ ಎಂದರೇನು? ಅಂತಹ ಸಮಾಜದಲ್ಲಿ ಸಾಮಾಜಿಕ ಸ್ಥಿತಿ ಹೇಗಿರುತ್ತದೆ? ಇವುಗಳನ್ನು ಜನರಿಗೆ ವಿವರಿಸಿ ಹೇಳಿ, ನಂತರ ಅದನ್ನು ರಕ್ಷಿಸಿ ಎಂದು ಹೇಳಿದ್ದರೆ ಅದರಲ್ಲಿ ಪ್ರಾಮಾಣಿಕತೆ ಇದೆ ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೆ ಸನಾತನ ಧರ್ಮ ಎಂದರೇನು ಎಂಬುದನ್ನೇ ಇವರ್ಯಾರೂ ವಿವರಿಸಿ ಹೇಳುತ್ತಿಲ್ಲ. ಹಾಗಾದರೆ, ಈ ಸನಾತನ ಧರ್ಮ ಎಂದರೇನು? ಈ ಶಬ್ದ ಯಾವಾಗ ಹುಟ್ಟಿಕೊಂಡಿತು? ಇದನ್ನು ನೋಡುವ ಮುನ್ನ 'ಸನಾತನ' ಎಂದರೇನು ಎಂಬುದನ್ನು ನೋಡೋಣ.

> **ಪ್ರಧಾನಿ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ "ಸ್ವಚ್ಛತಾ ಕಾರ್ಮಿಕರು ಮಾಡುವ ಎಲ್ಲ ಕೆಲಸಗಳನ್ನು ಸಂತೋಷದಿಂದ ಮಾಡುತ್ತಾರೆ, ಅದು ಅವರಿಗೆ ದೇವರು ಕೊಟ್ಟ ಕೆಲಸ" ಎಂದು ಹೇಳಿದ್ದರು. ನಂತರ ಈ ವಾಕ್ಯಗಳನ್ನು ಅವರ ಭಾಷಣದಿಂದ ತೆಗೆದುಹಾಕಲಾಗಿದ್ದರೂ, ಬಿಜೆಪಿ ನಾಯಕರು ಏನು ಯೋಚಿಸುತ್ತಿದ್ದಾರೆ ಎಂಬುದು ಬಹಿರಂಗವಾಯಿತು.**

'ಸನಾತನ' ಎಂದರೆ ಸಂಸ್ಕೃತದಲ್ಲಿ, ಸರಿಸುಮಾರು "ಶಾಶ್ವತ ಕಾನೂನು" ಅಥವಾ ಅಕ್ಷರಶಃ "ಶಾಶ್ವತ ಮಾರ್ಗ" ಎಂದು ಅನುವಾದಿಸುತ್ತದೆ. ಹಿಂದಿಯಲ್ಲಿ "ಶಾಶ್ವತ ಧರ್ಮ" ಎಂದು ಅನುವಾದಿಸುತ್ತದೆ. 'ಸನಾತನ ಧರ್ಮ' ಎಂಬ ಪದವನ್ನು 19 ನೇ ಶತಮಾನದಲ್ಲಿ ರಚಿಸಲಾಯಿತು ಮತ್ತು ಅದನ್ನು ಮೊದಲು 'ಹಿಂದೂ ಸುಧಾರಕರು' ಬಳಸಿದರು ಎಂದು ಹಿಂದೂ ಧರ್ಮದ ಸಂಶೋಧಕ ಪ್ರೊಫೆಸರ್ ಆಡ್ರೆ ದುರುಷ್ಕೆ ಹೇಳುತ್ತಾರೆ. ವೇದಗಳಾಗಲಿ, ಉಪನಿಷತ್ತುಗಳಾಗಲಿ ಸನಾತನದ ಬಗ್ಗೆ ಏನನ್ನೂ ಹೇಳಿಲ್ಲ. ಹಾಗೆಯೇ, ವೈದಿಕ ಸಂಪ್ರದಾಯಗಳು ಚಾಲ್ತಿಯಲ್ಲಿದ್ದಾಗ ಅದರ ವಿರುದ್ಧ ಕೆಲಸ ಮಾಡಿದ ಅಥವಾ ಬೆಂಬಲಿಸಿದ ಯಾವುದೇ ತಾತ್ವಿಕ ಪಂಗಡಗಳಲ್ಲಿ ಸನಾತನದ ಬಗ್ಗೆ ಏನನ್ನೂ ಹೇಳಲಾಗಿಲ್ಲ. ಸನಾತನ ಹಿಂದೂ ಧರ್ಮಕ್ಕೆ ಸಮಾನಾರ್ಥಕ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್.)ನ ನಾಯಕ ಮೋಹನ್ ಭಾಗವತ್ ಹೇಳಿದ್ದಾರೆ. ಆದರೆ, ಅದೇ ಆರ್ ಎಸ್ ಎಸ್ ನ ದೀನದಯಾಳ್ ಉಪಾಧ್ಯಾಯ ಅವರು ತಮ್ಮ 'ಇಂಟಿಗ್ರೇಟೆಡ್ ಮ್ಯಾನ್' ಎಂಬ ಮಹತ್ವದ ದಾಖಲೆಯಲ್ಲಿ ಸನಾತನದ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಇಂದು, ಸನಾತನ ಎಂದರೆ ಹಿಂದೂ ಧರ್ಮವೆಂದೂ, ಅದೊಂದು ಜೀವನ ವಿಧಾನವೆಂದೂ ಹೇಳುವವರು, ಈ ಪದವನ್ನು ಸಾವಿರಾರು ವರ್ಷಗಳಿಂದ ಏಕೆ ಬಳಸಲಿಲ್ಲ ಮತ್ತು ಇನ್ನೂರು ವರ್ಷಗಳ ಹಿಂದೆ ವಸಾಹತುಶಾಹಿ ಆಳ್ವಿಕೆಯಲ್ಲಿ ಮಾತ್ರ ಏಕೆ ಬಳಸಲಾಯಿತು ಎಂಬುದನ್ನು ವಿವರಿಸಲು ಸಿದ್ಧರಿಲ್ಲ.

ನಿನ್ನ ಜಾತಿಗೆ ಕೊಟ್ಟ ಕರ್ತವ್ಯವನ್ನು ನೀನು ಮಾಡಬೇಕು

ಇಸ್ಕಾನ್ ಆಂದೋಲನವು ತನ್ನ ವೆಬ್‌ಸೈಟ್‌ನಲ್ಲಿ ಸನಾತನದ ಬಗ್ಗೆ ಹೀಗೆ ಬರೆದಿದೆ; "ಧರ್ಮಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಸನಾತನ ಧರ್ಮದ ಒಂದು ವಿಧ– ಇದು ಆಧ್ಯಾತ್ಮಿಕ ಮನಸ್ಸಿನೊಂದಿಗೆ ವ್ಯವಹರಿಸುತ್ತದೆ; ಇನ್ನೊಂದು ವರ್ಣಾಶ್ರಮ ಧರ್ಮ–ಇದು ಒಬ್ಬರ ಜೀವನ ಕರ್ತವ್ಯಕ್ಕೆ ಸಂಬಂಧಿಸಿದೆ. ಪ್ರತಿಯೊಂದು ವರ್ಣತತ್ವವೂ ತನಗೆ ವಹಿಸಿದ ಕರ್ತವ್ಯವನ್ನು ನಿರ್ವಹಿಸುವುದು."

ಅಂದರೆ ಸನಾತನ ಧರ್ಮಕ್ಕೂ ವರ್ಣಾಶ್ರಮ ಧರ್ಮಕ್ಕೂ ಅವಿನಾಭಾವ ಸಂಬಂಧವಿದೆ ಎಂದಾಯಿತು. ವರ್ಣಾಶ್ರಮ ಧರ್ಮವು ಜನರ ನಡುವಿನ ಅಸಮಾನತೆಗಳನ್ನು ವ್ಯಾಖ್ಯಾನಿಸುವ ವರ್ಣ ಶ್ರೇಣಿಯಾಗಿದೆ. ಅವರು ಹೇಳುತ್ತಾರೆ: "ಧರ್ಮ ಎಂದರೇನು? ಈ ಪದವು ಮನುಸ್ಮೃತಿಯಿಂದ ಬಂದಿದೆ. ನಿನಗೆ ಕೊಟ್ಟ, ನಿನ್ನ ಸಮುದಾಯಕ್ಕೆ ಕೊಟ್ಟ, ನಿನ್ನ ಜಾತಿಗೆ ಕೊಟ್ಟ ಕರ್ತವ್ಯವನ್ನು ನೀನು ಮಾಡಬೇಕು. ಅದು ಧರ್ಮ."

ಹಾಗಾಗಿ ಒಂದು ಜಾತಿಯವರು ತನ್ನ ಮೇಲಿನ ಜಾತಿಯವರು ಮಾಡುವ ಕೆಲಸವನ್ನು ತಾವೂ ಮಾಡಲು ಯೋಚಿಸಬಾರದು. ಅವರು ತನ್ನ ಜಾತಿಗೆ ನಿಗದಿಪಡಿಸಿದ ಕರ್ತವ್ಯವನ್ನು ಮಾತ್ರ ಮಾಡಬೇಕು. ಪ್ರಧಾನಿ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ "ಸ್ವಚ್ಛತಾ ಕಾರ್ಮಿಕರು ಮಾಡುವ ಎಲ್ಲ ಕೆಲಸಗಳನ್ನು ಸಂತೋಷದಿಂದ ಮಾಡುತ್ತಾರೆ, ಅದು ಅವರಿಗೆ ದೇವರು ಕೊಟ್ಟ ಕೆಲಸ" ಎಂದು ಹೇಳಿದ್ದರು. ನಂತರ ಈ ವಾಕ್ಯಗಳನ್ನು ಅವರ ಭಾಷಣದಿಂದ ತೆಗೆದುಹಾಕಲಾಗಿದ್ದರೂ, ಅವರ ಈ ಮಾತುಗಳಿಂದ ಬಿಜೆಪಿ ನಾಯಕರು ಏನು ಯೋಚಿಸುತ್ತಿದ್ದಾರೆ ಎಂಬುದು ಬಹಿರಂಗವಾಯಿತು.

ಸಮಾಜದಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಎಲ್ಲ ವಿಚಾರ, ಸಿದ್ಧಾಂತ, ಸಂಪ್ರದಾಯ, ನಂಬಿಕೆ, ಆಚಾರ ವಿಚಾರಗಳನ್ನು ಪರಿಗಣಿಸುತ್ತೇವೆ. ಪ್ರಾಚೀನ ಕಾಲದಲ್ಲಿ ಶ್ರೇಷ್ಠವಾಗಿದ್ದ ಎಲ್ಲಾ ಭಾವನೆಗಳು ಈಗ ಉತ್ತಮವಾಗಿಲ್ಲದೇ ಇರಬಹುದು. ಅವುಗಳಲ್ಲಿ ಕೆಲವು ಇನ್ನೂ ಉತ್ತಮವಾಗಿವೆ ಮತ್ತು ಇನ್ನೂ ಫ್ಲಕ್ಸ್‌ನಲ್ಲಿರಬಹುದು. ಹಾಗಾಗಿ "ಸನಾತನ" ಪದವನ್ನು ಬಳಸಿದಾಗ ಅದು ಶ್ರೇಷ್ಠವಾಗಿರಬೇಕು ಎಂಬ ನಿಯಮವಿಲ್ಲ. ನರಬಲಿ, ಸತಿ ಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಅಸ್ಪೃಶ್ಯತೆ ಇವುಗಳನ್ನು ಶ್ರೇಷ್ಠ ಎಂದು ಯಾರಾದರೂ ಹೇಳುತ್ತಾರೆಯೇ?

ಮಾನವ ಸಮಾಜ ನಿರಂತರವಾಗಿ ಮುನ್ನಡೆಯುತ್ತಿದೆ

ಮಾನವ ಸಮಾಜ ನಿರಂತರವಾಗಿ ಮುನ್ನಡೆಯುತ್ತಿದೆ. ಪ್ರತಿ ಹಂತದಲ್ಲಿ, ಮಾನವರು ಕೆಲವು ಸಂಪ್ರದಾಯಗಳು, ಪದ್ಧತಿಗಳು ಮತ್ತು ನಂಬಿಕೆಗಳನ್ನು ಉತ್ತಮಪಡಿಸುತ್ತಾರೆ. ವರ್ಷಗಳು ಕಳೆದಂತೆಲ್ಲಾ, ಅಂತಹ ಕೆಲವು ಸಂಪ್ರದಾಯಗಳು ಸಮಾಜದ ಪ್ರಗತಿಗೆ ಅಡ್ಡಿಯಾಗುತ್ತವೆ. ಕೆಲವು ಪದ್ಧತಿಗಳನ್ನು ದುರ್ಗುಣಗಳೆಂದು ಪರಿಗಣಿಸಲಾಗುತ್ತದೆ. ಕೆಲವು ನಂಬಿಕೆಗಳು ಮೂಢನಂಬಿಕೆಗಳಾಗುತ್ತವೆ. ಈ ಮೂಲಕ ಸಮಾಜದ ಪ್ರಗತಿಗೆ ಅಡ್ಡಿಯಾಗಿರುವ ಸಂಗತಿಗಳನ್ನು ತಿರಸ್ಕರಿಸಿ ಹೊಸ ಸಂಪ್ರದಾಯ, ಹೊಸ ಆಚಾರ–ವಿಚಾರಗಳನ್ನು ಮನುಷ್ಯರು

ಪುಟ 14 ಕ್ಕೆ

'ಪೆನ್‌ಡ್ರೈವ್' ಹಗರಣ: ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ನಾಗರೀಕ ಸಮಾಜ ತಲೆ ತಗ್ಗಿಸುವಂತಹ ಪ್ರಕರಣ

ಎಚ್.ಆರ್.ನವೀನ್‌ಕುಮಾರ್, ಹಾಸನ



ಕಳೆದ ಕೆಲವು ದಿನಗಳಿಂದ ಹಾಸನದಲ್ಲಿ 'ಪೆನ್‌ಡ್ರೈವ್' ಮುಖಾಂತರ ಲೈಂಗಿಕ ಚಿತ್ರಗಳು ಮತ್ತು ವಿಡಿಯೋ ದೃಶ್ಯಗಳನ್ನು ಹಂಚಲಾಗುತ್ತಿದೆ. ಆ ಲೈಂಗಿಕ ಚಿತ್ರಗಳು ಮತ್ತು ದೃಶ್ಯಗಳು ವಾಟ್ಸ್‌ಆಪ್‌ಗಳಲ್ಲಿ ಹರಿದಾಡುತ್ತಿವೆ. ಈ ವಿಚಾರ ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ಚರ್ಚೆಗೊಳಗಾಗುತ್ತಿದ್ದು, ಎಲ್ಲೆಡೆ ಈ ಕೃತ್ಯದ ಕುರಿತು ಸಾರ್ವಜನಿಕರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಪ್ರತೀ ದಿನ ಹೊಸಹೊಸ ಚಿತ್ರಗಳು ಮತ್ತು ದೃಶ್ಯಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಚಿತ್ರಗಳು ಮತ್ತು ದೃಶ್ಯಗಳಲ್ಲಿರುವ ಮಹಿಳೆಯರ ಖಾಸಗಿ ಮತ್ತು ಕೌಟುಂಬಿಕ ಬದುಕು ಛಿದ್ರವಾಗಿದೆ. ಕೆಲವರು ಆತ್ಮಹತ್ಯೆಗೂ ಪ್ರಯತ್ನಿಸಿರುವ ವರದಿಗಳಿವೆ. ಯಾವ ಕ್ಷಣದಲ್ಲಿ ಯಾವಾಗ ಮತ್ತೊಂದು ಪೆನ್‌ಡ್ರೈವ್ ಹೊರ ಬರುತ್ತದೆಯೋ, ಅದರಲ್ಲಿ ಯಾವ ಮಹಿಳೆಯ ಖಾಸಗೀ ಚಿತ್ರಗಳು ಮತ್ತು ದೃಶ್ಯಗಳು ಬಿತ್ತರಗೊಳ್ಳಲಿವೆಯೋ ಎಂಬ ಆತಂಕ ಎಲ್ಲೆಡೆ ಹರಡಿದೆ. ಈ ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ. ಇದಲ್ಲದೇ, ಪ್ರಜ್ವಲ್ ತಂದೆ ಎಚ್.ಡಿ. ರೇವಣ್ಣ ವಿರುದ್ಧ ಹೊಳೆನರಸೀಪುರದಲ್ಲಿ ಲೈಂಗಿಕ ದೌರ್ಜನ್ಯದ ದೂರು ದಾಖಲಾಗಿದ್ದು, ಆರೋಪಿಯಾಗಿರುವ ಎಚ್.ಡಿ.ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣ ಇವರನ್ನು ಕೂಡಲೇ ಬಂಧಿಸಿ ವಿಚಾರಣೆ ನಡೆಸಬೇಕೆಂದು ಜನಪರ ಚಳುವಳಿಗಳು ಪ್ರತಿಭಟನೆ ನಡೆಸುವ ಮೂಲಕ ಆಗ್ರಹಿಸಿದ್ದಾರೆ. ಈ ಮಧ್ಯೆ ಇಡೀ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

ಯಾವುದೇ ವ್ಯಕ್ತಿಯ ಖಾಸಗಿ ಬದುಕಿನ ವಿಚಾರಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವುದು ಅಪರಾಧವಾಗುತ್ತದೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಲಾಭವನ್ನಷ್ಟೇ ಗುರಿಯಾಗಿಸಿಕೊಂಡು ಮಹಿಳೆಯರ ಖಾಸಗಿ ಬದುಕಿನ ಲೈಂಗಿಕ ಚಿತ್ರಗಳು ಮತ್ತು ದೃಶ್ಯಗಳನ್ನು ಸಾರ್ವಜನಿಕವಾಗಿ ಬಿತ್ತರಿಸುವುದು ಅತ್ಯಂತ ಹೀನ ಕೃತ್ಯವಾಗಿದೆ. ಇಲ್ಲಿ ಎರಡು ಪ್ರಮುಖ ಅಂಶಗಳನ್ನು ಗಮನಿಸಬೇಕು. ಒಂದು ತನ್ನ ಕಾಮತೃಷೆಯನ್ನು ತೀರಿಸಿಕೊಳ್ಳಲು ದೊಡ್ಡ ಸಂಖ್ಯೆ ಮಹಿಳೆಯರನ್ನು ಸರಕಾಗಿ ಬಳಸಿಕೊಳ್ಳುವುದು, ಅದನ್ನು ತಾನೇ ಸ್ವತಃ ಮೊಬೈಲ್‌ನಲ್ಲಿ ವಿಡಿಯೋ ರೆಕಾರ್ಡ್ ಮಾಡಿಕೊಳ್ಳುವುದು ಅತ್ಯಂತ ವಿಕೃತಿ ಮಾತ್ರವಲ್ಲ, ಇದೊಂದು ಮಾನಸಿಕ ರೋಗ. ಮತ್ತೊಂದು ವಿಚಾರವೇನೆಂದರೆ ಈ ವೀಡಿಯೋಗಳನ್ನು ಸಾರ್ವಜನಿಕವಾಗಿ ಹಂಚಿ ಸಮಾಜದ ಸ್ವಾಥ್ಯವನ್ನು ಹಾಳುಮಾಡುವ ಆಮೂಲಕ ಸಂತ್ರಸ್ತ ಮಹಿಳೆಯರ ಕುಟುಂಬ ಮತ್ತು ಅವರ ಖಾಸಗೀ ಬದುಕಿನ ಮೇಲೆ ದೊಡ್ಡ ಪರಿಣಾಮವನ್ನು ಉಂಟು ಮಾಡುವುದು ಕೂಡ ಅಪರಾಧವೇ ಆಗಿದೆ. ಈ ಮೂಲಕ ಸಮಾಜ ಎಷ್ಟರ ಮಟ್ಟಕ್ಕೆ ಸ್ವಾಥ್ಯವನ್ನು ಕಳೆದುಕೊಳ್ಳುತ್ತಿದೆ ಮತ್ತು ಮಹಿಳೆಯರನ್ನು ಹೇಗೆ ನೋಡುತ್ತಿದೆ ಮತ್ತು ನಡೆಸಿಕೊಳ್ಳುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಇದೂ ಕೂಡ ಪಾಳೇಗಾರಿ ಮೌಲ್ಯಗಳ ಒಂದು ಭಾಗವೇ ಆಗಿದೆ.

ಪ್ರಜ್ವಲ್ ರೇವಣ್ಣ ಮಹಿಳೆಯರನ್ನು ಈ ಕುಕೃತ್ಯಕ್ಕೆ ಬಳಸಿಕೊಳ್ಳಲು ಅವನು ತನಗಿರುವ ರಾಜಕೀಯ ಅಧಿಕಾರವನ್ನು ಬಳಸಿಕೊಂಡಿದ್ದಾನೆ ಎನ್ನುವುದೂ ಸ್ಪಷ್ಟವಾಗಿದೆ. ಅವನು ತನ್ನ ಕಾಮತೃಷೆಗಾಗಿ ನೂರಾರು ಮಹಿಳೆಯರನ್ನು ಬಳಸಿಕೊಂಡು ಸಾವಿರಾರು ವೀಡಿಯೋಗಳನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದಾನೆ ಎನ್ನುವ ಮಾತುಗಳು ಎಲ್ಲೆಡೆ ಕೇಳಿ ಬರುತ್ತಿದೆ. ಈ ದೃಶ್ಯಗಳಲ್ಲಿ ಅವನದೇ ಪಕ್ಷದ ಮಹಿಳಾ ಮುಖಂಡರು, ಮಹಿಳಾ ಕಾರ್ಯಕರ್ತೆಯರು, ಖಾಸಗಿ ಮತ್ತು ಸರ್ಕಾರಿ ಮಹಿಳಾ ನೌಕರರು ಹಾಗೂ ಅಧಿಕಾರಿಗಳು ಜೊತೆಗೆ ಮಹಿಳಾ ಪೋಲೀಸು ಅಧಿಕಾರಿಗಳೊಂದಿಗೆ ನಡೆಸಿರುವ ಲೈಂಗಿಕ ಚಟುವಟಿಕೆಗಳೂ ಇವೆ ಎನ್ನಲಾಗುತ್ತಿದೆ. ಅವನ ಮನೆಯ ಕೆಲಸದ ಹೆಂಗಸಿನ ಮೇಲೂ ಬಲಾತ್ಕಾರವಾಗಿ ಅತ್ಯಾಚಾರ ನಡೆಸಿ ಆ ದೃಶ್ಯಗಳನ್ನೂ ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದಾನೆ. ಇಂತಹ ವಿಕೃತ ಮತ್ತು ದುಷ್ಟ ಮನಸ್ಸಿನ ವ್ಯಕ್ತಿ ಜನಪ್ರತಿನಿಧಿಯಾಗಿ ಇರುವುದಿರಲಿ ನಾಗರಿಕ ಸಮಾಜದಲ್ಲಿ ಮುಕ್ತವಾಗಿ ಓಡಾಡಿಕೊಂಡಿರುವುದು ಬಹಳ ಅಪಾಯಕಾರಿಯಾದ ಮತ್ತು ಆತಂಕಕಾರಿಯಾದ ಸಂಗತಿಯಾಗಿದೆ. ಈತನ ಈ ಕುಕೃತ್ಯದಿಂದಾಗಿ ಹಲವಾರು ಮಹಿಳೆಯರ ಬದುಕು ಛಿದ್ರಗೊಳ್ಳುತ್ತಿದೆ.

ಇಂತಹ ಹೀನ ಕೃತ್ಯ ನಡೆಸಿರುವ ವ್ಯಕ್ತಿಯ ಮತ್ತು ಕುಟುಂಬದ ರಾಜಕೀಯ ಪ್ರಭಾವ ಕೆಲಸ ಮಾಡಿರುವ ಸಾಧ್ಯತೆಯಿದೆ. ಆದರೆ ಯಾವ ಯಾವ ಒತ್ತಡಗಳ ಕಾರಣಕ್ಕೋ, ಕೆಲಸ ಕಾರ್ಯ ಮತ್ತು ಪ್ರಯೋಜನದ ಕಾರಣಕ್ಕೋ ಆತನಿಂದ ಲೈಂಗಿಕವಾಗಿ ಬಳಕೆಯಾಗಿ ವೀಡಿಯೋ ದೃಶ್ಯಗಳಲ್ಲಿ ಸೆರೆಯಾಗಿ ಸಾರ್ವಜನಿಕವಾಗಿ ಮಾನ ಕಳೆದುಕೊಳ್ಳುತ್ತಿರುವ ಮಹಿಳೆಯರು ಮತ್ತವರ ಕುಟುಂಬದ ಗೋಳು ಮಾತ್ರ ಹೇಳತೀರದಾಗಿದೆ. ಇಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಬೇಕಿದೆ.

ಈಗಾಗಲೇ ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಹೊಳೆನರಸಿಪುರದ ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಎಂಬುವವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ಬಳಿ 2 ಸಾವಿರಕ್ಕೂ ಹೆಚ್ಚು ಪೋಟೋ, ವೀಡಿಯೋಗಳಿವೆ ಎಂದೂ, ಆ ಕುರಿತು ಬಿಜೆಪಿ ಹೈಕಮಾಂಡ್‌ಗೆ ಹಿಂದೆಯೇ ಮಾಹಿತಿ ನೀಡಿದ್ದಾಗಿ ತಿಳಿಸಿದ್ದಾರೆ. ಪೋಲೀಸರು ಕೂಡಲೇ ಅವರನ್ನು ವಿಚಾರಣೆಗೆ ಒಳಪಡಿಸಿದಲ್ಲಿ ಆ ವೀಡಿಯೋಗಳನ್ನು ಚಿತ್ರೀಕರಿಸಿರುವ ವ್ಯಕ್ತಿ ಯಾರು? ದೇವರಾಜೇಗೌಡರಿಗೆ ಆ ವೀಡಿಯೋಗಳನ್ನು ನೀಡಿರುವ ವ್ಯಕ್ತಿ ಯಾರು? ಎನ್ನುವುದು ಗೊತ್ತಾಗುತ್ತದೆ. ಮತ್ತು ಆ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಿದರೆ ಆ ವ್ಯಕ್ತಿ ಯಾರ್ಯಾರಿಗೆ ಈ ವೀಡಿಯೋಗಳನ್ನು ನೀಡಿದ್ದಾನೆ. ಹಾಗೂ ಯಾರು ಈ ವೀಡಿಯೋಗಳನ್ನು ಪೆನ್‌ಡ್ರೈವ್ ಮುಖಾಂತರ ಸಾರ್ವಜನಿಕರಿಗೆ ಹಂಚುತ್ತಿದ್ದಾರೆ ಎನ್ನುವುದು ತಿಳಿಯಲಿದೆ. ಆಗ ಇನ್ನು ಮುಂದೆ ವೀಡಿಯೋಗಳು ಬಿಡುಡೆಯಾಗುವುದನ್ನು ತಡೆಯಬಹುದಾಗಿದೆ ಹಾಗೂ ಹಲವು ಮಹಿಳೆಯರ ಮಾನ, ಪ್ರಾಣಗಳು ಉಳಿಯಲಿವೆ. ಜೊತೆಗೆ ಇಡೀ ಈ ಲೈಂಗಿಕ ಅಕ್ರಮದ ಮೂಲ ವ್ಯಕ್ತಿಯನ್ನು ಬಂಧಿಸಿ ಸಮಾಜದಲ್ಲಿ ಮುಂದೆ ಆಗುವ ಅನಾಹುತಗಳನ್ನು ತಡೆಯಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಕೂಡಲೇ ಬಿಜೆಪಿ ಮುಖಂಡ ಜಿ. ದೇವರಾಜೇಗೌಡರನ್ನು ವಿಚಾರಣೆಗೆ ಒಳಪಡಿಸಿ ಸಾಧ್ಯವಾದಷ್ಟೂ ಬೇಗ ನೂರಾರು ಮಹಿಳೆಯರ ಮೇಲೆ ಲೈಂಗಿಕ ಅಕ್ರಮ, ಅತ್ಯಾಚಾರ ನಡೆಸಿ ಅವುಗಳನ್ನು ಚಿತ್ರೀಕರಿಸಿಕೊಂಡಿರುವ ಪ್ರಜ್ವಲ್ ರೇವಣ್ಣನನ್ನೂ ಹಾಗೂ ಅವುಗಳನ್ನು ಸಾರ್ವಜನಿಕರಿಗೆ ಪೆನ್‌ಡ್ರೈವ್ ಮುಖಾಂತರ ಹಂಚುತ್ತಿರುವ ವ್ಯಕ್ತಿಗಳನ್ನೂ ಬಂಧಿಸಬೇಕೆಂದು ಮತ್ತು ಸಂತ್ರಸ್ತ ಮಹಿಳೆಯರು ಮತ್ತವರ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಹಾಸನದಲ್ಲಿ ಏಪ್ರಿಲ್ 29, 2024 ರಂದು ಪ್ರತಿಭಟನೆಯನ್ನು ನಡೆಸಿದ ಹಾಸನ ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟ ಸರ್ಕಾರವನ್ನು ಒತ್ತಾಯಿಸಿದೆ.

ಸಾರ್ವಜನಿಕವಾಗಿ ಇಷ್ಟೆಲ್ಲಾ ಅನಾಹುತ ನಡೆದು ಆತಂಕ ಹರಡಿರುವಾಗ ಈ ಕುರಿತು ತಡವಾಗಿಯಾದರೂ ಎಚ್ಚೆತ್ತುಕೊಂಡು ಇಡೀ ಪ್ರಕರಣವನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹವಾಗಿದ್ದು ಯಾವುದೇ ಒತ್ತಡಗಳಿಗೆ ಮಣಿಯದೆ, ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ರಕ್ಷಣೆ ಮತ್ತು ನ್ಯಾಯವನ್ನು ಒದಗಿಸಿಕೊಡಬೇಕಾದ ತುರ್ತು ಅಗತ್ಯವಿದೆ.

ಭೇಟಿ ಪಡಾವೋ, ಭೇಟಿ ಬಚಾವೋ ಎಂದು ಘೋಷಣೆ ನೀಡುವ ಬಿಜೆಪಿ ಮತ್ತು ನರೇಂದ್ರ ಮೋದಿಯವರು ತಮ್ಮ ಮೈತ್ರಿ ಪಕ್ಷದ ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿರುವ ಪ್ರಜ್ವಲ್ ರೇವಣ್ಣ ಮತ್ತು ಈ ಲೈಂಗಿಕ ಪ್ರಕರಣದ ಕುರಿತು ಒಂದೇ ಒಂದು ಮಾತನ್ನೂ ಆಡದಿರುವುದು ನೋಡಿದರೆ ಇವರು ಹೆಣ್ಣುಮಕ್ಕಳನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಸ್ಪಷ್ಟವಾಗುತ್ತಿದೆ. ಇನ್ನೂ ಕೆಲವರು ಇವರು ಹಿಂದೂ ಹೆಣ್ಣುಮಕ್ಕಳಲ್ಲವೇ ಎಂದೂ ಪ್ರಶ್ನಿಸುತ್ತಿದ್ದಾರೆ. ಇಡೀ ದೇಶವೇ ಬೆಚ್ಚಿ ಬೀಳಿಸುವ ಇಂತಹ ಪ್ರಕರಣದಲ್ಲಿ ಮಾನ್ಯ ಮೋದಿಯವರು ಮಾತನಾಡಲೇಬೇಕಿದೆ. ನೂರಾರು ಹೆಣ್ಣುಮಕ್ಕಳಿರುವ ಸಾವಿರಾರು ಫೋಟೋ ಮತ್ತು ವಿಡಿಯೋಗಳನ್ನು ಹೊಂದಿರುವ ಇಂತಹ ಪ್ರಕರಣ ರಾಜ್ಯದಲ್ಲಿ ಮಾತ್ರವಲ್ಲ, ದೇಶ ವಿದೇಶದಲ್ಲೇ ಇದೇ ಮೊದಲು ಎಂದು ಹಲವರು ಹೇಳುತ್ತಿದ್ದಾರೆ.


ಈ ಪ್ರಕರಣದ ಕುರಿತು ಹಲವು ಜನಪರ ಸಂಘಟನೆಗಳು ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತಿದ್ದು ಈ ಪ್ರಕರಣದ ಕೇಂದ್ರ ಬಿಂದುವಾಗಿರುವ ಹಾಸನದಲ್ಲಿ ಪ್ರತಿಭಟನೆ ನಡೆದಿದೆ. ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿವಿಧ ಸಂಘಟನೆಗಳ ಮುಖಂಡರ ಒಕ್ಕೊರಲ ಒತ್ತಾಯಗಳು ಹೀಗಿವೆ.

ಹಕ್ಕೊತ್ತಾಯಗಳು

1. 'ಪೆನ್‌ಡ್ರೈವ್' ಲೈಂಗಿಕ ದೌರ್ಜನ್ಯ ಪ್ರಕರಣದ ಪ್ರಮುಖ ರೂವಾರಿ ಪ್ರಜ್ವಲ್ ರೇವಣ್ಣನನ್ನು ಕೂಡಲೇ ಬಂಧಿಸಿ ಆತನ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯದ ಪ್ರಕರಣಗಳನ್ನು ದಾಖಲಿಸಬೇಕು.
2. ಪ್ರಕರಣದ ತನಿಖೆಗೆ ಹಾಗು ಆರೋಪಿಗಳ ಬಂಧನಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಅಧಿಕಾರ ಮತ್ತು ಸೂಕ್ತ ವ್ಯವಸ್ಥೆಯನ್ನು ಎಸ್‌ಐಟಿಗೆ ಒದಗಿಸಬೇಕು. ಇಡೀ ಪ್ರಕರಣದ ತನಿಖೆಗೆ ಜನಸ್ನೇಹಿ ಹಾಗೂ ಮಹಿಳಾಪರ ಸಂವೇದನೆ ಹೊಂದಿರುವ ಪೋಲೀಸು ಅಧಿಕಾರಿಗಳನ್ನು ಬಳಸಿಕೊಳ್ಳಬೇಕು.
3. ಮಹಿಳೆಯರ ಖಾಸಗಿ ಮತ್ತು ಲೈಂಗಿಕ ಚಿತ್ರಗಳು ಮತ್ತು ದೃಶ್ಯಗಳನ್ನು ಪೆನ್‌ಡ್ರೈವ್ ಮುಖಾಂತರ ಸಾರ್ವಜನಿಕರಿಗೆ ವಿತರಿಸಿ ವಾಟ್ಸ್‌ಆಪ್ ಮುಖಾಂತರ ಎಲ್ಲೆಡೆ ಹರಡಲು ಕಾರಣವಾದವರನ್ನು ಪತ್ತೆಹಚ್ಚಿ ಅವರನ್ನು ಬಂಧಿಸಿ ಅವರ ಮೇಲೆ ಪ್ರಕರಣ ದಾಖಲಿಸಬೇಕು.
4. ಪ್ರಜ್ವಲ್ ರೇವಣ್ಣ ನಡೆಸಿರುವ ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿದ ಸಾವಿರಾರು ವಿಡಿಯೋಗಳನ್ನು ಒಳಗೊಂಡಿರುವ 'ಪೆನ್‌ಡ್ರೈವ್' ತನ್ನ ಬಳಿ ಇದೆ ಎಂದು ಮಾಧ್ಯಮಗಳ ಮುಂದೆ ಹೇಳಿಕೊಂಡಿರುವ ಬಿಜೆಪಿ ಮುಖಂಡ ಜಿ. ದೇವರಾಜೇಗೌಡರನ್ನು ವಿಚಾರಣೆಗೆ ಒಳಪಡಿಸಿ ಅವರಿಗೆ ಪೆನ್‌ಡ್ರೈವ್ ಯಾರಿಂದ ಬಂತು ಆ ವ್ಯಕ್ತಿಯಿಂದ ಯಾರ್ಯಾರಿಗೆ ಪೆನ್‌ಡ್ರೈವ್ ಹಂಚಿಕೆಯಾಗಿದೆ ಮತ್ತು ಯಾವ ಮೊಬೈಲ್‌ನಿಂದ ಚಿತ್ರೀಕರಣವಾಗಿದೆ ಎನ್ನುವುದನ್ನು ಪತ್ತೆಹಚ್ಚಬೇಕು. ಹಾಗೂ ಮೊಬೈಲ್ ಮತ್ತು ಪೆನ್‌ಡ್ರೈವ್‌ಗಳನ್ನು ವಶಪಡಿಸಿಕೊಳ್ಳಬೇಕು ಹಾಗೂ ಅವುಗಳು ಸಾರ್ವಜನಿಕವಾಗಿ ಮತ್ತಷ್ಟು ಹಂಚಿಕೆಯಾಗದಂತೆ ತಡೆಗಟ್ಟಿ ಅವುಗಳನ್ನು ನಾಶಪಡಿಸಬೇಕು.
5. ಪೆನ್‌ಡ್ರೈವ್ ಲೈಂಗಿಕ ದೌರ್ಜನ್ಯದಲ್ಲಿ ಸಂತ್ರಸ್ತರಾಗಿರುವ ಮಹಿಳೆಯ ಗೌಪ್ಯತೆಯನ್ನು ಕಾಪಾಡಬೇಕು. ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು. ಸಂತ್ರಸ್ತ ಮಹಿಳೆಯರಿಗಾಗಿ ಪ್ರತ್ಯೇಕ ಕೌನ್ಸಲಿಂಗ್ ಕೇಂದ್ರಗಳನ್ನು ತೆರೆಯಬೇಕು. ಹಾಗೂ ಸಂತ್ರಸ್ಥ ಮಹಿಳೆಯರಿಗೆ ದೂರು ದಾಖಲಿಸಲು ಸಾಧ್ಯವಾಗುವಂತೆ ಹಾಸನದಲ್ಲಿ ಹಾಗೂ ಬೆಂಗಳೂರಿನಲ್ಲಿ ಪ್ರತ್ಯೇಕವಾದ ದೂರು ಕೇಂದ್ರಗಳನ್ನು ಸ್ಥಾಪಿಸಬೇಕು. ಜೊತೆಗೆ ದೂರು ದಾಖಲಿಸಲು ಬರುವ ಸಂತ್ರಸ್ಥ ಮಹಿಳೆಯರಿಗೆ ಸೂಕ್ತ ಭದ್ರತೆ ಮತ್ತು ಪ್ರಯಾಣ ವ್ಯವಸ್ಥೆ ಒದಗಿಸಬೇಕು.
6. ಇಡೀ ಪ್ರಕರಣದ ತನಿಖೆಯಲ್ಲಿ ಹಾಗೂ ಆರೋಪಿಗಳನ್ನು ಬಂಧಿಸುವಲ್ಲಿ ಯಾವುದೇ ರಾಜಕೀಯ ಪ್ರಭಾವ ಹಾಗೂ ಒತ್ತಡಕ್ಕೆ ಒಳಗಾಗದಂತೆ ಎಸ್‌ಐಟಿ ಕೆಲಸ ಮಾಡುವುದನ್ನು ರಾಜ್ಯ ಸರ್ಕಾರ ಖಾತ್ರಿಪಡಿಸಬೇಕು. ●

ದೇಶದ ಐಕ್ಯತೆಗೆ ತೀವ್ರ ಧಕ್ಕೆ ತರಲಿರುವ ಮೋದಿಯವರ ದ್ವೇಷಪೂರಿತ ಭಾಷಣ "ಇಂದು ಅವರಾಗಿದ್ದರೆ ನಾಳೆ ನಾವೇ" ಎಂದ ಅಖಾಲಿ ದಳ

ರಾಜಸ್ಥಾನದ ಬನ್ಸ್ವಾರಾದಲ್ಲಿ ಮೋದಿಯವರ ದ್ವೇಷಪೂರಿತ ಭಾಷಣ ಬಿಜೆಪಿಗೆ ಸೋಲುವ ಭಯವಿದೆ ಎಂಬುದನ್ನು ತೋರಿಸುತ್ತದೆ. ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ದೇಶದ ಸಂಪತ್ತನ್ನು "ಒಳನುಸುಳುಕೋರರು" ಮತ್ತು "ಹೆಚ್ಚು ಮಕ್ಕಳನ್ನು ಹೊಂದಿರುವವರಿಗೆ" ಹಂಚುತ್ತದೆ ಎಂದು ಮುಸ್ಲಿಂ ಸಮುದಾಯವನ್ನು ಉಲ್ಲೇಖಿಸಿ ಮೋದಿ ಹೇಳಿದ್ದರು."ಅವರು [ಕಾಂಗ್ರೆಸ್] ಅಧಿಕಾರದಲ್ಲಿದ್ದಾಗ, ಮುಸ್ಲಿಮರಿಗೆ ಸಂಪನ್ಮೂಲಗಳ ಮೇಲೆ ಮೊದಲ ಹಕ್ಕಿದೆ ಎಂದು ಹೇಳಿದರು. ಅವರು ನಿಮ್ಮ ಎಲ್ಲಾ ಸಂಪತ್ತನ್ನು ಕಿತ್ತುಕೊಳ್ಳುತ್ತಾರೆ ಮತ್ತು ಹೆಚ್ಚು ಮಕ್ಕಳನ್ನು ಹೊಂದಿರುವವರಿಗೆ ಹಂಚುತ್ತಾರೆ. ಅವರು ಅದನ್ನು ನುಸುಳುಕೋರರಿಗೆ ಹಂಚುತ್ತಾರೆ," ಎಂದಿರುವ ಮೋದಿ ಅವರು "ನೀವು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ನುಸುಳುಕೋರರಿಗೆ ನೀಡಬೇಕೆಂದು ನೀವು ಭಾವಿಸುತ್ತೀರಾ? ನೀವು ಇದನ್ನು ಒಪ್ಪಿಕೊಳ್ಳುತ್ತೀರಾ?" ಎಂದು ಸಭಿಕರನ್ನು ಪ್ರಶ್ನಿಸಿದರು.



ಕಾಂಗ್ರೆಸ್‌ಗೆ ಮತ ಹಾಕಿದರೆ ಹಿಂದೂಗಳ ಆಸ್ತಿಯನ್ನು ಮುಸಲ್ಮಾನರಿಗೆ ಹಂಚುತ್ತಾರೆ, ಹಿಂದೂ ಹೆಂಗಸರ ಕೊರಳಿನಿಂದ ತಾಳಿಯನ್ನು ಕಿತ್ತುಕೊಳ್ಳುತ್ತಾರೆ ಎಂಬ ಮಾತುಗಳನ್ನು ನೋಡಿದರೆ ಬಿಜೆಪಿಗೆ ತಾನು ಸೋಲುತ್ತೇನೆ ಎಂಬ ಭಯವಿದೆ ಎಂಬುದು ಸ್ಪಷ್ಟವಾಗುತ್ತದೆ. ಕಳೆದ 10 ವರ್ಷಗಳಲ್ಲಿ ಮಾಡಬೇಕಾದ ಉತ್ತಮ ಕೆಲಸಗಳನ್ನು ಮಾಡಿಲ್ಲದ ಕಾರಣ, ಜನರನ್ನು ಮರುಳು ಮಾಡಿ ಮತ ಗಳಿಸಬಹುದು ಎಂದು ಬಳಸಿದ ಮೂರ್ಖ ಪದದ ನಿರರ್ಥಕ ಅಸ್ತ್ರ ಇದು. ಏಪ್ರಿಲ್ 19ರಂದು 102 ಕ್ಷೇತ್ರಗಳಿಗೆ ನಡೆದ ಲೋಕಸಭೆ ಚುನಾವಣೆಯ ಮೊದಲ ಹಂತದಲ್ಲಿ ಬಿಜೆಪಿಗೆ ಹೀನಾಯವಾಗಿ ಹಿನ್ನಡೆಯಾಗಲಿದೆ ಎಂದು ಸಮೀಕ್ಷೆಗಳು ಹೇಳಿದಾಗ ಮೋದಿ ಹಾಗೂ ಬಿಜೆಪಿಗೆ ತೀವ್ರ ನಿರಾಸೆಯಾಗಿದೆ. ಅದಕ್ಕಾಗಿಯೇ ಅವರು ತಮ್ಮ ಹಾದಿ ಬದಲಾಯಿಸಿದ್ದಾರೆ, ಆ ಮೂಲಕ ತಮ್ಮ ನಿಜವಾದ ಬಣ್ಣ ಬಯಲುಗೊಳಿಸಿದ್ದಾರೆ. ಹೇಗಾದರೂ ಗೆಲ್ಲಲೇ ಬೇಕು ಎಂಬ ಗುರಿಯೊಂದಿಗೆ ಬಹುಸಂಖ್ಯಾತ ಹಿಂದೂಗಳಲ್ಲಿ ಭಯ ಮತ್ತು ದ್ವೇಷ ಹುಟ್ಟಿಸುವ ಪ್ರಯತ್ನದ ಭಾಗವಾಗಿ ಇಂತಹ ಕೋಮುದ್ವೇಷ ಬಿತ್ತುವ ಭಾಷಣ ಮಾಡಲು ಮುಂದಾಗಿದ್ದಾರೆ. ಅಂದಿನ ಇಂತಹ ಮಾತುಗಳು ದೇಶಾದ್ಯಂತ ಟೀಕೆಗೆ ಕಾರಣವಾದರೂ ನಂತರದ ಚುನಾವಣಾ ಭಾಷಣಗಳಲ್ಲಿಯೂ ಇಂತದೇ ಕೋಮುದ್ವೇಷ ಬಿತ್ತುವ ಮಾತುಗಳನ್ನು ಮುಂದುವರಿಸಿದ್ದಾರೆ. ಪ್ರಧಾನಿ ಸ್ಥಾನದಲ್ಲಿ ಕುಳಿತ ವ್ಯಕ್ತಿ ಎಲ್ಲ ಜನರನ್ನು ಪ್ರತಿನಿಧಿಸಿ ದೇಶದ ಏಕತೆಯನ್ನು ಕಾಪಾಡಬೇಕು. ಬದಲಾಗಿ ಜನರಲ್ಲಿ ಧಾರ್ಮಿಕ ದ್ವೇಷವನ್ನು ಹುಟ್ಟುಹಾಕಿ ದೇಶವನ್ನು ಛಿದ್ರಗೊಳಿಸಲು ಯತ್ನಿಸುತ್ತಿರುವುದು ಅನಾಚಾರದ ಕಾರ್ಯವಾಗಿದೆ.

ಮೋದಿಯವರ ಆಡಳಿತ ವೈಫಲ್ಯಗಳಿಂದ ದಾರಿ ತಪ್ಪಿಸುವ ಪ್ರಯತ್ನ

ಮೋದಿಯವರ ಸುಳ್ಳು ಭರವಸೆಗಳನ್ನು ಅರಿತ ವಿವಿಧ ವರ್ಗಗಳ ಜನರು ಆಕ್ರೋಶಗೊಂಡು ದೇಶಾದ್ಯಂತ ರಸ್ತೆಗಿಳಿದಿದ್ದರು. ಈ ಅವಧಿಯಲ್ಲಿ ದೆಹಲಿ ರೈತ ಹೋರಾಟ, ಕಾರ್ಮಿಕರ ಚಳುವಳಿಗಳು, ದಲಿತರು ಮತ್ತು ಆದಿವಾಸಿಗಳ ಮೇಲಿನ ದಾಳಿಗಳ ವಿರುದ್ಧ ತೀವ್ರ ಪ್ರತಿರೋಧ ಚಳುವಳಿಗಳು ನಡೆದವು. ಮಣಿಪುರದಲ್ಲಿ ಕೋಮುದ್ವೇಷ ಹೆಚ್ಚಿ, ರಕ್ತಪಾತ ಸೃಷ್ಟಿಸಿ ಮಹಿಳೆಯರನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಿದ ಘಟನೆಗಳ ವಿರುದ್ಧ ದೇಶದ ಜನತೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಜ್ರಿವಾಲ್ ಬಂಧನದಿಂದ ಬಿಜೆಪಿಯ ಪಕ್ಷಪಾತ ರಾಜಕೀಯ ಬಯಲಾಗಿದೆ. ನಿರುದ್ಯೋಗ ಮತ್ತು ಬೆಲೆ ಏರಿಕೆಯನ್ನು ತಡೆಯುವಲ್ಲಿ ಮೋದಿ ಸರಕಾರ ಸಂಪೂರ್ಣ ವಿಫಲವಾಗಿದೆ. ಈ ವೈಫಲ್ಯಗಳು ಜನರಿಗೆ ಅರ್ಥವಾಗುತ್ತಿದ್ದಂತೆ, ಅಭಿವೃದ್ಧಿ, ಭಯೋತ್ಪಾದನೆಯನ್ನು ಬದಿಗಿರಿಸಿ, ತನ್ನ ಮುಖವಾಡವನ್ನು ಕಳಚಿ ಜನರ ಮೇಲೆ ಮತಾಂಧತೆಯನ್ನು ನಿರ್ಲಜ್ಜವಾಗಿ ಪ್ರಯೋಗ ಮಾಡತೊಡಗಿದ್ದಾರೆ. ಧಾರ್ಮಿಕ ಬಹುಸಂಖ್ಯಾತ ಹಿಂದೂಗಳ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ ಎಂಬ ಭಯವನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿದೆ. ರಾಮಜನ್ಮಭೂಮಿ ನಿರ್ಮಾಣವನ್ನು ದೊಡ್ಡ ಸಾಧನೆ ಎಂಬಂತೆ ಬಿಂಬಿಸಲಾಗುತ್ತದೆ. ಮೋದಿ ಅರಬ್ಬೀ ಸಾಗರದ ಆಳಕ್ಕೆ ಮುಳುಗಿ ದ್ವಾರಕೆಯನ್ನು ಕಂಡರು ಎಂದು ಹೇಳುವುದು, ವಾರಣಾಸಿಯಲ್ಲಿ ವಿವಾದವನ್ನು ಹುಟ್ಟುಹಾಕುವುದು, ಸಿಎಎ ನಿಯಮಾವಳಿಗಳನ್ನು ರಚಿಸುವುದು ಮತ್ತು ಪೌರತ್ವ ಕಾಯ್ದೆಯ ತಿದ್ದುಪಡಿಯನ್ನು ಮುಂದಕ್ಕೆ ತರುವುದು, ಏಕರೂಪದ ನಾಗರಿಕ ಸಂಹಿತೆಯನ್ನು ತರುವುದು, ಹಿಂದಿ ಹೆಸರಿನ ಅಪರಾಧ ಕಾನೂನುಗಳನ್ನು ಬದಲಾಯಿಸುವುದು ಇತ್ಯಾದಿ. ಮುಸ್ಲಿಂ ಅಲ್ಪಸಂಖ್ಯಾತರನ್ನು ನುಸುಳುಕೋರರು ಮತ್ತು ಹೆಚ್ಚು ಮಕ್ಕಳನ್ನು ಹೆರುವವರು ಎಂದು ಬಿಂಬಿಸುವುದು ಹಿಂದೂಗಳಲ್ಲಿ ಕೋಮು ಭಾವನೆಗಳನ್ನು ಕೆರಳಿಸುವ ಉದ್ದೇಶದಿಂದ ಕೂಡಿದೆ.

ಹಿಂದಿನ ಬ್ರಿಟಿಷ್ ಏಜೆಂಟರು ಇಂದಿನ ಮತಾಂಧರು

1946–47ರಲ್ಲಿ ಅವರು ದೇಶವನ್ನು ತೊರೆದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಹರಡಿದ ವಿಷವನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ಮತಾಂಧರು ಈಗಲೂ ರಕ್ಷಿಸುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರ ಪಾದದ ಬಳಿ ನಿಂತು ಅವರ ಏಜೆಂಟರಂತೆ ವರ್ತಿಸಿದ ಮತ್ತು ಮಹಾತ್ಮ ಗಾಂಧೀಜಿಯವರ ಹಂತಕರ ವಂಶಸ್ಥರಿಂದ ರಾಷ್ಟ್ರ ಇನ್ನೇನು ನಿರೀಕ್ಷಿಸಲು ಸಾಧ್ಯ. ಎರಡು ಧರ್ಮಗಳ ನಡುವಿನ ಸಂಘರ್ಷದಿಂದ ದೇಶ ಎರಡು ಹೋಳಾಗಿದ್ದರೆ, ಅದೇ ಬಿಜೆಪಿ ಧರ್ಮ ದ್ವೇಷ ಹೆಚ್ಚಿಸಿ ಮತ್ತೊಮ್ಮೆ ದೇಶವನ್ನು ಒಡೆದು ಸಾಮ್ರಾಜ್ಯಶಾಹಿ ಅಮೆರಿಕಕ್ಕೆ ಒತ್ತೆಯಾಳಾಗಿಸುವ ದುಷ್ಟ ಯೋಜನೆಯೊಂದಿಗೆ ಈ ರೀತಿ ವರ್ತಿಸುತ್ತಿದೆ. ಬಿಜೆಪಿಯ ಕೈಯಲ್ಲಿ ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯ ಎದುರಾಗಿರುವುದು ನಮ್ಮ ಕಣ್ಣಮುಂದೆ ಗೋಚರಿಸುತ್ತಿದೆ.

ಇದು ರಾಷ್ಟ್ರವನ್ನು ದುರ್ಬಲಗೊಳಿಸುತ್ತದೆ

ಧಾರ್ಮಿಕ ಸೌಹಾರ್ದತೆ ಮತ್ತು ರಾಷ್ಟ್ರೀಯ ಏಕತೆ ಕಾಪಾಡುವ ಮೂಲಕ ಮಾತ್ರ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ. ದೇಶವನ್ನು ದುರ್ಬಲಗೊಳಿಸುವ ಮೋದಿಯವರ ಹೇಳಿಕೆಯನ್ನು ಪ್ರತಿಯೊಬ್ಬ ಭಾರತೀಯನೂ ಖಂಡಿಸಬೇಕು. ಇದು ಮುಸ್ಲಿಮರ ಸಮಸ್ಯೆ ಮಾತ್ರವಲ್ಲ. ಹಿಂದೂಗಳ ಉನ್ನತಿಗೂ ಅಲ್ಲ. ಹಿಂದೂ–ಮುಸ್ಲಿಂ ಸಂಘರ್ಷ ಹೆಚ್ಚಿಸಿ ರಾಜಕೀಯ ಲಾಭ ಪಡೆಯುವ ಬಿಜೆಪಿಯ ದುಷ್ಟ ಯೋಜನೆ ಇದಾಗಿದೆ. ಅದರ ಹೆಸರು ಹಿಂದುತ್ವ. ಬಿಜೆಪಿಯ ಹಿಂದುತ್ವದ ಸಿದ್ಧಾಂತಕ್ಕೂ ಹಿಂದೂಗಳಿಗೂ ಯಾವುದೇ ಸಂಬಂಧವಿಲ್ಲ. ಹಿಂದುತ್ವ ಮತ್ತು ಹಿಂದೂ ಧರ್ಮ ಎರಡೂ ಬೇರೆ ಬೇರೆ ಎಂದು ಆರ್‌ಎಸ್‌ಎಸ್ ನಾಯಕರೇ ಹೇಳಿದ್ದಾರೆ. ಹಿಂದುತ್ವ ಎಂಬ ಪದವನ್ನು ಪರಿಚಯಿಸಿದ ಸಾವರ್ಕರ್ ಕೂಡ ಅದನ್ನೇ ಹೇಳಿದ್ದಾರೆ. ಹಿಂದುತ್ವ ಎಂಬುದು ಬಿಜೆಪಿಗೆ ಅಧಿಕಾರ ಹಿಡಿಯುವ ರಾಜಕೀಯ ಯೋಜನೆಯಾಗಿದೆ. ಈ ದುಷ್ಟ ತಂತ್ರಕ್ಕೆ ಸಿಲುಕುವ ಯಾವುದೇ ಹಿಂದೂ ಇದು ರಾಷ್ಟ್ರವನ್ನು ದುರ್ಬಲಗೊಳಿಸುತ್ತದೆ ಎಂಬುದನ್ನು ಅರಿತುಕೊಳ್ಳಬೇಕು.

ಜೆಡಿಎಸ್ ಬಣ್ಣ ಬಯಲು

ಪ್ರಧಾನಿಯವರು ಮತ ಗಳಿಕೆಗಾಗಿ ಇಂತಹ ಅತಿರೇಕದ ಜನಾಂಗೀಯ ವಿರೋಧಿ ಹೇಳಿಕೆಗಳನ್ನು ನೀಡಿದರೂ ನಮ್ಮ ರಾಜ್ಯದ ಪ್ರಮುಖ ಪ್ರಾದೇಶಿಕ ಪಕ್ಷ ಜೆಡಿಎಸ್ ಅದನ್ನು ಖಂಡಿಸಿ ಪ್ರತಿಕ್ರಿಯಿಸಲಿಲ್ಲ. ಬದಲಾಗಿ, ಜೆಡಿಎಸ್ ನ ಸ್ಥಳೀಯ ನಾಯಕರೊಬ್ಬರು 'ಅದು ಮುಸ್ಲೀಮರಿಗೆ ಹೇಳಿದ್ದಲ್ಲ' ಎಂಬಂತೆ ಮೋದಿಯವರ ದ್ವೇಷದ ಮಾತುಗಳನ್ನು ಸಮರ್ಥಿಸಿಕೊಂಡಿದ್ದಾರೆ. ದೇವೇಗೌಡರ ಕುಟುಂಬದ ರಾಜಕೀಯ ಹಿತಾಸಕ್ತಿಗಾಗಿ ರಾಜ್ಯದ ಹಿತಾಸಕ್ತಿಯನ್ನು ಪಣಕ್ಕಿಡುತ್ತಿದ್ದಾರೆ. ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಮಾಡಲಾಗುತ್ತಿದೆ. ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ಮೌನವಾಗಿರುವುದು ಜಾತ್ಯತೀತತೆಗೆ ನೀರೆರೆದುಕೊಂಡಂತೆ. ಜೆಡಿಎಸ್ ನ ಜಾತ್ಯತೀತರು ಮತ್ತು ದೇಶಭಕ್ತರು ಮೋದಿಯವರ ಹೇಳಿಕೆಗಳನ್ನು ತಿರಸ್ಕರಿಸಬೇಕು. ನಮ್ಮ ರಾಜ್ಯದಲ್ಲಿ ಮೋದಿ ಮತ್ತು ಬಿಜೆಪಿಯನ್ನು ಹಾಡಿ ಹೊಗಳುತ್ತಿರುವ ಪಕ್ಷಗಳನ್ನು ಸೋಲಿಸಲು ಅವರೆಲ್ಲಾ ಮುಂದಾಗಬೇಕು. ಸಂಘಪರಿವಾರ ಈಗಾಗಲೇ ಕರ್ನಾಟಕದ ಕೆಲವು ಭಾಗಗಳನ್ನು ಹಿಂದುತ್ವದ ಪ್ರಯೋಗ ಶಾಲೆಯನ್ನಾಗಿ ಮಾಡಿದ್ದಾರೆ. ಇದು ಮತ್ತಷ್ಟು ಪ್ರದೇಶಗಳಿಗೆ ವಿಸ್ತರಿಸುವ ಅಪಾಯಗಳಿವೆ. ಒಂದೊಮ್ಮೆ ದೇಶ ಹೊತ್ತಿ ಉರಿಯುತ್ತಿದ್ದರೆ ಕರ್ನಾಟಕವೂ ಅದರಿಂದ ಹೊರತಾಗಿರಲು ಸಾಧ್ಯವಿಲ್ಲ.

ಚುನಾವಣಾ ಆಯೋಗ ಸತ್ತಿದೆಯೇ?

ಮೋದಿ ಅವರ ಹೇಳಿಕೆಗಳು ಚುನಾವಣಾ ನೀತಿ ಸಂಹಿತೆಗೆ (ಎಂಸಿಸಿ) ವಿರುದ್ಧವಾಗಿದ್ದರೂ ಚುನಾವಣಾ ಆಯೋಗ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂಬುದೇ ಹೆಚ್ಚು ಆತಂಕಕಾರಿ ವಿಷಯ. ಪ್ರತಿ ಸಣ್ಣ ಪ್ರತಿಕ್ರಿಯೆಗೂ ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ಚುನಾವಣಾ ಆಯೋಗ, ದೇಶದ ಮೇಲೆ ತೀವ್ರ ಪರಿಣಾಮ ಬೀರುವ ಅಪಾಯಕಾರಿ ಪ್ರಧಾನಿ ಭಾಷಣದ ಬಗ್ಗೆ ಪ್ರತಿಕ್ರಿಯಿಸದೆ ಮೌನ ವಹಿಸಿರುವುದು ಅತಿರೇಕದ ಸಂಗತಿ. ಇದು ಚುನಾವಣಾ ಆಯೋಗದ ವಿಶ್ವಾಸಾರ್ಹತೆಗೆ ಧಕ್ಕೆ ತಂದಿದೆ. ಸಿಪಿಐ(ಎಂ)ನ ದೆಹಲಿ ಶಾಖೆ, ಬೃಂದಾಕಾರತ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದರೂ ನೋಂದಣಿ ಮಾಡದಿರುವುದು ಕಾನೂನುಬಾಹಿರವಾಗಿದೆ. ಎಲ್ಲಾ ಸಾಂವಿಧಾನಿಕ ವ್ಯವಸ್ಥೆಗಳು ಮೋದಿಯ ಮುಂದೆ ಮಂಡಿಯೂರಿ ನಿಂತಿರುವುದು ಅಪಾಯ ಸಮೀಪಿಸುತ್ತಿದೆ ಎಂಬುದರ ಸೂಚನೆಯಾಗಿದೆ.

ಗಾಳಿಗೆ ತೂರಿಹೋದ ಅಭಿವೃದ್ಧಿ ಕಾರ್ಯಸೂಚಿ; ಭ್ರಷ್ಟಾಚಾರದಲ್ಲಿ ಬಿಜೆಪಿ

2014ರಲ್ಲಿ ಮೊಟ್ಟಮೊದಲ ಬಾರಿಗೆ ರಾಷ್ಟ್ರರಾಜಕಾರಣಕ್ಕೆ ಕಾಲಿಟ್ಟು ಪುಟ 15 ಕ್ಕೆ

"ಇಂದು ಅವರಾಗಿದ್ದರೆ ನಾಳೆ ನಾವೇ"

"ಇಂದು ಅವರಾಗಿದ್ದರೆ ನಾಳೆ ನಾವೇ"; ರಾಜಸ್ಥಾನದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಮುಸ್ಲಿಮರ ಬಗ್ಗೆ ಮೋದಿ ಆಡಿದ ಮಾತುಗಳಿಗೆ ಪ್ರತಿಕ್ರಿಯೆಯಾಗಿ ಪಂಜಾಬಿಗಳು ಮತ್ತು ವಿಶೇಷವಾಗಿ ಸಿಖ್ ಸಮುದಾಯದ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುವ ಶಿರೋಮಣಿ ಅಕಾಲಿ ದಳವು ನೀಡಿದ ಎಚ್ಚರಿಕೆಯ ಹೇಳಿಕೆ ಇದು.

ಮೋದಿಯವರ ಭಾಷಣದ ತುಣುಕನ್ನು ಎಕ್ಸ್ ನಲ್ಲಿ ಹಂಚಿಕೊಂಡಿರುವ ಅಕಾಲಿದಳದ ರಾಷ್ಟ್ರೀಯ ವಕ್ತಾರ ಪರಂಬನ್ಸ್ ಸಿಂಗ್ ರೊಮಾನಾ ಅವರು: "ನಮ್ಮೆಲ್ಲರ ತಪ್ಪೇನೆಂದರೆ, ನಮ್ಮ ವಿರುದ್ಧ ಅನ್ಯಾಯವಾದಾಗ ಮಾತ್ರ ನಾವು ಅದರ ಬಗ್ಗೆ ಯೋಚಿಸುತ್ತೇವೆ. ಇದು ನಾಚಿಕೆಗೇಡಿನ ಮತ್ತು ತುಂಬಾ ವಿಷಾದದ ಸಂಗತಿ. ಇಂದು ಅವರಾಗಿದ್ದರೆ ನಾಳೆ ನಾವೇ ಆಗುತ್ತೇವೆ." ಎಂದಿದ್ದಾರೆ.

2020 ರಲ್ಲಿ ರೈತರ ಚಳವಳಿಯು ಬಿಜೆಪಿ ಜೊತೆಗಿನ ಅವರ ಔಪಚಾರಿಕ ಮೈತ್ರಿಯನ್ನು ಮುರಿಸುಕೊಳ್ಳುವ ಮೊದಲು ಹಲವಾರು ವರ್ಷಗಳ ಕಾಲ ಕೇಂದ್ರ ಸರ್ಕಾರದಲ್ಲಿ ಅಧಿಕಾರವನ್ನು ಹಂಚಿಕೊಂಡ ಅಕಾಲಿದಳವು ಮೋದಿ ವಿರುದ್ಧ ಮಾಡಿದ ಪ್ರಬಲ ದಾಳಿ ಇದಾಗಿದೆ.

ಮತ್ತೊಬ್ಬ ಹಿರಿಯ ಅಕಾಲಿ ನಾಯಕ ಬಿಕ್ರಮ್ ಸಿಂಗ್ ಮಜಿಥಿಯಾ ಅವರು ಮೋದಿ ವಿರುದ್ಧ ಗುಡುಗಿದ್ದಾರೆ. "ಶ್ರೀ ಗುರುನಾನಕ್ ದೇವ್ ಜಿ ಅವರು 'ಸರ್ಬತ್ ದ ಭಲಾ' ಎಂದು ಹೇಳುವ ಮೂಲಕ, ಎಲ್ಲ ಮನುಷ್ಯರನ್ನು ಸಮಾನವಾಗಿ ಕಾಣಲು ಮತ್ತು ಎಲ್ಲರಿಗೂ ಒಳ್ಳೆಯದನ್ನು ಹುಡುಕಲು ನಮಗೆ ಕಲಿಸಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಎಲ್ಲಾ ನಾಗರಿಕರನ್ನು ಸಮಾನವಾಗಿ ಪರಿಗಣಿಸುವ ನಮ್ಮ ಸಂವಿಧಾನವನ್ನು ದೇಶಕ್ಕಾಗಿ ಕೊಟ್ಟಿದ್ದಾರೆ. ಅವರು ಸದಾ ಅಲ್ಪಸಂಖ್ಯಾತರು, ಪಂಜಾಬ್ ಮತ್ತು ಪಂಜಾಬಿಯತ್ ಪರವಾಗಿ ನಿಂತಿದ್ದಾರೆ. ಪಿಎಂ ನರೇಂದ್ರ ಮೋದಿ ಜೀ ಇದೇನಾ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್?' ಎಂದು ಮಜಿಥಿಯಾ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮೋದಿಯ ದ್ವೇಷ ಹಾಗೂ ಪರಮತ ನಿಂದನೆ ಭಾಷಣಗಳು

ಪ್ರಕಾಶ್ ಕಾರತ್

ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನದ ಎರಡು ದಿನಗಳ ನಂತರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾಡಿದ ದ್ವೇಷ ಭಾಷಣಕ್ಕೆ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿ ಕೂಡ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಅವರು ಬಳಸಿದ ಭಾಷೆ ಹಾಗೂ ಅವರ ಪರಮತ ನಿಂದನೆಯು ಮುಸ್ಲಿಂ ಸಮುದಾಯದ ವಿರುದ್ಧ ಹಾಗೂ ಮುಸ್ಲಿಮರ ಪರ ಇವೆಯೆನ್ನಲಾದ ರಾಜಕೀಯ ಪಕ್ಷಗಳ ವಿರುದ್ಧ ದ್ವೇಷವನ್ನು ಪ್ರಚೋದಿಸುವಂತಿರುವುದು ಸ್ಪಷ್ಟವಾಗಿದೆ. 2002ರಲ್ಲಿ ತಾನು ಮುಖ್ಯಮಂತ್ರಿಯಾಗಿದ್ದಾಗ ಗುಜರಾತ್ ನರಮೇಧದ ನಂತರದ ಭಾಷಣಗಳಲ್ಲಿ ತಾನು ಬಳಸಿದಂಥದ್ದೇ ಭಾಷೆಯನ್ನೇ ಮೋದಿ ಇಲ್ಲಿ ಬಳಸಿಕೊಂಡಿರುವುದಕ್ಕೆ ಹೋಲಿಕೆ ಕಾಣುತ್ತದೆ. ಪ್ರಸಕ್ತ ಲೋಕಸಭೆ ಚುನಾವಣೆಯ ಪ್ರಚಾರದಲ್ಲಿ ಮತ್ತೊಂದು ಸಲ ಅದೇ ರೀತಿಯ ತಂತ್ರಕ್ಕೆ ಅವರು ಮರಳಿದ್ದು ಯಾಕೆ ಎನ್ನುವುದನ್ನು ವಿಶ್ಲೇಷಿಸುವುದು ಮಹತ್ವದ್ದಾಗುತ್ತದೆ. ಏಪ್ರಿಲ್ 19ರಂದು 102 ಕ್ಷೇತ್ರಗಳಲ್ಲಿ ಮತದಾನ ನಡೆದಿದೆ. ಆ ಪೈಕಿ 40 ತಮಿಳುನಾಡು ಹಾಗೂ ಪುದುಚೇರಿಗೆ ಸಂಬಂಧಿಸಿದ ಸ್ಥಾನಗಳಾಗಿವೆ. ಅಲ್ಲಿ ಬಿಜೆಪಿ ಶೂನ್ಯ ಸಂಪಾದನೆ ಮಾಡುವುದಂತೂ ಬಹುತೇಕ ನಿಶ್ಚಿತವಾಗಿದೆ. ಇನ್ನುಳಿದ ಸ್ಥಾನಗಳಲ್ಲಿ ರಾಜಸ್ಥಾನ 12, ಉತ್ತರ ಪ್ರದೇಶ 8, ಮಧ್ಯ ಪ್ರದೇಶ 6, ಉತ್ತರಾಖಂಡ, ಮಹಾರಾಷ್ಟ್ರ ಮತ್ತು ಅಸ್ಸಾಂ ತಲಾ ಐದು, ಬಿಹಾರ 4, ಪಶ್ಚಿಮ ಬಂಗಾಳ 3. ಈಶಾನ್ಯ ಭಾರತದ 6, ಛತ್ತೀಸ್‌ಗಢದ ಒಂದು ಮತ್ತು ಜಮ್ಮು–ಕಾಶ್ಮೀರದ ಒಂದು ಕ್ಷೇತ್ರ ಇವೆ. ಕಳೆದ ಚುನಾವಣೆಗಳಲ್ಲಿ ಈ ರಾಜ್ಯಗಳಲ್ಲಿ ತಾನು ಹೊಂದಿದ್ದ ಸ್ಥಾನಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಆದರೆ, ಈ ಸಲ ಉತ್ತರ ಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಬಿಹಾರದಲ್ಲಿ ಬಿಜೆಪಿ ಸಾಧನೆ ಕಡಿಮೆಯಾಗಿರುತ್ತದೆ ಎಂಬ ಸುಳಿವು ಸಿಕ್ಕಿದೆ. ಹಾಗೂ ಈ ಪ್ರವೃತ್ತಿ ಮುಂದುವರಿದರೆ ಭಾರಿ ಬಹುಮತದೊಂದಿಗೆ ಮೂರನೇ ಸಲ ಅಧಿಕಾರಕ್ಕೆ ಬರುವ ಬಿಜೆಪಿ ಕನಸು ಕನಸಾಗಿಯೇ ಉಳಿಯಲಿದೆ ಎನ್ನುವುದು ಗೊತ್ತಾಗಿದೆ. ಜನರಲ್ಲಿ ಮಡುಗಟ್ಟಿರುವ ಈ ವ್ಯಾಪಕವಾದ ಅತೃಪ್ತಿಯೇ ಪ್ರಧಾನಿ ಮೋದಿ ಮುಸ್ಲಿಮರ ವಿರುದ್ಧ ಬಳಸಲಾಗುವ ತಂತ್ರಗಳಿಗೆ ಮೊರೆ ಹೋಗುತ್ತಿದ್ದಾರೆ. ಮುಸ್ಲಿಮರ ಪರ ಇರುವರೆನ್ನಲಾದವರ ವಿರುದ್ಧವೂ ಅವರು ಕೆಂಡ ಕಾರುತ್ತಿದ್ದಾರೆ. ಅದರಲ್ಲಿ ದ್ವೇಷದ ಅಂಶ ಸ್ವಲ್ಪ ಜಾಸ್ತಿಯೇ ಇದೆ. ಕೆಲವು ತಿಂಗಳ ಹಿಂದೆ ವಿಧಾನಸಭೆ ಚುನಾವಣೆಯಲ್ಲಿ ಭಾರಿ ಬಹುಮತ ನೀಡಿದ್ದ ರಾಜಸ್ಥಾನದಲ್ಲಿ ಏಪ್ರಿಲ್ 19ರಂದು ನಡೆದ ಮತದಾನದಲ್ಲಿ ಆ ಪರಿಯ ಬಹುಮತ ದೊರಕಲಾರದೆಂಬ ಹತಾಶೆಯಿಂದ, ಆ ರಾಜ್ಯದ ಬನ್ಸ್‌ವಾರಾದಲ್ಲಿ ಮಾಡಿದ ಭಾಷಣದಲ್ಲಿ ಮೋದಿ ಸುಳ್ಳಿನ ಸರಮಾಲೆಯನ್ನೇ ಹೆಣೆದರು.

ಹಸಿ ಹಸಿ ಸುಳ್ಳು

ರಾಷ್ಟ್ರೀಯ ಸಂಪನ್ಮೂಲದಲ್ಲಿ ಮೊದಲ ಪಾಲನ್ನು ಮುಸ್ಲಿಮರಿಗೆ ನೀಡಲು ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂದು ಮೋದಿ ಬಡಬಡಿಸಿದರು. ಮುಸ್ಲಿಮರು 'ನುಸುಳುಕೋರರು' ಹಾಗೂ 'ಹೆಚ್ಚು ಮಕ್ಕಳಿರುವವರು' ಎಂದು ಹೇಳಿದರು. ಸಂಪತ್ತು ಹಂಚುವ ಈ ಆಶ್ವಾಸನೆಯನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನೀಡಿದ್ದಾರೆಂದು ಮೋದಿ ಹಸಿ ಹಸಿ ಸುಳ್ಳನ್ನೂ ಒದರಿದರು. ನಂತರ, ಒಂದು ವೇಳೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹಿಂದೂ ಮಹಿಳೆಯರ ಮಂಗಳಸೂತ್ರದಿಂದ ಚಿನ್ನವನ್ನು ತೆಗೆದು ಅದರ ಬಹುಭಾಗವನ್ನು ಮುಸ್ಲಿಮರಿಗೆ ಹಂಚಲಾಗುತ್ತದೆ ಎಂದು ಮೋದಿ ಭವಿಷ್ಯ ನುಡಿದರು! ವಿಶೇಷವಾಗಿ ಹಿಂದೂ ಮಹಿಳೆಯರನ್ನು ರೊಚ್ಚಿಗೆಬ್ಬಿಸಿ ಅವರನ್ನು ಭಾವನಾತ್ಮಕವಾಗಿ ಕೆರಳಿಸುವ ಕುತಂತ್ರ ಇದಾಗಿದೆ. ರಾಜಸ್ಥಾನದಲ್ಲೇ ಮಾಡಿದ ಇನ್ನೊಂದು ಭಾಷಣದಲ್ಲಿ, ದಲಿತರು ಮತ್ತು ಬುಡಕಟ್ಟು ಜನರನ್ನು ವಂಚಿಸಿ ಮುಸ್ಲಿಮರಿಗೆ ಮೀಸಲಾತಿ ಸೌಲಭ್ಯಗಳನ್ನು ನೀಡುವುದು ಕಾಂಗ್ರೆಸ್ ಬಯಕೆಯಾಗಿದೆ ಎಂದು ಮೋದಿ ಸುಳ್ಳು ಹೇಳಿದರು. ತನ್ನ ನೀತಿಗಳಿಗೆ ವಿರೋಧವಾಗಿರುವ ಶೋಷಿತ ಬಡವರನ್ನು ಒಡೆಯುವ ತಂತ್ರಗಾರಿಕೆ ಇದಾಗಿದೆ. ಬಿಜೆಪಿ ಅಧಿಕಾರಕ್ಕೆ ಮರಳಲು ಹಿಂದಿ ಭಾಷಿಕ ರಾಜ್ಯಗಳು ನಿರ್ಣಾಯಕ ಪಾತ್ರ ವಹಿಸಲಿರುವುದರಿಂದ ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯ ಪ್ರದೇಶದಲ್ಲಿ ಕೂಡ ಬಹುತೇಕವಾಗಿ ಅದನ್ನೇ ನಿರೀಕ್ಷಿಸಬಹುದಾಗಿದೆ. ಭಾರತದಲ್ಲಿ ಷರಿಯತ್ ಕಾನೂನನ್ನು ಜಾರಿ ಮಾಡುವುದು ಕಾಂಗ್ರೆಸ್ ಬಯಕೆಯಾಗಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಹೇಳಿರುವುದು ಈ ರೀತಿಯ ನಿರೀಕ್ಷಿತ ಭಾಷಣಗಳ ಒಂದು ಸ್ಯಾಂಪಲ್ ಆಗಿದೆ.

ಪ್ರಧಾನ ಮಂತ್ರಿಯ ಭಾಷಣಗಳು ಬಿಜೆಪಿಯ ಅಪ್ಪಟ ಬೆಂಬಲಿಗ ಮತದಾರರಲ್ಲಿ ಉತ್ಸಾಹವನ್ನು ಉದ್ದೀಪಿಸಿದೆ. ಚುನಾವಣಾ ಪ್ರಚಾರದಲ್ಲಿ ಬೆಂಬಲ ಗಿಟ್ಟಿಸಲು ಮಾತ್ರವಲ್ಲದೆ ತನ್ನ ವಿಫಲ ನೀತಿಗಳ ವಿರುದ್ಧ ರೂಪುಗೊಳ್ಳುತ್ತಿರುವ ಜನಾಕ್ರೋಶವನ್ನು ಹತ್ತಿಕ್ಕಲು ಕೂಡ ಕೋಮುವಾದ ಧ್ರುವೀಕರಣ ಮಾಡುವುದು ಅಗತ್ಯ ಎಂದು ಬಿಜೆಪಿ ಭಾವಿಸಿದೆ. ಭಾರತದಲ್ಲಿ ಹಾಗೂ ವಿದೇಶಗಳ ಭಾರತೀಯ ಕಾರ್ಪೊರೇಟ್ ಕುಳಗಳಲ್ಲಿ ಕೂಡ ಬಿಜೆಪಿಯ ಈ ನಿಲವಿಗೆ ಬೆಂಬಲ ಸಿಕ್ಕಿದೆ. ಸಂಪತ್ತಿನ ಮರುಹಂಚಿಕೆಯ ನೀತಿಗಳನ್ನು ಮತ್ತು ಬಡತನ ಹಾಗೂ ಅಸಮಾನತೆಯನ್ನು ತಗ್ಗಿಸಲು ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸಬೇಕೆಂಬ ನೀತಿಗಳನ್ನು ಸಂಪೂರ್ಣವಾಗಿ ವಿರೋಧಿಸುವ ಬಿಜೆಪಿ ಧೋರಣೆಯನ್ನು ಕಾರ್ಪೊರೇಟ್ ವಲಯ ಸ್ವಾಗತಿಸಿದೆ.

ಪ್ರಧಾನಿ ವಿರುದ್ಧ ದೂರು

ಸಂವಿಧಾನ, ಭಾರತೀಯ ನಾಗರಿಕರ ನಡುವೆ ದ್ವೇಷ ಮತ್ತು ಅಸಹನೆ ಬಿತ್ತುವುದನ್ನು ವಿರೋಧಿಸುವ ಕಾನೂನುಗಳನ್ನು ಮತ್ತು ಪ್ರಸ್ತುತ ಜಾರಿಯಲ್ಲಿರುವ ಮಾದರಿ ನೀತಿ ಸಂಹಿತೆಗಳನ್ನು ಉಲ್ಲಂಘಿಸುವ ಪ್ರಧಾನ ಮಂತ್ರಿಯ ಭಾಷಣಗಳ ಬಗ್ಗೆ ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷಗಳು ಭಾರತದ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿವೆ. ಆರಂಭದಲ್ಲಿ 'ನೋ ಕಮೆಂಟ್ಸ್' ಎನ್ನುವುದು ಚುನಾವಣಾ ಆಯೋಗದ ಪ್ರತಿಕ್ರಿಯೆಯಾಗಿತ್ತು. ತದನಂತರ, ದೂರುಗಳ 'ಅಧ್ಯಯನ' ಮಾಡುತ್ತಿರುವುದಾಗಿ ಒಂದು ಹೇಳಿಕೆ ನೀಡಿತು. ಚುನಾವಣೆ ಆಯೋಗ ತನ್ನ ಸಾಂವಿಧಾನಿಕ ಜವಾಬ್ದಾರಿಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದನ್ನು ಮಿಲಿಯಾಂತರ ಜನರು ಆಸಕ್ತಿಯಿಂದ ಗಮನಿಸುತ್ತಿದ್ದಾರೆ. ಹಾಗೆ ಮಾಡಲು ಆಯೋಗ ವಿಫಲವಾದರೆ ಭಾರತೀಯ ಪ್ರಜಾಪ್ರಭುತ್ವ ಇನ್ನಷ್ಟು ದುರ್ಬಲಗೊಳ್ಳುತ್ತದೆ. ಚುನಾವಣೆ ಆಯೋಗವನ್ನು ಎಷ್ಟರ ಮಟ್ಟಿಗೆ 'ಪಳಗಿಸಲಾಗಿದೆ' ಎನ್ನುವುದಕ್ಕೆ ಇದೊಂದು ಪರೀಕ್ಷೆಯಾಗಿದೆ. ಮೋದಿಯ ದ್ವೇಷ ಭಾಷಣಗಳು ಅವರ ಪಕ್ಷದ ಕುಸಿಯುತ್ತಿರುವ ಅವಕಾಶಗಳನ್ನು ಮರಳಿಸಲು ನೆರವಾಗಲಿವೆಯೇ? ಭಾರತೀಯ ಮತದಾರರು ನಿರುದ್ಯೋಗ, ಬಡತನ ಮತ್ತು ಭ್ರಷ್ಟಾಚಾರದ ಬಗ್ಗೆ ಹೆಚ್ಚು ಚಿಂತಿತರಾಗಿರುವುದನ್ನು ಅನೇಕ ಚೂವಣಾ ಸಮೀಕ್ಷೆಗಳು ತೋರಿಸಿ ಕೊಟ್ಟಿವೆ. ಅದು ನಿಜವೇ ಎಂದಾದಲ್ಲಿ, ಮೋದಿಯ ಪ್ರಯತ್ನಗಳು ವಿಫಲವಾಗಲಿವೆ. ಬದಲಿಗೆ ಖಂಡನೆಗೆ ಗುರಿಯಾಗಲಿವೆ.

ಅನು: ವಿಶ್ವ

"ಮೋದಿ ದ್ವೇಷವನ್ನು ಉತ್ತೇಜಿಸುತ್ತಿದ್ದಾರೆ" ಪ್ರಧಾನಿಗಳ ವಿರುದ್ಧ ಸಿಪಿಐ(ಎಂ) ಮುಖಂಡರ ದೂರು ದಿಲ್ಲಿ ಪೋಲೀಸ್ ಕಮಿಷನರ್ ಗೆ ಪತ್ರ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರಟ್, ಮತ್ತು ಸಿಪಿಐ(ಎಂ)ನ ದಿಲ್ಲಿ ರಾಜ್ಯ ಕಾರ್ಯದರ್ಶಿ ಪುಷ್ಪಿಂದರ್ ಸಿಂಗ್ ಗ್ರೆವಾಲ್ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸಲು ಮತ್ತು ರಾಷ್ಟ್ರೀಯ ಸಮಗ್ರತೆಗೆ ಮಾರಕವಾದ ಸುಳ್ಳು ಆರೋಪಣೆಗಳು ಮತ್ತು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ದಿಲ್ಲಿಯ ಮಂದಿರ್ ಮಾರ್ಗ್ ಪೊಲೀಸ್ ಠಾಣೆಯಲ್ಲಿ ಎಸ್‌ಎಚ್‌ಒ ಗೆ ದೂರು ನೀಡಿ, ತಕ್ಷಣವೇ ಎಫ್‌ಐಆರ್ ದಾಖಲಿಸಲು ಮತ್ತು ಸೂಕ್ತವಾಗಿ ಮತ್ತು ತುರ್ತಾಗಿ ತನಿಖೆ ನಡೆಸುವಂತೆ ವಿನಂತಿಸಿದ್ದರು.

ಅಲ್ಲಿ ಈ ದೂರನ್ನು ಸ್ವೀಕರಿಸಲು ನಿರಾಕರಿಸಿದ್ದರಿಂದ ಅದನ್ನು ದಿಲ್ಲಿ ಪೊಲೀಸ್ ಆಯುಕ್ತರಿಗೆ ಕಳುಹಿಸಿದ್ದಾರೆ.

21.04.2024 ರಂದು ರಾಜಸ್ಥಾನದ ಭನ್ಸ್ ವಾರಾದಲ್ಲಿ ನಡೆದ ಚುನಾವಣಾ ರ್‍ಯಾಲಿಯ ಭಾಷಣದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಉದ್ದೇಶಪೂರ್ವಕವಾಗಿ ಮತ್ತು ವ್ಯೂಹಾತ್ಮಕವಾಗಿ ಮುಸ್ಲಿಂ ವಿರೋಧಿ ರೂಪಕಗಳನ್ನು ಬಳಸಿ, ಹಿಂದೂ ಸಮುದಾಯದಲ್ಲಿ ಅವರ ಆಸ್ತಿ ಬೆದರಿಕೆಗೊಳಗಾಗಿದೆ, ಏಕೆಂದರೆ ಸಮುದಾಯದ ಆಸ್ತಿಗಳು, ವಿಶೇಷವಾಗಿ (ಹಿಂದೂ) ಮಹಿಳೆಯರ ಚಿನ್ನ ಮತ್ತು ಮಂಗಳಸೂತ್ರವನ್ನು ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯದ ಸದಸ್ಯರಿಗೆ ಹಂಚುತ್ತದೆ ಎಂಬ ಭಾವನೆಯನ್ನು ಮೂಡಿಸಿದ್ದಾರೆ. ಇದು ಒಂದು ನಿರ್ದಿಷ್ಟ ಗುಂಪಿನ ಸದಸ್ಯತ್ವದ ಆಧಾರದ ಮೇಲೆ ವ್ಯಕ್ತಿಗಳನ್ನು ಗುರಿಯಾಗಿಸುವ ಪರಿಣಾಮವನ್ನು ಹೊಂದಿದೆ ಮತ್ತು ಆ ಗುಂಪನ್ನು ದ್ವೇಷಕ್ಕೆ ಒಡ್ಡುತ್ತದೆ.

"ಇದು ಐಪಿಸಿ ಸೆಕ್ಷನ್ 153ಂ/153ಃ/298/504/505 ಅಡಿಯಲ್ಲಿ ದ್ವೇಷಭಾಷಣವಾಗುತ್ತದೆ. ಪ್ರಧಾನಿಗಳು ಮಾಡಿರುವಂತೆ ಭಾಷಣವನ್ನು ಬಳಸಿ ಮತ ಯಾಚನೆ ಮಾಡುವುದು ಸಂಪೂರ್ಣ ಕಾನೂನುಬಾಹಿರ" ಎಂದು ಈ ಪತ್ರದಲ್ಲಿ ಹೇಳಲಾಗಿದೆ.

ಭಾರತೀಯ ಮುಸ್ಲಿಮರನ್ನು ನುಸುಳುಕೋರರು, ಲೂಟಿಕೋರರು ಮತ್ತು ಹಿಂದೂಗಳಿಗೆ ಮತ್ತು ವಿಶೇಷವಾಗಿ ಹಿಂದೂ ಮಹಿಳೆಯರಿಗೆ ಬೆದರಿಕೆ ಎಂದು ನಿರೂಪಿಸುವುದು ಕೋಮುವಾದದ ಅಸಾಮಾನ್ಯ ಲಕ್ಷಣವೇನಲ್ಲ. ಸುಪ್ರೀಂ ಕೋರ್ಟ್ ಬಾಬು ರಾವ್ ಪಟೇಲ್ ತಿ ದೆಹಲಿ (ಆಡಳಿತ) (1980)2 ಖಅಅ 402 ಪ್ರಕರಣದ ತೀರ್ಪಿನಲ್ಲಿ ಹಾಗೆಂದು ಖಂಡಿಸಿರುವ ಹಿಂದಿನ ನಿದರ್ಶನವಿದೆ. ಈಗಲೂ ಸಹ ಕೇವಲ ಗೂಗಲ್ ಹುಡುಕಾಟ ನಡೆಸಿದರೆ, ಭಾರತದಲ್ಲಿ ಮುಸ್ಲಿಮರು (ಹೆಚ್ಚಾಗಿ ಮೊಗಲ್ ಕೊಂಡಿ ಹೊಂದಿರುವವರು) "ಅತಿಕ್ರಮಣಕಾರರು" ಎಂದು ವರ್ಣಿಸುವ ಭಾಷಣಗಳು ಮತ್ತು ಲೇಖನಗಳನ್ನು ಕಾಣಬಹುದು.

ಪ್ರಧಾನಮಂತ್ರಿಗಳು ಹಿಂದೂಗಳ ಆಸ್ತಿಯನ್ನು ಯಾರಿಗೆ ಹಂಚಲಾಗುತ್ತದೆ ಎಂಬುದನ್ನು ವರ್ಣಿಸಲು ಅಸಾಂವಿಧಾನಿಕವಾಗಿ ಮತ್ತು ಉದ್ದೇಶಪೂರ್ವಕವಾಗಿ, "ಘುಸ್ಪೈಂಟಿಯೋಂ" (ಅಂದರೆ "ನುಸುಳುಕೋರರು" ಅಥವಾ "ಅತಿಕ್ರಮಣಕಾರರು") ಎಂಬ ಪದ ಬಳಸಿದ್ದಾರೆ. ರಾಷ್ಟ್ರದ ಸಂಪನ್ಮೂಲಗಳ ಮೇಲೆ ಮುಸ್ಲಿಮರಿಗೆ ಮೊದಲ ಹಕ್ಕಿದೆ ಎಂದು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಪ್ರತಿಪಾದಿಸಿರುವುದಾಗಿ ಹೇಳುತ್ತಲೇ ಈ ಮಾತು ಹೇಳಿದ್ದಾರೆ. ಇದು ಹಿಂದುಗಳು ಮತ್ತು ಅವರ ಆಸ್ತಿಗಳನ್ನು ಹೆಚ್ಚು ಮಕ್ಕಳನ್ನು ಹೊಂದಿರುವ (ಮುಸ್ಲಿಂ) ನುಸುಳುಕೋರರಿಗೆ ಕೊಡಲಾಗುತ್ತದೆ ಎಂಬ ಅರ್ಥ ಮೂಡಿಸುತ್ತದೆ. ಆದ್ದರಿಂದ ಪ್ರಧಾನಿಯವರ ಭಾಷಣವು ಮುಸ್ಲಿಮರು ಹಿಂದುಗಳನ್ನು ಅಂಚಿಗೆ ತಳ್ಳುತ್ತಾರೆ ಎಂಬ ಭಯವನ್ನು ಹುಟ್ಟಿಸುತ್ತದೆ ಮತ್ತು ಪ್ರಚಾರ ಪಡೆಯುತ್ತದೆ. ಇದು ದ್ವೇಷ ಭಾಷಣವಾಗುತ್ತದೆ ಮಾತ್ರವಲ್ಲದೆ ರಾಷ್ಟ್ರೀಯ ಏಕತೆಗೆ ಬೆದರಿಕೆಯಾಗಿದೆ ಎಂದಿರುವ ಸಿಪಿಐ(ಎಂ) ಮುಖಂಡರ ಈ ಪತ್ರದಲ್ಲಿ ಆರೋಪಿಸಲಾಗಿದೆ.

ಪ್ರಧಾನಮಂತ್ರಿಯವರ ಈ ಹೇಳಿಕೆಗಳು ಪ್ರಚೋದನಕಾರಿ ಮತ್ತು ಕಾನೂನುಬಾಹಿರ ಮತ್ತು ಸಮುದಾಯಗಳ ನಡುವೆ ಕೆಟ್ಟ ಭಾವನೆಯನ್ನು ಉತ್ತೇಜಿಸುತ್ತವೆ. ತಾಯಂದಿರು ಮತ್ತು ಸಹೋದರಿಯರ "ಮಂಗಲಸೂತ್ರ" ಮತ್ತು "ಚಿನ್ನ" ವನ್ನು ಎನ್ನುವಾಗ ಅವರು ಹಿಂದೂ ಸಮುದಾಯವನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತಿದ್ದಾರೆ. ಅದೇ ರೀತಿ, ಪ್ರಧಾನಮಂತ್ರಿಯವರು "ಜಿನಕೆ ಜ್ಯಾದಾ ಬಚ್ಚೆ ಹೇಂ" ಮತ್ತು "ಘುಸ್ ಪೈಂಟಿಯೋಂ" ಎನ್ನುವಾಗ ಮುಸ್ಲಿಂ ಸಮುದಾಯದ ಉಲ್ಲೇಖವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅವರು ತಮ್ಮ ಭಾಷಣದಲ್ಲಿ 'ಮುಸ್ಲಿಂ' ಎಂಬ ಪದಗಳನ್ನು ಸ್ಪಷ್ಟವಾಗಿ ಬಳಸಿದ್ದಾರೆ. ಈ ಸ್ಟೀರಿಯೊಟೈಪ್‌ಗಳು ಮತ್ತು ರೂಪಕಗಳನ್ನು ಬಳಸುವುದು ಮುಸ್ಲಿಂ ಸಮುದಾಯದ ನಿಂದನೆಯಾಗುತ್ತದೆ ಪುಟ 15 ಕ್ಕೆ


ಮೋದಿ ಭಜರಂಗಿ ಭಾಷಣವೂ, ಕಾಂಗ್ರೆಸ್ ಪ್ರಣಾಳಿಕೆಯೂ

ಸಂಪನ್ಮೂಲ ಪುನರ್ಹಂಚಿಕೆ, ಸಾಮಾಜಿಕ ನ್ಯಾಯ, ಪಿತ್ರಾರ್ಜಿತ ತೆರಿಗೆ ಇತ್ಯಾದಿಗಳೂ

ವಸಂತರಾಜ ಎನ್.ಕೆ.

ಚುನಾವಣಾ ಪ್ರಚಾರಕ್ಕೆ ಮೋದಿ ಅವರು ಬೈ ಮಿಸ್ಟೇಕ್ ಸಕಾರಾತ್ಮಕ ತಿರುವು ಕೊಟ್ಟಿದ್ದಾರೆ. ಹಿಂದೆ ಸಂಪನ್ಮೂಲ ಪುನರ್ಹಂಚಿಕೆ, ವೆಲ್ತ್ ಟ್ಯಾಕ್ಸ್, ಇನಹೆರಿಟನ್ಸ್ ಟ್ಯಾಕ್ಸ್ (ಪಿತ್ರಾರ್ಜಿತ ಆಸ್ತಿ ತೆರಿಗೆ) ಯಾವುದಾದರೂ ಚುನಾವಣೆಯಲ್ಲಿ ಚರ್ಚೆಗೆ ಒಳಗಾಗಿದ್ದು ಕೇಳಿದ್ದೀರಾ? ಹೋಗಲಿ ಪ್ರಣಾಳಿಕೆಯೇ, ಅದೂ ಸ್ವಂತ ಬಲದಿಂದ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲದ ವಿರೋಧ ಪಕ್ಷದ ಪ್ರಣಾಳಿಕೆ, ಚರ್ಚೆಯ ವಿಷಯ ಆಗಿದ್ದು ಕೇಳಿದ್ದೀರಾ? ಇದು ಎಷ್ಟು ಸಕಾರಾತ್ಮಕ ತಿರುವು ಎಂದರೆ, ನನಗಂತೂ ಥ್ರಿಲ್ ಆಗಿ ಇದು ನಿಜವಾ ಅಂತ ನನಗೆ ನಾನೇ ಚಿವುಟಿಕೊಂಡೆ! ನನ್ನ ಥ್ರಿಲ್ ಗೆ ಕಾರಣ ಕೇಳಿ, ಅಷ್ಟೇ ಥ್ರಿಲ್ಲಿಂಗ್ ಆಗಿದೆ.

ಪ್ರಧಾನಿ ಮೋದಿ ರಾಜಸ್ಥಾನದ ಬಾನ್ಸ್ ವಾಡಾದಲ್ಲಿ ಮಾಡಿದ ಭಾಷಣ ದೊಡ್ಡ ಸುದ್ದಿಯಾಗಿದೆ. ಬಿಜೆಪಿಗೆ 400+ ಸೀಟುಗಳು ಖಚಿತವಾಗಿರುವಾಗ ಸಾಮಾನ್ಯವಾಗಿ ಭಜರಂಗ ದಳ, ವಿ.ಎಚ್.ಪಿ. ನಂತಹ ಸಂಘಪರಿವಾರದ 'ಅಂಚಿನಲ್ಲಿರುವವರ ತರಹದ ಬೆಂಕಿ ಕಾರುವ' ಭಾಷಣವನ್ನು ಮೋದಿಯವರೇಕೆ ಮಾಡಿದರು? ಯಾವ ಪ್ರಣಾಳಿಕೆಯನ್ನೂ



ಕೃಪೆ: ಪಿ.ಮಹಮ್ಮದ್, ವಾ.ಭಾ.

ಯಾರೂ (ಬಿಡುಗಡೆ ಮಾಡಿದವರನ್ನು ಸೇರಿಸಿ) ಗಂಭೀರವಾಗಿ ತೆಗೆದುಕೊಳ್ಳದ ಪರಿಸ್ಥಿತಿಯಲ್ಲಿ, ಈ ಬಾರಿಯ ಕಾಂಗ್ರೆಸ್ ಪ್ರಣಾಳಿಕೆ ಮತ್ತು ಎಲ್ಲರೂ ಮರೆತು ಬಿಟ್ಟಿರುವ ಮಾಜಿ 'ಆಕ್ಸಿಡೆಂಟಲ್ ಪ್ರಧಾನಿ' ಮನಮೋಹನ ಸಿಂಗ್ ಅವರ, ಯಾರೂ ಗಂಭೀರವಾಗಿ ತೆಗೆದುಕೊಳ್ಳದ 20 ವರ್ಷಗಳ ಹಿಂದಿನ ಹೇಳಿಕೆಯನ್ನು ಮೋದಿ ಯಾಕೆ ಅಷ್ಟು ಗಂಭೀರವಾಗಿ ತೆಗೆದುಕೊಂಡರು? ಇದಕ್ಕೆ ಸೋಲಿನ ಆತಂಕದಿಂದ ಹುಟ್ಟಿದ ಹತಾಶೆ, ಗ್ರಾಂಡ್ ಪ್ಲಾನ್, ಮಾಸ್ಟರ್ ಸ್ಟ್ರಾಟೆಜಿ ಇತ್ಯಾದಿ ಕಾರಣಗಳನ್ನು ಹೇಳಲಾಗುತ್ತಿದೆ. ತಾವು ನಂಬದ 'ಸಬ್ ಕಾ ಸಾಥ್_', 'ವಿಕಾಸ' ಇತ್ಯಾದಿ ಕುರಿತು ಡ್ರಾಮಾಬಾಜಿ ಮಾಡಿ ಬೋರಾಗಿ, ಮೋದಿ ಅವರಿಗೆ ತಮ್ಮ ಪ್ರಿಯ 'ಮುಸ್ಲಿಮ್' ವಿಷಯಕ್ಕೆ ಹಿಂದಿರುಗಿ ಹಾಯೆನಿಸಿರಬೇಕು ಎಂದೂ ಸರಳವಾಗಿ ಕೆಲವರು ಹೇಳಿದ್ದಾರೆ.

ಒಟ್ಟಾರೆಯಾಗಿ ಚುನಾವಣಾ ಪ್ರಚಾರಕ್ಕೆ ನಕಾರಾತ್ಮಕ ತಿರುವು ಕೊಟ್ಟಿದ್ದಾರೆ ಎಂಬುದು ಸಾಮಾನ್ಯ ತೀರ್ಪು. ಆದರೆ ನನಗನಿಸುವುದು (ಬೈ ಮಿಸ್ಟೇಕ್ ಕೆಲವರು ಕರೆಕ್ಟ್ ಕೆಲಸ ಮಾಡುವುದುಂಟು!) 'ಬೈ ಮಿಸ್ಟೇಕ್' ಚುನಾವಣಾ ಪ್ರಚಾರಕ್ಕೆ ಮೋದಿ ಅವರು ಸಕಾರಾತ್ಮಕ ತಿರುವು ಕೊಟ್ಟಿದ್ದಾರೆ ಅಂತ. ಸಂಪನ್ಮೂಲ ಪುನರ್ ಹಂಚಿಕೆ, ವೆಲ್ತ್ ಟ್ಯಾಕ್ಸ್ (ಆಸ್ತಿ ತೆರಿಗೆ),ಇನಹೆರಿಟನ್ಸ್ ಟ್ಯಾಕ್ಸ್ (ವಾರಸುದಾರಿಕೆ ಅಥವಾ ಪಿತ್ರಾರ್ಜಿತ ತೆರಿಗೆ) ಯಾವುದಾದರೂ ಚುನಾವಣೆಯಲ್ಲಿ ಚರ್ಚೆಗೆ ಒಳಗಾಗಿದ್ದು ಕೇಳಿದ್ದೀರಾ? ಹೋಗಲಿ ಪ್ರಣಾಳಿಕೆಯೇ, ಅದೂ ಸ್ವಂತ ಬಲದಿಂದ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲದ ವಿರೋಧ ಪಕ್ಷದ ಪ್ರಣಾಳಿಕೆಯೊಂದು ಚರ್ಚೆಯ ವಿಷಯ ಆಗಿದ್ದು ಕೇಳಿದ್ದೀರಾ? ನನಗಂತೂ ಥ್ರಿಲ್ ಆಗಿ ಇದು ನಿಜವಾ ಅಂತ ನನಗೆ ನಾನೇ ಚಿವುಟಿಕೊಂಡೆ!

ಯಾವುದು ಡೇಂಜರಸ್?

ಮೋದಿ ಅವರು ಇದನ್ನು ತಮ್ಮ ಮಾಮೂಲಿನ "ಮೊಗಲ್, ಮುಸ್ಲಿಂ, ಮಟನ್" ನಕಾರಾತ್ಮಕ ಭಾಷೆಯಲ್ಲಿ 'ಕಾಂಗ್ರೆಸ್ ಪ್ರಣಾಳಿಕೆ ಡೇಂಜರಸ್' ಎಂದು ಹೇಳಿರಬಹುದು. ಆದರೆ ವಿಷಯ ಬಹಳ ಸಕಾರಾತ್ಮಕ. ಆದರೆ ಒಂದೇ ಪ್ರಾಬ್ಲಂ ಅಂದರೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ 'ಮುಸ್ಲಿಮರಿಗೆ ಸಂಪನ್ಮೂಲ ಪುನರ್ ಹಂಚಿಕೆ', ವೆಲ್ತ್ ಟ್ಯಾಕ್ಸ್, ಇನಹೆರಿಟನ್ಸ್ ಟ್ಯಾಕ್ಸ್ ನಂತಹ 'ಡೇಂಜರಸ್' ವಿಷಯಗಳಂತೂ ದೂರ ಉಳಿಯಿತು, ಮುಸ್ಲಿಂ ಮತ್ತು ಪುನರ್ ಹಂಚಿಕೆ ಪದಗಳೇ ಇಲ್ಲ. ಕಾಂಗ್ರೆಸ್‌ಗೆ ಮೋದಿ–ಬಿಜೆಪಿ ಬಗ್ಗೆ ಎಷ್ಟು ಭಯವೆಂದರೆ ಮುಸ್ಲಿಂ ಪದವನ್ನೇ ಅವರ ಪ್ರಣಾಳಿಕೆಯಿಂದಲೂ ಕಿತ್ತು ಹಾಕಿದ್ದಾರೆ. "ಧಾರ್ಮಿಕ ಅಲ್ಪಸಂಖ್ಯಾತ'ರು ಎಂದು ಕರೆದಿದ್ದಾರೆ. ಸಂಪನ್ಮೂಲ 8 ಬಾರಿ ಮತ್ತು ಇನಹೆರಿಟನ್ಸ್(ವಾರಸುದಾರಿಕೆ) ಒಂದು ಬಾರಿ ಬಂದಿದೆ. 'ವಾರಸುದಾರಿಕೆ'ಯಲ್ಲಿ ಮಹಿಳೆಯರಿಗೆ ಸಮಾನ ಹಕ್ಕನ್ನು ಖಚಿತಪಡಿಸಬೇಕು ಎನ್ನುವಲ್ಲಿ ಮಾತ್ರ. ಇದು ಮೋದಿ ಅವರಿಗೆ ಡೇಂಜರಸ್ ಕಂಡಿರಬಹುದೇ? 8 ಬಾರಿ ಬರುವ 'ಸಂಪನ್ಮೂಲ' ಪದ 2 ಬಾರಿ ಬಂದ ಸಂದರ್ಭ, ಅವರಿಗೆ ಡೇಂಜರಸ್ ಆಗಿ ಕಂಡಿರುವ ಹೆಚ್ಚಿನ ಸಾಧ್ಯತೆಯಿದೆ.

'ಬಡವರ ಕಲ್ಯಾಣ ಸರಕಾರದ ಸಂಪನ್ಮೂಲಗಳ ಮೊದಲ ಆದ್ಯತೆಯಾಗಿರಬೇಕು" ಎಂಬ ಉಲ್ಲೇಖ ಇದರಲ್ಲಿ ಒಂದು. ಕಾಂಗ್ರೆಸ್ ಇಂದಿರಾ ಕಾಲದಿಂದ 'ಗರೀಬಿ ಹಟಾವೊ' ಹೇಳುತ್ತಲೇ ಬಂದಿದ್ದಾರೆ. ಇದರಿಂದ ಬೆದರಲಿಕ್ಕಿಲ್ಲ.

"ಪ್ರತಿಯೊಬ್ಬ ಉದ್ಯಮಿಗೆ ಸಿಗಬೇಕಾದ ಹಣಕಾಸು ಅಥವಾ ಭೌತಿಕ ಸಂಪನ್ಮೂಲಗಳು ಅಥವಾ ವ್ಯವಹಾರದ ಅವಕಾಶಗಳು ಅಥವಾ ರಿಯಾಯಿತಿಗಳನ್ನು ಯಾವುದೇ ಕೆಲವು ಕಂಪನಿ ಅಥವಾ ವ್ಯಕ್ತಿ ಕಬಳಿಸದಂತೆ ನಾವು ಖಚಿತಪಡಿಸುತ್ತೇವೆ." ಎಂಬೀ ಇನ್ನೊಂದು ಉಲ್ಲೇಖ ಮೋದಿ ಅವರಿಗೆ ಖಂಡಿತ ಡೇಂಜರಸ್ ಆಗಿ ಕಂಡಿರಬೇಕು. ಅಥವಾ ಅವರ ಇಬ್ಬರು ಪರಮ 'ಮಿತ್ರೋಂ' 'ಏನಪ್ಪಾ ಇದು! ನಮ್ಮನ್ನು ಉದ್ದೇಶಿಸಿ ಬರೆದಂತಿದೆಯಲ್ಲಾ' ಅಂತ ಅವರಿಗೆ ಈ ಪ್ಯಾರಾ ಓದಿ ಹೇಳಿರಬೇಕು. ಈ 'ಮಿತ್ರೋಂ' ಗಳಿಗೆ ತೊಂದರೆಯಾಗಬಹುದು ಅಥವಾ ತೊಂದರೆ ತಪ್ಪಿಸಿಕೊಳ್ಳಲು ಅವರು ಕಾಂಗ್ರೆಸ್ ಕಡೆಗೆ ವಾಲಿದರೆ ಏನು ಗತಿ ಎಂದು ಮೋದಿ ಆತಂಕಿತರಾಗಿದ್ದಾರಾ? ಈ 'ಮಿತ್ರೋಂ' ಕಳೆದುಕೊಳ್ಳುವುದು ಖಂಡಿತ ಡೇಂಜರಸ್ ಆಗಿ ಕಂಡಿರಬೇಕು. ಅದರಲ್ಲೂ ಒಬ್ಬ ಮಿತ್ರ ತನ್ನ ಅಪ್ಪನ ಕಾಲದಿಂದಲೂ ರಾಹುಲ್ ಗಾಂಧಿಯವರ ಅಜ್ಜಿಯ ಕಾಲದಿಂದಲೂ ಕಾಂಗ್ರೆಸ್ ಗೆ ಸಹ 'ಮಿತ್ರೋಂ' ಆಗಿರುವುದರಿಂದ!

ಅಸಮಾನತೆ ನಿವಾರಣೆಗೆ, ಆರ್ಥಿಕ ನ್ಯಾಯಕ್ಕೆ ನಿರ್ದಿಷ್ಟ ಕ್ರಮಗಳಿಲ್ಲ

'ಅಸಮಾನತೆ' (8 ಬಾರಿ) ಮತ್ತು 'ಸಾಮಾಜಿಕ ನ್ಯಾಯ' (4 ಬಾರಿ) ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸಾಕಷ್ಟು ಪ್ರಾಮುಖ್ಯತೆ ಪಡೆದಿದೆ. ಸಾಮಾಜಿಕ ನ್ಯಾಯಕ್ಕೆ ಒಂದು ವಿಭಾಗವನ್ನೇ ಮೀಸಲಾಗಿಡಲಾಗಿದೆ. ಅಸಮಾನತೆ ಸಹ ಪ್ರಣಾಳಿಕೆಯಲ್ಲಿ ಹಲವು ವಿಭಾಗಗಳಲ್ಲಿ ಬಂದು ಸಾಕಷ್ಟು ಗಮನ ಸೆಳೆಯುತ್ತದೆ. ಆದರೆ ಭಾರತದಲ್ಲಿ ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಅಸಮಾನತೆ ಇದೆ, ಕಳೆದ 10 ವರ್ಷಗಳಲ್ಲಿ ಅದು ಇನ್ನೂ ಹೆಚ್ಚಾಗಿದೆ, ಈ ಸಮಸ್ಯೆಯನ್ನು ಪರಿಹರಿಸಬೇಕು ಇತ್ಯಾದಿ ಹೇಳುವುದು ಬಿಟ್ಟರೆ ನಿರ್ದಿಷ್ಟ 'ಸಂಪನ್ಮೂಲ ಪುನರ್ ಹಂಚಿಕೆ'ಯ ಪ್ರಸ್ತಾಪಗಳೇನೂ ಇಲ್ಲ.

"ಆಸ್ತಿ ಮತ್ತು ಆದಾಯಗಳಲ್ಲಿ ಹೆಚ್ಚುತ್ತಿರುವ ಅಸಮಾನತೆಯನ್ನು ನಿರ್ವಹಿಸಲು ಸೂಕ್ತ ನೀತಿಗಳನ್ನು ರೂಪಿಸಲಾಗುವುದು" ಎಂದಷ್ಟೇ ಹೇಳಿದೆ.

ಕಾಂಗ್ರೆಸ್ ಇಡೀ ಪ್ರಣಾಳಿಕೆಯನ್ನೇ 'ನ್ಯಾಯಪತ್ರ' ಎಂದು ಕರೆದಿದ್ದು ಇದರ ಮುಖ್ಯ ಥೀಮ್ 'ನ್ಯಾಯ'. ರೈತರಿಗೆ, ಕಾರ್ಮಿಕರಿಗೆ, ಮಹಿಳೆಯರಿಗೆ, ಯುವಜನರಿಗೆ, ಅಲ್ಪಸಂಖ್ಯಾತರಿಗೆ ನ್ಯಾಯವೇ ಪ್ರಣಾಳಿಕೆಯ ಮುಖ್ಯ ಭಾಗಗಳು. ಸಾಮಾಜಿಕ ನ್ಯಾಯದ ಜಾರಿಗೆ ಪ್ರಣಾಳಿಕೆ ಹಲವು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದೆ. ದೇಶದಾದ್ಯಂತ ಸಮಾಜೋ–ಆರ್ಥಿಕ ಮತ್ತು ಜಾತಿ ಜನಗಣತಿ, ಎಸ್.ಸಿ.–ಎಸ್.ಟಿ.–ಒಬಿಸಿ ಮೀಸಲಾತಿಗೆ ಇರುವ ಶೇ.50 ಗರಿಷ್ಠ ಮಿತಿಯನ್ನು ತೆಗೆಯಲು ಸಂವಿಧಾನ ತಿದ್ದುಪಡಿ, ಇ.ಡಬ್ಲ್ಯೂ.ಎಸ್ ಮೀಸಲಾತಿಯನ್ನು ಎಲ್ಲ ಜಾತಿಗಳಿಗೆ ವಿಸ್ತರಿಸುವುದು, ಒಂದು ವರ್ಷದೊಳಗೆ ಬ್ಯಾಕ್ ಲಾಗ್ ಭರ್ತಿ, ಎಸ್.ಸಿ.–ಎಸ್.ಟಿ. ಉಪಯೋಜನೆಯನ್ನು ಸರಕಾರದ ಕಾನೂನುಬದ್ಧ ಕರ್ತವ್ಯವಾಗಿ ಮಾಡುವುದು, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸುವುದು ಮತ್ತು ಆರ್ಥಿಕ ಸಬಲೀಕರಣ, ನಿಲ್ಲಿಸಲಾದ ಮೌಲಾನಾ ಅಜಾದ್ ಸ್ಕಾಲರ್ ಶಿಪ್ ಮತ್ತೆ ಆರಂಭಿಸುವುದು, ವಿವಿಧ ಧಾರ್ಮಿಕ ವೈಯಕ್ತಿಕ ಕಾನೂನುಗಳ ಸುಧಾರಣೆಗಳನ್ನು ಆಯಾ ಸಮುದಾಯದ ಜತೆ ಪಾಲುಗೊಳ್ಳುವಿಕೆ ಮತ್ತು ಸಮ್ಮತಿಯೊಂದಿಗೆ ತರುವುದು – ಮುಂತಾದ ನಿರ್ದಿಷ್ಟ ಕ್ರಮಗಳನ್ನು ಘೋಷಿಸಿದೆ.

ಮುನ್ನೆಲೆಗೆ ಬಂದ 'ಸಂಪನ್ಮೂಲ ಪುನರ್ ಹಂಚಿಕೆ'ಯ ವಿರೂಪದ ಪ್ರಯತ್ನ

ನಿರುದ್ಯೋಗ, ಬೆಲೆಏರಿಕೆ, ರೈತ–ಕಾರ್ಮಿಕ ವಿರೋಧಿ ನೀತಿಗಳ ಕುರಿತು ವ್ಯಾಪಕ ಟೀಕೆ ಅಲ್ಲದೆ ಸಾಮಾಜಿಕ ನ್ಯಾಯಕ್ಕೆ ತೀವ್ರ ಅಪಾಯ, ಅಸಮಾನತೆಯನ್ನು ಹೆಚ್ಚಿಸುವ ಕಾರ್ಪೊರೆಟ್–ಪರ ಕ್ರಮಗಳ ಕುರಿತು ಜನತೆಯ ಆಕ್ರೋಶ ಎಲ್ಲ ವಿರೋಧ ಪಕ್ಷಗಳ ಪ್ರಣಾಳಿಕೆಯಲ್ಲಿ ಬಿಂಬಿತವಾಗಿದ್ದು ಚುನಾವಣಾ ವಿಷಯಗಳಾಗಿವೆ. ಅದೇ ರೀತಿ 'ಗ್ಯಾರಂಟಿ'ಗಳಂತಹ ಕಲ್ಯಾಣ ಕ್ರಮಗಳಿಗೆ ಒತ್ತಾಯ ಬರುತ್ತಿದೆ. ಬಿಜೆಪಿಗೆ 400+ ಸೀಟು ಬಂದರೆ ಸಂವಿಧಾನ ಬದಲಾಯಿಸುವ ಮತ್ತು ಮೀಸಲಾತಿ ಮುಂತಾದ ಸಾಮಾಜಿಕ ನ್ಯಾಯದ ಹಕ್ಕುಗಳನ್ನು ಹಿಂತೆಗೆದುಕೊಳ್ಳಲಾಗುವ ಆತಂಕ ಹರಡಿದೆ. ಇವೆಲ್ಲ ಬಿಜೆಪಿಗೆ ಹಿನ್ನಡೆ ತರಬಹುದು. ರಾಮಮಂದಿರ ಉದ್ಘಾಟನೆಯ ಸಂಭ್ರಮ, ವಿಕಸಿತ ಭಾರತದ ಕನಸು, ಭಾರತ ವಿಶ್ವಗುರುವಾದ ಕುರಿತು ಗರ್ವ ಈ ಸಮಸ್ಯೆಗಳನ್ನು ಮರೆಗೆ ಸರಿಸಲು ಶಕ್ತವಾಗಿಲ್ಲ.

ಸಾಮಾಜಿಕ ನ್ಯಾಯ, ಭೀಕರ ಅಸಮಾನತೆಯ ಹಿನ್ನೆಲೆಯಲ್ಲಿ ಆರ್ಥಿಕ ನ್ಯಾಯದ ಪ್ರಶ್ನೆ ಮುನ್ನೆಲೆಗೆ ಬಂದಿದೆ. ಮಧ್ಯಮ ವರ್ಗ, ಉನ್ನತ ವರ್ಗಗಳ ಪ್ರಜ್ಞಾವಂತ ವಿಭಾಗಗಳೂ ಈ ಪ್ರಶ್ನೆಯನ್ನು ಪರಿಹರಿಸದಿದ್ದರೆ ಅಪಾಯಕಾರಿ ಸಾಮಾಜಿಕ ಸ್ಫೋಟದ ಬಗ್ಗೆ ಆತಂಕಿತವಾಗಿದೆ. ಈ ಪರಿಹಾರ ಸಂಪನ್ಮೂಲಗಳ ಪುನರ್ ಹಂಚಿಕೆಯನ್ನು ಬೇಡುತ್ತದೆ. ಆದರೆ ಕಾಂಗ್ರೆಸ್ ಈ ಪ್ರಶ್ನೆಯನ್ನು ಎತ್ತಿಕೊಂಡೇ ಇಲ್ಲ. ಹಾಗಾಗಿ ಈ ಪುನರ್ ಹಂಚಿಕೆಯ ಪ್ರಶ್ನೆಯನ್ನು ವಿರೂಪಗೊಳಿಸಿ ಬಹುಪಾಲು ಮಧ್ಯಮ ವರ್ಗ, ಎಲ್ಲಾ ಜಾತಿಯ ಆಸ್ತಿವಂತರು, ಸ್ವಲ್ಪ ಮಟ್ಟಿನ ಅನುಕೂಲಸ್ಥರಿಗೆ ನಿಮ್ಮ ಆಸ್ತಿ ಕಿತ್ತುಕೊಂಡು ಉಳಿದವರಿಗೆ ಹಂಚಲಾಗುತ್ತದೆ ಎಂಬ ಭೀತಿ ಹುಟ್ಟಿಸುವ ತಂತ್ರ ಮೋದಿ–ಬಿಜೆಪಿ ಹೂಡಿದೆ. ಚಿನ್ನ, ಬೆಳ್ಳಿ, ಮಂಗಳಸೂತ್ರ ಇವೆಲ್ಲ ಆಸ್ತಿಯ ಪ್ರತೀಕಗಳಷ್ಟೇ. ಜಾತಿ ಜನಗಣತಿ ಮತ್ತಿತರ ಸಾಮಾಜಿಕ ನ್ಯಾಯದ ನಿರ್ದಿಷ್ಟ ಕ್ರಮಗಳಿಗೂ– 'ಅವರು ಇವರು ನಿಮ್ಮ ಮೀಸಲಾತಿ ಕಿತ್ತುಕೊಳ್ಳುತ್ತಾರೆ' ಎಂದು ಶೋಷಿತರ ವಿವಿಧ ವಿಭಾಗಗಳವರನ್ನು(ಎಸ್.ಸಿ, ಎಸ್.ಟಿ, ಒಬಿಸಿ, ಮುಸ್ಲಿಮರು) ಪರಸ್ಪರ ಎತ್ತಿ ಕಟ್ಟುವ, ಆ ಮೂಲಕ ಮೀಸಲಾತಿಯನ್ನೇ ಅಪ್ರಸ್ತುತ ಮಾಡುವ – ಅವರ ರೆಡಿಮೇಡ್ ಉತ್ತರವಂತೂ ಹಿಂದಿನಿಂದಲೂ ಇದೆ. ಆಸ್ತಿಯನ್ನೂ, ಮೀಸಲಾತಿಯನ್ನೂ ಕಿತ್ತುಕೊಂಡು ಕಾಂಗ್ರೆಸ್ ಮುಸ್ಲಿಮರಿಗೆ ಕೊಡಲು ಹುನ್ನಾರ ನಡೆಸುತ್ತಿದೆ ಎಂಬುದು ಮೋದಿ–ಬಿಜೆಪಿ ಕಟ್ಟುತ್ತಾ ಬಂದಿರುವ ಕಥನಕ್ಕೆ ಪಕ್ಕಾ ಹೊಂದಿಕೊಳ್ಳುತ್ತದೆ.

ಐದು ಪ್ರಾಥಮಿಕ ಆರ್ಥಿಕ ಹಕ್ಕುಗಳ ಗ್ಯಾರಂಟಿ ಚುನಾವಣಾ ವಿಷಯವಾಗಬೇಕು

ಕಾಂಗ್ರೆಸ್ (ಅಥವಾ ಬಿಜೆಪಿ ಸಹ ಸೀಮಿತವಾದರೂ) ಘೋಷಿಸಿರುವ 'ಗ್ಯಾರಂಟಿ'ಗಳನ್ನು ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಲು ಮತ್ತು ನಿಜವಾದ ಸಾಮಾಜಿಕ–ಆರ್ಥಿಕ ನ್ಯಾಯ ಒದಗಿಸಲು ಸಂಪನ್ಮೂಲಗಳು ಬೇಕು. ಆರ್ಥಿಕ ನ್ಯಾಯವಿಲ್ಲದ ಸಾಮಾಜಿಕ ನ್ಯಾಯ ಸುಸ್ಥಿರವಲ್ಲ. ಇದಕ್ಕಾಗಿ ಸಂಪನ್ಮೂಲಗಳ ಪುನರ್ ಹಂಚಿಕೆ ಆಗಬೇಕು. ಉದಾಹರಣೆಗೆ ಎಲ್ಲರಿಗೂ ಉದ್ಯೋಗ ಒದಗಿಸಬೇಕಾದರೆ ಮತ್ತು ಸಾಮಾಜಿಕ ನ್ಯಾಯ ಪಾಲಿಸಬೇಕಾದರೆ ಅದನ್ನು ವಿದೇಶೀ–ದೇಶಿ ಖಾಸಗಿಯವರಿಗೆ ಪೂರ್ಣವಾಗಿ ಬಿಡಲು ಆಗುವುದಿಲ್ಲ. ಸರಕಾರಿ ಉದ್ಯೋಗಗಳೇ ಇಲ್ಲದೆ ಮೀಸಲಾತಿಗೆ ಅರ್ಥವಿರುವುದಿಲ್ಲ. ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಖಾಸಗೀಕರಣ ನಿಲ್ಲಿಸಬೇಕು. ಸರಕಾರ ಉದ್ಯಮಗಳಲ್ಲಿ ಹೂಡಿಕೆ ಮಾಡಬೇಕು. ಮೂಲ ಸೌಕರ್ಯಗಳನ್ನು ಸರಕಾರವೇ ನಿರ್ಮಾಣ ಮಾಡಬೇಕು. ಇವಕ್ಕೆ ಸರಕಾರಕ್ಕೆ ಸಂಪನ್ಮೂಲ ಬೇಕು. ಈಗಿನ ಆರ್ಥಿಕ ನೀತಿ ಹಾಗೇ ಮುಂದುವರೆಸಿದರೆ ಇವೆಲ್ಲ ಸಾಧ್ಯವಿಲ್ಲ. ಸಂಪನ್ಮೂಲಗಳ ಪುನರ್ ಹಂಚಿಕೆ, ಜನರ ಸಮಸ್ಯೆಗಳ ಪರಿಹಾರಕ್ಕೆ ಸಂಪನ್ಮೂಲಗಳ ಹೊಂಚುವಿಕೆಯ ವಿಧಾನ ಹೇಳದೆ ಇದು ಅರ್ಥಪೂರ್ಣವಾಗುವುದಿಲ್ಲ.

ವಿವಿಧ ರೀತಿಯಲ್ಲಿ, ವಿವಿಧ ಹೆಸರಿನಲ್ಲಿ ಬಡಜನರಿಗೆ ಪ್ರಧಾನವಾಗಿ ಹಣ ವರ್ಗಾವಣೆಯ

ವಿಧಾನದ ಮೂಲಕ ಕೊಡುವ 'ಗ್ಯಾರಂಟಿ'ಗಳು ಕಲ್ಯಾಣ ಯೋಜನೆಗಳು ತಾತ್ಕಾಲಿಕ ಪರಿಹಾರ ಕೊಡಬಹುದೇ ಹೊರತು ಸಮಸ್ಯೆಯ ಮೂಲಕ್ಕೆ ಹೋಗುವ ಸಮಗ್ರ ಪರಿಹಾರವಾಗುವುದಿಲ್ಲ. ಹೆಚ್ಚಾಗಿ ಇದರ ಜತೆಗೆ ಇತರ ಸಬ್ಸಿಡಿ, ಕಲ್ಯಾಣ ಯೋಜನೆಗಳ ಕಡಿತವೂ ಆಗಿರುತ್ತದೆ, ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್. ಇದರ ಬದಲು ಅವರು ಎಲ್ಲರಿಗೆ ಲಭ್ಯವಾಗಬೇಕಾದ ಐದು ಪ್ರಾಥಮಿಕ ಆರ್ಥಿಕ ಹಕ್ಕುಗಳನ್ನು ಪಟ್ಟಿ ಮಾಡುತ್ತಾರೆ. ಆ ಐದು ಆರ್ಥಿಕ ಹಕ್ಕುಗಳು – ಆಹಾರದ ಹಕ್ಕು, ಉಚಿತ ಉತ್ತಮ ಗುಣಮಟ್ಟದ ಸಾರ್ವಜನಿಕ ಶಿಕ್ಷಣ, ರಾಷ್ಟ್ರೀಯ ಆರೋಗ್ಯ ಸೇವೆ ಮೂಲಕ ಒದಗಿಸುವ ಉಚಿತ ಉತ್ತಮ ಗುಣಮಟ್ಟದ ಸಾರ್ವಜನಿಕ ಆರೋಗ್ಯ ಸೇವೆ, ಉದ್ಯೋಗದ ಹಕ್ಕು (ಇಲ್ಲದಿದ್ದರೆ ನಿರುದ್ಯೋಗ ಭತ್ಯೆ), ಅಂಗವಿಕಲರಿಗೆ ಮತ್ತು ವಯಸ್ಕರಿಗೆ ಪಿಂಚಣಿಯ ಹಕ್ಕು. ಇವು ಸಾರ್ವತ್ರಿಕವಾಗಿ ಕಾನೂನಾತ್ಮಕವಾಗಿ ಹಕ್ಕಾಗಿ ಲಭ್ಯವಾಗಬೇಕು ಎನ್ನುತ್ತಾರೆ. ರೇಗಾ ಮತ್ತು ಆರ್.ಟಿ.ಇ ಮತ್ತು ಆಹಾರ ಹಕ್ಕು ಈ ರೀತಿ ಭ್ರೂಣ ರೂಪದಲ್ಲಾದರೂ ಆರ್ಥಿಕ ಹಕ್ಕುಗಳ ಉತ್ತಮ ಉದಾಹರಣೆಗಳು. ಇವು ಮಾತ್ರ ಭೀಕರ ಅಸಮಾನತೆ, ಬಡತನ, ಹಸಿವುಗಳನ್ನು ಪರಿಹರಿಸಬಲ್ಲವು. ಈ ಹಕ್ಕುಗಳ ಜಾರಿ ಪರಸ್ಪರ ಪೂರಕವಾಗಿದ್ದು ಇನ್ನಷ್ಟು ಹೆಚ್ಚಿನ ಸಂಪನ್ಮೂಲ ಸೃಷ್ಟಿಸುತ್ತವೆ. ಉದಾಹರಣೆಗೆ ಸಾರ್ವಜನಿಕ ಶಿಕ್ಷಣ, ಆರೋಗ್ಯ ಸೇವೆ ಸಾಕಷ್ಟು ಉದ್ಯೋಗ ಸೃಷ್ಟಿಸಿ ನಿರುದ್ಯೋಗ ಭತ್ಯೆ ಉಳಿಸುತ್ತದೆ, ಆರ್ಥಿಕದಲ್ಲಿ ಆಹಾರ ಮತ್ತಿತರ ಸರಕುಗಳಿಗೆ ಬೇಡಿಕೆ ಹೆಚ್ಚಿಸುತ್ತದೆ. ಇವು ನಿಜವಾದ ಮಾನವ ಅಭಿವೃದ್ಧಿ ಮಾಡಬಲ್ಲವು. ಆರ್ಥಿಕ ಬೆಳವಣಿಗೆಯ ಇಂಜಿನ್ ಆಗಬಲ್ಲವು. ಇವನ್ನು ಐದು ಪ್ರಾಥಮಿಕ ಆರ್ಥಿಕ ಹಕ್ಕಾಗಿ ಒದಗಿಸಲು ಸುಮಾರು 15 ಲಕ್ಷ ಕೋಟಿ ರೂ. ಬೇಕಾಗುತ್ತದೆ. ಇದು ನಮ್ಮ ಜಿಡಿಪಿಯ ಸುಮಾರು ಶೇ.9 ರಷ್ಟಾಗುತ್ತದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್.

ಈ ಐದು ಪ್ರಾಥಮಿಕ ಆರ್ಥಿಕ ಹಕ್ಕುಗಳ ಗ್ಯಾರಂಟಿ ಮತ್ತು ಅದಕ್ಕೆ ಬೇಕಾದ ನಿರ್ದಿಷ್ಟ ಕ್ರಮಗಳು ಚುನಾವಣಾ ವಿಷಯವಾಗಬೇಕು.



ಕೃಪೆ: ಸತೀಶ್ ಆಚಾರ್ಯ

ವೆಲ್ತ್ ಟ್ಯಾಕ್ಸ್, ಇನ್ ಹೆರಿಟೆನ್ಸ್ ಟ್ಯಾಕ್ಸ್ ಗಳಿಂದ ಆರ್ಥಿಕ ಹಕ್ಕು ಜಾರಿ ಸಾಧ್ಯ

ಇದನ್ನು ಕೇವಲ ಎರಡು ಹೊಸ ತೆರಿಗೆಗಳಿಂದ ಭರಿಸಬಹುದು ಎಂದು ಪ್ರೊ.ಪ್ರಭಾತ್ ಪಟ್ನಾಯಕ್ ವಾದಿಸುತ್ತಾರೆ. ಅವೆಂದರೆ – ಆಸ್ತಿ ತೆರಿಗೆ ಮತ್ತು ಪಿತ್ರಾರ್ಜಿತ ಆಸ್ತಿ ತೆರಿಗೆ. ಇವು ನಿಜವಾಗಿಯೂ ಹೊಸ ತೆರಿಗೆಗಳಲ್ಲ. ಹಿಂದೆ ಭಾರತದಲ್ಲಿ ಇದ್ದು (ಆಸ್ತಿ ತೆರಿಗೆ 2015ರಲ್ಲಿ ಮತ್ತು ಪಿತ್ರಾರ್ಜಿತ ಆಸ್ತಿ ತೆರಿಗೆ 1985ರಲ್ಲಿ) ರದ್ದು ಮಾಡಲ್ಪಟ್ಟವು. ಜಗತ್ತಿನ ಹೆಚ್ಚಿನ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಈಗಲೂ ಜಾರಿಯಲ್ಲಿರುವವು. ಶೇ.1 ಆಸ್ತಿ ತೆರಿಗೆ ಮತ್ತು ಶೇ.33.3 ಪಿತ್ರಾರ್ಜಿತ ಆಸ್ತಿ ತೆರಿಗೆ – ಈ ಎರಡು ತೆರಿಗೆಗಳನ್ನು ಕೇವಲ ಶತಕೋಟ್ಯಾಧಿಪತಿಗಳಿಗೆ (ಅಂದರೆ 100 ಕೋಟಿ ರೂ ಗಿಂತ ಹೆಚ್ಚು ಆಸ್ತಿ ಇರುವ ಸೂಪರ್ ಶ್ರೀಮಂತರಿಗೆ) ವಿಧಿಸಿದರೆ ಸಾಕು, ಈ ಐದು ಆರ್ಥಿಕ ಹಕ್ಕುಗಳನ್ನು ನಿರ್ವಹಿಸಬಹುದು. 2018ರ ಅಂಕಿಅಂಶಗಳ ಪ್ರಕಾರ ಶತಕೋಟ್ಯಾಧಿಪತಿಗಳ ಒಟ್ಟು ಆಸ್ತಿ 557 ಲಕ್ಷ ಕೋಟಿ. ಅದರ ಶೇ.1 ರಷ್ಟು ಎಂದರೆ 5.57 ಲಕ್ಷ ಕೋಟಿ ರೂ. ಈ ಶತಕೋಟ್ಯಾಧಿಪತಿಗಳು ವರ್ಷದಲ್ಲಿ ಕೇವಲ ಶೇ.5 ರಷ್ಟು ಆಸ್ತಿಯನ್ನು ತಮ್ಮ ಮಕ್ಕಳಿಗೆ ಅಥವಾ ವಾರಸುದಾರರಿಗೆ ವರ್ಗಾವಣೆ ಮಾಡುತ್ತಾರೆ ಎಂದಿಟ್ಟುಕೊಂಡರೂ, ಪಿತ್ರಾರ್ಜಿತ ಆಸ್ತಿ ತೆರಿಗೆ ಸುಮಾರು 9.33 ಲಕ್ಷ ಕೋಟಿ ರೂ. ಆಗುತ್ತದೆ. ಇವೆರಡು ಸೇರಿಸಿದರೆ 15 ಲಕ್ಷ ಕೋಟಿ ರೂ. ಆಗುತ್ತದೆ. ಅತಿ ಶ್ರೀಮಂತರ ಮೇಲೆ ಆಸ್ತಿ ತೆರಿಗೆ ಮತ್ತು ಪಿತ್ರಾರ್ಜಿತ ಆಸ್ತಿ ತೆರಿಗೆ ಹಲವು ದೇಶಗಳಲ್ಲಿ ಜಾರಿಯಲ್ಲಿದ್ದು ಇದು ಬಂಡವಾಳಶಾಹಿ ಸಿದ್ಧಾಂತಕ್ಕೆ ವಿರುದ್ಧವಾದದ್ದಲ್ಲ. ಬಂಡವಾಳಿಗನ ವಹಿವಾಟಿನಲ್ಲಿ ಲಾಭ ಮತ್ತು ಆಸ್ತಿ ಸೃಷ್ಟಿಸುವಲ್ಲಿ ಆತನ ಕೌಶಲ್ಯದ ಪಾತ್ರವಿದ್ದ ಹಾಗೆನೇ, ಇಡೀ ಸಮಾಜದ ಚಾರಿತ್ರಿಕವಾಗಿ ಸಂಚಿತ ಸಂಪನ್ಮೂಲ, ಕೌಶಲ್ಯದ ಪಾತ್ರ ಸಹ ಇರುತ್ತದೆ. ಅದರ ಒಂದು ಪಾಲನ್ನು ಆತ ಸಮಾಜಕ್ಕೆ ವಾಪಸು ಕೊಡಬೇಕು. ಪಿತ್ರಾರ್ಜಿತ ಆಸ್ತಿ ಪಡೆಯುವವರು ಅಂತಹ ಯಾವುದೇ ಕೌಶಲ್ಯ ಇನ್ನೂ ಪಡೆದಿರುವುದಿಲ್ಲ, ಪ್ರದರ್ಶಿಸಿರುವುದಿಲ್ಲ. ಹಾಗಾಗಿ ಅಂತಹ ಕೌಶಲ್ಯವನ್ನು ಪ್ರದರ್ಶಿಸುವವರೆಗೆ ಅವರು ಏನೂ ಮಾಡದೆ ಪಡೆದ ಆಸ್ತಿ ಇಡಿಯಾಗಿ ಅವರಿಗೆ ಸಲ್ಲಬೇಕಾಗಿಲ್ಲ.

ಸಮಾನತೆಯ ಮತ್ತು ಸಾಮಾಜಿಕ ನ್ಯಾಯದ ಆಶಯಗಳು ಡೇಂಜರಸ್–ಮೋದಿಗೆ

ಹೀಗೆ ಅಸಮಾನತೆ, ಬಡತನ, ಹಸಿವು, ಅಪೌಷ್ಟಿಕತೆ ನಿವಾರಣೆಗೆ ತಕ್ಷಣದ ನೆರವು ನೀಡುವ ತೇಪೆ ಹಚ್ಚುವ ಗ್ಯಾರಂಟಿ ಕಲ್ಯಾಣ ಯೋಜನೆಗಳೊಂದಿಗೆ, ಈ ಸಮಸ್ಯೆಗಳ ಪರಿಹಾರಕ್ಕೆ ದೂರಗಾಮಿ ಹಕ್ಕು ಆಧಾರಿತ ಸಂಪನ್ಮೂಲಗಳ ಪುನರ್ ಹಂಚಿಕೆ ಅಜೆಂಡಾದಲ್ಲಿ ತರಬೇಕಾಗಿದೆ. ಇದು ಸಂವಿಧಾನದ ಪೀಠಿಕೆಯಲ್ಲಿ ಬರುವ ಆರ್ಥಿಕ ನ್ಯಾಯ ಮತ್ತು ಘನತೆಯ ಬದುಕಿನ ಆಶಯಗಳಿಗೆ ಅನುಗುಣವಾಗಿದೆ. ಮೋದಿ ಅವರದೇ ಕಾರಣಕ್ಕೆ ಉದ್ದೇಶಕ್ಕೆ ಈ ಅಜೆಂಡಾವನ್ನು ಕಾಂಗ್ರೆಸ್ ನತ್ತ ಎಸೆದಿದ್ದಾರೆ. ಮರಣ ತೆರಿಗೆ (ಪಿತ್ರಾರ್ಜಿತ ತೆರಿಗೆ) ಹೊರಿಸಲು ಕಾಂಗ್ರೆಸ್ ಹೊರಟಿದೆ ಎಂದು ಆಪಾದಿಸಿದ್ದಾರೆ. ಕಾಂಗ್ರೆಸ್ ನ (ಅಂದರೆ ಸಂವಿಧಾನದ ಕೂಡಾ?) ಸಮಾನತೆಯ ಮತ್ತು ಸಾಮಾಜಿಕ ನ್ಯಾಯದ ಆಶಯಗಳು ಡೇಂಜರಸ್ ಎಂದಿದ್ದಾರೆ. ಮುಂದುವರೆದು 'ಅರ್ಬನ್ ನಕ್ಸಲ್' ಪ್ರೇರಿತವೆಂದೂ ಕರೆದಿದ್ದಾರೆ. ಕಾಂಗ್ರೆಸ್ ನ್ನು ಕಮ್ಯುನಿಸ್ಟರು ಎಂದು ಜರೆಯಲು ತಯಾರಿ ಮಾಡಿಕೊಳ್ಳುತ್ತಿದ್ದಾರೆ. (ಯು.ಎಸ್ ನಲ್ಲಿ ಪಾಪ ಬಲ–ನಡುಪಂಥೀಯ ಡೆಮೊಕ್ರಾಟರನ್ನು ಮಾರುವೇಷದಲ್ಲಿರುವ ಸೋಶಲಿಸ್ಟರು, ಕಮ್ಯುನಿಸ್ಟರೆಂದು ಲಾಗಾಯ್ತಿನಿಂದ ಬಲಪಂಥೀಯ ರಿಪಬ್ಲಿಕನ್ನರು ಜರೆಯುತ್ತಿದ್ದಾರೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು) ಕಾಂಗ್ರೆಸ್ ಈ ಸವಾಲನ್ನು ಸ್ವೀಕರಿಸಿಲ್ಲ. ಅವರಿಗೆ ಅದು ಸ್ವೀಕಾರಾರ್ಹವೂ ಅಲ್ಲ. ಬದಲಿಗೆ ಪಿತ್ರಾರ್ಜಿತ ತೆರಿಗೆಯನ್ನು ರದ್ದು ಮಾಡಿದ್ದು ನಾವೇ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. 2015ರಲ್ಲಿ ಆಸ್ತಿ ತೆರಿಗೆ ರದ್ದು ಮಾಡಿದ್ದು ತಪ್ಪು ಎಂದು ಹೇಳುವ ಧೈರ್ಯ ತೋರಿಲ್ಲ. ಮೋದಿ ಸಾಮಾಜಿಕ ನ್ಯಾಯದ ಆಶಯಗಳು ಡೇಂಜರಸ್ ಅಂದಿದ್ದಕ್ಕೆ ಕಾಂಗ್ರೆಸ್ ಸೇರಿದಂತೆ ಇಂಡಿಯಾ ಕೂಟದ ಪಕ್ಷಗಳು ಸಾಕಷ್ಟು ಪ್ರತಿ ಏಟು ಕೊಟ್ಟಿವೆ. ಆದರೆ ಆರ್ಥಿಕ ನ್ಯಾಯ ಡೇಂಜರಸ್ ಅಂದಿದ್ದಕ್ಕೆ ತಕ್ಕ ಪ್ರತಿಕ್ರಿಯೆ ಬಂದಿಲ್ಲ.

ಬಿಜೆಪಿಗೆ ದೃಢವಾದ ಬದಲಿ ಆರ್ಥಿಕ ನೀತಿಯನ್ನು ತನ್ನ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಕೊಟ್ಟಿಲ್ಲ. ವಿರೋಧ ಪಕ್ಷವಾಗಿರುವಾಗ ರಾಡಿಕಲ್ ಆಗುವ ಪೋಸು ಕೊಡುತ್ತದೆಯಷ್ಟೇ. ಇಂಡಿಯಾ ಕೂಟ ಅಧಿಕಾರಕ್ಕೆ ಬಂದರೂ ಅದೇ ಘೋಷಿಸಿರುವ ಗ್ಯಾರಂಟಿಗಳ, ಯೋಜನೆಗಳ ಜಾರಿಗೆ ಸಂಪನ್ಮೂಲಗಳ ಪುನರ್ ಹಂಚಿಕೆಗೆ , ಹೊಂಚುವಿಕೆಗೆ ತಯಾರಿರುವುದಿಲ್ಲ. ಇತರ ಪಕ್ಷಗಳು ಪ್ರಮುಖವಾಗಿ ಎಡ ಪಕ್ಷಗಳು ಈ ಒತ್ತಡ ತರಬೇಕಾಗಿದೆ. ಸಿಪಿಐ(ಎಂ) ಇಲ್ಲಿ ಹೇಳಿರುವ ಐದು ಆರ್ಥಿಕ ಹಕ್ಕುಗಳನ್ನು, ಸಂಪನ್ಮೂಲ ಪುನರ್ ಹಂಚಿಕೆಯ ತೆರಿಗೆಗಳನ್ನು ತನ್ನ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿದೆ, ಅದಕ್ಕೆ ಹೋರಾಡಲಿದೆ ಎಂಬುದು ಸಮಾದಾನದ ಸಂಗತಿ.

ಮೋದಿ 'ಬೈ ಮಿಸ್ಟೇಕ್' ಸಂಪನ್ಮೂಲಗಳ ಪುನರ್ ಹಂಚಿಕೆ, ಇನ್ ಹೆರಿಟೆನ್ಸ್ ಟ್ಯಾಕ್ಸನ್ನು ಮುನ್ನೆಲೆಗೆ ತಂದಿದ್ದಾರೆ. ಇದನ್ನು ಇಂಡಿಯಾ ಕೂಟ ಉಳಿದ ಹಂತಗಳ ಪ್ರಚಾರದಲ್ಲಾದರೂ ಬಳಸಬೇಕು. ●

ತ್ರಿಪುರ: ಅಲ್ಲಿರುವ ಮತಗಳು 451: ಚಲಾವಣೆಯಾದ ಮತಗಳು 492!!

ಇಡೀ ದೇಶದಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಿದೆ ಎಂಬ ಸುದ್ದಿಗಳ ನಡುವೆಯೇ, ತ್ರಿಪುರ ರಾಜ್ಯದ ಕೆಲವು ಮತಗಟ್ಟಗಳಲ್ಲಿ ಶೇಕಡಾ ನೂರಕ್ಕೂ ಹೆಚ್ಚು ಮತದಾನವಾಗಿರುವ ವರದಿ ಬಂದಿವೆ. ತ್ರಿಪುರ ಪಶ್ಚಿಮ ಲೋಕಸಭಾ ಕ್ಷೇತ್ರದ ಮೋಹನ್ ಪುರದ ಮತಗಟ್ಟೆ ಸಂಖ್ಯೆ: 38 ರಲ್ಲಿ ಒಟ್ಟು ಮತದಾರರ ಸಂಖ್ಯೆ 451. ಆದರೆ, ಚಲಾವಣೆಯಾದ ಮತಗಳು 492!! ಅಂದರೆ ಮತದಾನದ ಪ್ರಮಾಣ ಶೇ.109!!

ಈಶಾನ್ಯ ರಾಜ್ಯಗಳಲ್ಲಿ ಒಂದಾದ ತ್ರಿಪುರಾದ ಪಶ್ಚಿಮ ಲೋಕಸಭಾ ಕ್ಷೇತ್ರದ ಮಜ್ಲಿಸ್ಪುರ್–ಮತಗಟ್ಟೆ ಸಂಖ್ಯೆ: 44 ರಲ್ಲಿ ಒಟ್ಟು ಮತದಾರರ ಸಂಖ್ಯೆ 545. ಇಲ್ಲಿ ಚಲಾವಣೆಯಾದ ಮತಗಳು–574. ಇಲ್ಲಿ 29 ಮತಗಳು ಹೆಚ್ಚಾಗಿ ಚಲಾವಣೆಯಾಗಿವೆ. ಖೈರ್ಪುರ್–ಮತದಾನ ಕೇಂದ್ರ ಸಂಖ್ಯೆ: 25 ರಲ್ಲಿ ಒಟ್ಟು ಮತದಾರರ ಸಂಖ್ಯೆ 820. ಚಲಾವಣೆಯಾದ ಮತಗಳು 830. ಇಲ್ಲಿ 10 ಮತಗಳು ಹೆಚ್ಚಾಗಿ ಚಲಾವಣೆಯಾಗಿವೆ. ಖೈರ್ಪುರ್–ಮತದಾನ ಕೇಂದ್ರ ಸಂಖ್ಯೆ: 44 ರಲ್ಲಿ ಒಟ್ಟು ಮತಗಳು–1290. ಚಲಾವಣೆಯಾದ ಮತಗಳು–1292. ಈ ಕೇಂದ್ರದಲ್ಲಿ 2 ಮತಗಳು ಹೆಚ್ಚಾಗಿ ಚಲಾವಣೆಯಾಗಿವೆ. ಬಿಜೆಪಿ ಅಧಿಕಾರದಲ್ಲಿರುವ ತ್ರಿಪುರಾದಲ್ಲಿ ಹೇಗೆಲ್ಲಾ ಚುನಾವಣಾ ಅಕ್ರಮ ಎಸಗಿದೆ ಎಂಬುದಕ್ಕೆ ಇದೊಂದು ಉದಾಹರಣೆ.

ಏಪ್ರಿಲ್ 22, 2024 ರಂದು ಬಿಜೆಪಿ ನಾಯಕ ಮತ್ತು ತ್ರಿಪುರ ರಾಜ್ಯ ಸಚಿವ ರತನ್ ಲಾಲ್ ನಾಥ್ ಅವರು ಗೋವಾಯಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿ, "ಹೆಚ್ಚಿನ ಮತದಾನ ನಡೆಯುವ ಕೇಂದ್ರಕ್ಕೆ ಎರಡು ಲಕ್ಷ ರೂಪಾಯಿ ಬಹುಮಾನ ನೀಡಲಾಗುವುದು" ಎಂದು ಹೇಳಿದರು. ಮೊದಲ ಹಂತದ ಮತದಾನವನ್ನು ಎದುರಿಸಿದ ತ್ರಿಪುರ ಪಶ್ಚಿಮ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಮೋಹನ್‌ಪುರ ವಿಧಾನಸಭಾ ಕ್ಷೇತ್ರದಲ್ಲಿ ಶೇ. 109 ರಷ್ಟು ಮತದಾನವಾಗಿದೆ. ಮೋಹನ್ ಪುರ ರತನ್ ಲಾಲ್ ನಾಥ್ ಅವರ ತವರು ಕ್ಷೇತ್ರವಾಗಿರುವುದರಿಂದ ಆ ಕ್ಷೇತ್ರದಲ್ಲಿ ನಕಲಿ ಮತದಾನದ ಮೂಲಕ ಶೇ.109ರಷ್ಟು ಮತದಾನವಾಗಿರುವ ಶಂಕೆ ವ್ಯಕ್ತವಾಗಿದೆ.

ತ್ರಿಪುರಾದ 2 ಲೋಕಸಭಾ ಕ್ಷೇತ್ರಗಳಿಗೆ ಮತ್ತು ಖಾಲಿ ಇರುವ ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ಚುನಾವಣೆಯನ್ನು ಘೋಷಿಸಲಾಗಿದೆ. ಈ 3 ಕ್ಷೇತ್ರಗಳಲ್ಲಿ ಎಡ–ಕಾಂಗ್ರೆಸ್ ಮೈತ್ರಿಕೂಟ "ಇಂಡಿಯಾ" ಕಣಕ್ಕಿಳಿದಿದ್ದು, ತ್ರಿಪುರ ಪಶ್ಚಿಮ ಲೋಕಸಭೆ ಕ್ಷೇತ್ರ ಮತ್ತು ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ಏಪ್ರಿಲ್ 19 ರಂದು ಮತದಾನ ನಡೆದಿತ್ತು. ಮೊದಲ ಹಾಗೂ ಎರಡನೇ ಹಂತದ ಚುನಾವಣಾ ಪ್ರಚಾರದಲ್ಲಿ ಬಿಜೆಪಿ ಚುನಾವಣಾ ಆಯೋಗದ ನಿಯಮಗಳನ್ನು ಉಲ್ಲಂಘಿಸಿ ನಾನಾ ಅನುಮಾನಾಸ್ಪದ ಚಟುವಟಿಕೆಗಳಲ್ಲಿ ತೊಡಗಿದೆ.

ಅದೇ ಅಂಕಿ ಅಂಶಗಳ ವರದಿಯನ್ನು ಅನುಸರಿಸಿ, ಸಿಪಿಎಂ ತ್ರಿಪುರಾ ರಾಜ್ಯ ಸಮಿತಿಯು ಏಪ್ರಿಲ್ 22 ರಂದು ತ್ರಿಪುರಾ ಪಶ್ಚಿಮ ಲೋಕಸಭೆ ಕ್ಷೇತ್ರದಲ್ಲಿ ಶೇ. 100 ಕ್ಕಿಂತ ಹೆಚ್ಚು ಮತದಾನವಾಗಿರುವುದಕ್ಕೆ ಸಂಬಂಧಿಸಿ ಕ್ರಮ ಕೈಗೊಳ್ಳುವಂತೆ ಭಾರತೀಯ ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.



ಕಮ್ಯೂನಿಸ್ಟರ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ದಾಳಿ

ಆಡಳಿತಾರೂಢ ಬಿಜೆಪಿ ಸೋಲಿನ ಭಯದಿಂದ ತಮ್ಮ ಪಕ್ಷದ ಪುಂಡರನ್ನು ಬಳಸಿಕೊಂಡು ಕಮ್ಯೂನಿಸ್ಟರ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಾಗೂ ಅಭ್ಯರ್ಥಿಗಳ ಮನೆಗಳ ಮೇಲೆ ದಾಳಿ ನಡೆಸಿದೆ. ತಮಗೆ ಮತ ಹಾಕುವುದಿಲ್ಲ ಎಂದು ಮೊದಲೇ ಮತದಾರರನ್ನು ಗುರುತಿಸಿ, ಅವರ ಮನೆಗೆ ತೆರಳಿ ಬೆದರಿಸಿ, ಮನೆಗೆ ಬೀಗ ಹಾಕಿ, ದೈಹಿಕ ಹಿಂಸೆ ನೀಡಿದ್ದಾರೆ. ಬೆದರಿಕೆಗೆ ಹೆದರದೆ ಮತಗಟ್ಟೆಗೆ ಬಂದ ಮತದಾರರ ಮೇಲೆ ಪೊಲೀಸರ ಸಮ್ಮುಖದಲ್ಲೇ ಬಿಜೆಪಿ ಪುಂಡರು ಹಲ್ಲೆ ನಡೆಸಿದ್ದಾರೆ. ಮತ ಹಾಕದ ಮತದಾರರ ಹೆಸರಲ್ಲಿ ಬಿಜೆಪಿ ಪುಂಡರ ಮೂಲಕ ನಕಲಿ ಮತದಾನ ಮಾಡಿಸಿದ್ದಾರೆ. ತ್ರಿಪುರ ಪಶ್ಚಿಮ ಲೋಕಸಭೆ ಕ್ಷೇತ್ರ ಮತ್ತು ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ಮೇ 7ರಂದು ನಡೆಯಲಿರುವ ಮೂರನೇ ಹಂತದ ಚುನಾವಣೆ ಸಮಯದಲ್ಲಿ ಮರು ಮತದಾನ ನಡೆಸುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. ಆದರೆ ಈ ಪತ್ರಕ್ಕೆ ರಾಜ್ಯ ಚುನಾವಣಾ ಆಯೋಗ ಇನ್ನೂ ಪ್ರತಿಕ್ರಿಯೆ ನೀಡಿಲ್ಲ.

ಈ ಸಂಬಂಧ ಭಾರತದ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿರುವ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರು, ತ್ರಿಪುರಾದಲ್ಲಿ ಚುನಾವಣಾ ಅಕ್ರಮಗಳ ಕುರಿತು ಸಿಪಿಎಂ ತ್ರಿಪುರಾ ರಾಜ್ಯ ಸಮಿತಿ ಸಲ್ಲಿಸಿರುವ ದೂರುಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ. ●



ಕೇರಳ ಇನ್ನೊಂದು ಟ್ರೆಂಡ್ ಮುರಿದು LDF ಗೆ ಮೇಲುಗೈ ಕೊಡುವುದೇ?

ಕೇರಳ 2021 ರ ವಿಧಾನಸಭಾ ಚುನಾವಣೆಗಳಲ್ಲಿ 1980ರ ದಶಕದ ಆದಿಯಿಂದ ಕಂಡು ಬಂದ ದೀರ್ಘಕಾಲೀನ ಟ್ರೆಂಡ್ ಒಂದನ್ನು ಮುರಿದಿದೆ. ಒಂದು ರಂಗ ಸತತ ಎರಡು ಬಾರಿ ವಿಧಾನಸಭಾ ಚುನಾವಣೆಗಳಲ್ಲಿ ಬಹುಮತ ಪಡೆಯುವುದಿಲ್ಲ ಎಂಬುದು ಆ ಟ್ರೆಂಡ್. ಇನ್ನೊಂದು ಟ್ರೆಂಡ್ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಸಹ ಅದೇ ರಂಗಕ್ಕೆ ಮೇಲುಗೈ ಕೊಡುವುದಿಲ್ಲ ಎಂಬುದು. 2024ರ ಲೋಕಸಭಾ ಚುನಾವಣೆಯಲ್ಲಿ LDF ಮತ್ತು UDF ನಡುವೆ ತೀವ್ರ ಪೈಪೋಟಿ ಇದ್ದ ಹಾಗೆ ಕಾಣುತ್ತದೆ. NDA ತನ್ನ ಮತಗಳಿಕೆ ಹೆಚ್ಚು ಮಾಡಿಕೊಳ್ಳುವುದಕ್ಕೆ ಮತ್ತು ಖಾತೆ ತೆಗೆಯುವುದಕ್ಕೆ ಹಾತೊರೆಯುತ್ತಿದೆ. ಕೇರಳ ಇನ್ನೊಂದು ಟ್ರೆಂಡ್ ಮುರಿದು LDF ಗೆ ಮೇಲುಗೈ ಕೊಡುವುದೇ?

ವಸಂತರಾಜ ಎನ್.ಕೆ.

ನೆರೆಯ ಕೇರಳ 18ನೆಯ ಲೋಕಸಭಾ ಚುನಾವಣೆಯ ಎರಡನೆಯ ಹಂತದಲ್ಲಿ ಚುನಾವಣೆಗೆ ಹೋಗಲಿದೆ. ಎಂದಿನಂತೆ ಕೇರಳದಲ್ಲಿ ಈ ಚುನಾವಣೆಯಲ್ಲಿ ಸಹ ಎಡ ಪ್ರಜಾಸತ್ತಾತ್ಮಕ ರಂಗ (LDF) ಮತ್ತು ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (UDF) ಮುಖ್ಯ ಸ್ಪರ್ಧಿಗಳು. ಎರಡೂ ರಾಷ್ಟ್ರ ಮಟ್ಟದಲ್ಲಿ ಇಂಡಿಯಾ ಕೂಟದ ಭಾಗವಾಗಿದ್ದರೂ, ರಾಜ್ಯದಲ್ಲಿ ಬಿಜೆಪಿ ಮತ್ತು ಅದರ ನಾಯಕತ್ವದ ಮೂರನೆಯ ರಂಗ NDA ಈ ಬಾರಿ ಖಾತೆ ತೆರೆಯುತ್ತದೆ ಎಂದು ಪ್ರಧಾನಿಯಿಂದ ಕೆಲವು ಮಾಧ್ಯಮಗಳ ವರೆಗೆ ಹಲವರು ಹೇಳಿಕೊಳ್ಳುತ್ತಿದ್ದಾರೆ. ಪ್ರಧಾನಿ NDA ಎರಡಂಕಿ ದಾಟುತ್ತದೆ ಎನ್ನುವವರೆಗೆ ಹೋಗಿದ್ದಾರೆ, ಆದರೆ ಅತ್ಯಂತ 'ಮೋದಿಕೃತ' ಮಾಧ್ಯಮಗಳು ಸಹ ತಮ್ಮ ಸಮೀಕ್ಷೆಗಳಲ್ಲಿ. 2–3 ಸೀಟುಗಳಿಗಿಂತ ಹೆಚ್ಚು ಕೊಟ್ಟಿಲ್ಲ. ಇನ್ನೊಂದು ಕಡೆ LDF ಮತ್ತು UDF ನಡುವೆ ತೀವ್ರ ಹಣಾಹಣಿ ನಡೆದಿದ್ದು, ಹಲವರು ತೀವ್ರ ಸ್ಪರ್ಧೆಯಲ್ಲಿ ಏನೂ ಹೇಳುವದು ಕಷ್ಟ ಎಂದರೆ ಕೆಲವರು LDF ಮತ್ತು ಇನ್ನೂ ಕೆಲವವರು UDF ಹೆಚ್ಚಿನ ಸೀಟುಗಳನ್ನು ಪಡೆಯುತ್ತವೆ ಎಂದಿದ್ದಾರೆ. ಕೇರಳದ ಚುನಾವಣಾ ಇವುಗಳಲ್ಲಿ ಯಾವುದು ಸರಿಯೆಂದು ಹೇಳುವುದು ಕಷ್ಟ. ಆದರೆ ಹಿಂದಿನ ನಾಲ್ಕು ದಶಕಗಳ ಚುನಾವಣಾ ಫಲಿತಾಂಶಗಳ ದೀರ್ಘಕಾಲೀನ ಟ್ರೆಂಡ್ ಮತ್ತು ಇತ್ತೀಚಿನ ಮಹತ್ವದ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ಕೆಲವು ದಿಕ್ಸೂಚಕಗಳನ್ನು ಕಾಣಬಹುದು.

ದೀರ್ಘಕಾಲೀನ ಟ್ರೆಂಡ್ ಗಳು ಮತ್ತು ರಾಜಕೀಯ ಅಂಶಗಳು

ಈಗಿನ LDF ಮತ್ತು UDF ಅನುಕ್ರಮವಾಗಿ ಸಿಪಿಐ(ಎಂ) ಮತ್ತು ಕಾಂಗ್ರೆಸ್ ನಾಯಕತ್ವದಲ್ಲಿ 1980ರ ದಶಕದ ಆದಿಯಲ್ಲಿ ರಚನೆಯಾದಾಗಿನಿಂದ ವಿಧಾನಸಭೆ ಮತ್ತು ಲೋಕಸಭೆಯ ಚುನಾವಣೆಗಳ ಫಲಿತಾಂಶದ ಸಾರಾಂಶ ಕೆಳಗಿನ ಕೋಷ್ಟಕದಲ್ಲಿದೆ:

ಈ ಅಂಕಿಅಂಶಗಳಿಂದ ಕಂಡಿರುವ ದೀರ್ಘಕಾಲೀನ ಟ್ರೆಂಡ್ ಗಳು ಮತ್ತು ರಾಜಕೀಯ ಅಂಶಗಳು ಹೀಗಿವೆ:

ಮುಖ್ಯ ಸ್ಪರ್ಧೆ LDF ಮತ್ತು UDF ನಡುವೆ ಇರುತ್ತದೆ, ಮೂರನೇ ಪಕ್ಷ ಅಥವಾ ರಂಗ ಅಥವಾ ಸ್ವತಂತ್ರ ಅಭ್ಯರ್ಥಿ ಅದೂ ಲೋಕಸಭೆಯಲ್ಲಿ ಗೆದ್ದಿದ್ದು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ.

ವಿಧಾನಸಭೆ ಚುನಾವಣೆಯಲ್ಲಿ ಸತತ ಎರಡು ಬಾರಿ ಯಾವ ರಂಗವೂ ಗೆಲ್ಲುವುದಿಲ್ಲ (ಇದು ಇತ್ತೀಚಿನ 2021 ಚುನಾವಣೆಯಲ್ಲಿ ಮಾತ್ರ ನಿಜವಾಗಲಿಲ್ಲ)

ವಿಧಾನಸಭೆಗೆ 1980ರಿಂದ ಈಚಿನ 10 ಚುನಾವಣೆಗಳಲ್ಲಿ 6 ಬಾರಿ LDF ಮತ್ತು 4 ಬಾರಿ UDF ಬಹುಮತ ಪಡೆದಿದೆ.

ಲೋಕಸಭೆಗೆ 1980ರಿಂದ ಈಚಿನ 10 ಚುನಾವಣೆಗಳಲ್ಲಿ 6 ಬಾರಿ UDF ಹೆಚ್ಚಿನ ಸೀಟು ಪಡೆದಿದೆ. 3 ಬಾರಿ LDF ಮತ್ತು UDF ಸಮಬಲ ಪಡೆದಿದ್ದವು. ಒಂದು ಬಾರಿ ಮಾತ್ರ LDF ಹೆಚ್ಚಿನ ಸೀಟು ಪಡೆದಿದೆ.

ವಿಧಾನಸಭೆ ಮತ್ತು ಲೋಕಸಭೆಗೆ ಮತದಾರರ ಧೋರಣೆ ಬೇರೆಯಿರುತ್ತದೆ. ರಾಷ್ಟ್ರಮಟ್ಟದ ಟ್ರೆಂಡ್ ಜತೆ ಪೂರ್ಣವಾಗಿ ತಾಳೆಯಾಗದಿದ್ದರೂ ಅದರ ಪರಿಣಾಮವೂ ಕಾಣುತ್ತದೆ.

ಎರಡೂ ರಂಗಗಳಿಗೆ ಸುಮಾರು 35–40% ಮತದಾರರ ಶಾಶ್ವತ ಸ್ಥಿರ ನೆಲೆ ಇದ್ದು, ಉಳಿದ ಸುಮಾರು 20–30% ಮತದಾರರ ವಿಭಾಗ ಪ್ರತಿ ಚುನಾವಣೆಯಲ್ಲಿ ಆಯಾ ಸನ್ನಿವೇಶ ಅನುಸಾರವಾಗಿ ನಿರ್ಣಯಿಸುತ್ತಾರೆ.

ಶೇಕಡಾ ಮತಗಳಿಕೆಯಲ್ಲಿ ಕೆಲವೊಮ್ಮೆ 1% ಮಾತ್ರ ವ್ಯತ್ಯಾಸವಿದ್ದರೂ ಸೀಟುಗಳಿಕೆಯಲ್ಲಿ ಭಾರೀ ವ್ಯತ್ಯಾಸಗಳಿರುವುದು ಉಂಟು.

ಎರಡು ರಂಗದ ಮುಖ್ಯ ಪಕ್ಷಗಳಾದ ಸಿಪಿಐ(ಎಂ) ಮತ್ತು ಕಾಂಗ್ರೆಸ್ ಯಾವುದೇ ಜಾತಿ, ಧರ್ಮಗಳಿಗೆ ಸೀಮಿತವಾಗಿರದೆ ನಿರ್ದಿಷ್ಟ ರಾಜಕೀಯ ನೀತಿ–ಧೋರಣೆಗಳನ್ನು ಪ್ರತಿನಿಧಿಸುತ್ತವೆ. ಆದರೆ ಈ ಎರಡು ರಂಗಗಳಲ್ಲಿರುವ ಮುಸ್ಲಿಂ ಲೀಗ್ ಮತ್ತು ಕೇರಳ ಕಾಂಗ್ರೆಸಿನ ಬಣಗಳು ಅನುಕ್ರಮವಾಗಿ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಮತಧರ್ಮೀಯರ ಒಂದು ವಿಭಾಗವನ್ನು ಪ್ರತಿನಿಧಿಸುತ್ತವೆ. ಕೆಲವು ಇತರ ಸಣ್ಣ ಪಕ್ಷಗಳು ಕೆಲವು ಜಾತಿಗಳ ಒಂದು ವಿಭಾಗವನ್ನು ಪ್ರತಿನಿಧಿಸುತ್ತವೆ.

ಈಗ ಸಿಪಿಐ(ಎಂ) ನಾಯಕತ್ವದ LDF ನಲ್ಲಿ ಸಿಪಿಐ, ಕೇರಳ ಕಾಂಗ್ರೆಸ್ (ಮಣಿ), ಜನತಾ ದಳ (ಎಸ್), ಎನ.ಸಿಪಿ., ಕಾಂಗ್ರೆಸ್ (ಎಸ್) ಲೋಕತಾಂತ್ರಿಕ ಜನತಾ ದಳ, ಐ.ಎನ್.ಎಲ್ ಇವೆ. ಕಾಂಗ್ರೆಸ್ ನಾಯಕತ್ವದ UDF ನಲ್ಲಿ ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್, ಕೇರಳ ಕಾಂಗ್ರೆಸ್ (ಜೇಕಬ್), ಆರ.ಸಿ.ಪಿ, ಆರ್.ಎಂ.ಪಿ.ಐ ಇವೆ. NDA ನಲ್ಲಿ ಬಿಜೆಪಿ ಯಲ್ಲದೆ, ಬಿಡಿಜೆ.ಎಸ್ (ಭಾರತ ಧರ್ಮ ಜನ ಸೇನಾ) ಇದೆ.

	ವಿಧಾನಸಭಾ ಚುನಾವಣೆಗಳು			ಲೋಕಸಭಾ ಚುನಾವಣೆಗಳು		
	ಬಹುಮತ	ಯು.ಡಿ.ಎಫ್	ಎಲ್.ಡಿ.ಎಫ್	ಮೇಲುಗೈ	ಯು.ಡಿ.ಎಫ್	ಎಲ್.ಡಿ.ಎಫ್
1980	ಎಲ್.ಡಿ.ಎಫ್	46	93			
1982	ಯು.ಡಿ.ಎಫ್	77	63			
1984				ಯು.ಡಿ.ಎಫ್	18	2
1987	ಎಲ್.ಡಿ.ಎಫ್	61	78			
1989				ಯು.ಡಿ.ಎಫ್	17	3
1991	ಯು.ಡಿ.ಎಫ್	90	48	ಯು.ಡಿ.ಎಫ್	16	4
1996	ಎಲ್.ಡಿ.ಎಫ್	59	80	ಸಮಬಲ	10	10
1998				ಸಮಬಲ	11	9
1999				ಸಮಬಲ	11	9
2001	ಯು.ಡಿ.ಎಫ್	99	40			
2004				ಎಲ್.ಡಿ.ಎಫ್	2	17
2006	ಎಲ್.ಡಿ.ಎಫ್	42	98			
2009				ಯು.ಡಿ.ಎಫ್	16	4
2011	ಯು.ಡಿ.ಎಫ್	72	68			
2014				ಯು.ಡಿ.ಎಫ್	12	8
2016	ಎಲ್.ಡಿ.ಎಫ್	47	91			
2019				ಯು.ಡಿ.ಎಫ್	19	1
2021	ಎಲ್.ಡಿ.ಎಫ್	41	99			

ಸಿಪಿಐ(ಎಂ) ನ 15, ಸಿಪಿಐ ನ 4 ಮತ್ತು ಕೇರಳ ಕಾಂಗ್ರೆಸ್ (ಮಣಿ) 1 ಅಭ್ಯರ್ಥಿಗಳನ್ನು LDF ಕಣಕ್ಕೆ ಇಳಿಸಿದೆ. UDF ನಿಂದ ಕಾಂಗ್ರೆಸ್ ನ 16, ಮುಸ್ಲಿಂ ಲೀಗ್ ನ 2, ಆರ್.ಎಸ್.ಪಿ ಯ 1, ಕೇರಳ ಕಾಂಗ್ರೆಸ್ (ಜೇಕೊಬ್) ನ 1 ಅಭ್ಯರ್ಥಿಗಳು ಕಣದಲ್ಲಿದ್ದಾರೆ. NDA ಬಿಜೆಪಿಯ ಯ 16 ಮತ್ತು ಬಿ.ಡಿ.ಜೆ.ಎಸ್ ನ 4 ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಇವಲ್ಲದೆ ಬಿ.ಎಸ್.ಪಿ, ವಿ.ಸಿ.ಕೆ, ಎಸ್.ಯು.ಸಿ.ಐ(ಸಿ) ಇತ್ಯಾದಿ ಕೇರಳದಲ್ಲಿ ಹೆಚ್ಚೇನೂ ನೆಲೆಯಿಲ್ಲದ ಸಣ್ಣ ಪಕ್ಷಗಳು ಸಹ ಸ್ಪರ್ಧಿಸುತ್ತಿವೆ.

ಎರಡೂ ರಂಗಗಳಿಂದ ಘಟಾನುಘಟಿಗಳು ಕಣಕ್ಕಿಳಿದಿದ್ದಾರೆ. LDF ನಿಂದ ಆನ್ನಿ ರಾಜಾ, ಎ.ವಿಜಯರಾಘವನ್, ಇ ಕರೀಂ, ಶೈಲಜಾ ಟೀಚರ್, ಥಾಮಸ್ ಐಸಾಕ್ ನಂತಹ ಪ್ರಮುಖರು ಸ್ಪರ್ಧೆಯಲ್ಲಿದ್ದಾರೆ. UDF ನಿಂದ ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ಶಶಿ ತರೂರ್, ಕೆ.ಮುರಳೀಧರನ್, ಪ್ರೇಮಚಂದ್ರನ್ ನಂತಹ ಘಟಾನುಘಟಿಗಳಿದ್ದಾರೆ. NDA ಯಿಂದಲೂ ಪ್ರಸಿದ್ಧ ನಟ ಸುರೇಶ್ ಗೋಪಿ, ರಾಜೀವ್ ಚಂದ್ರಶೇಖರ್, ಸುರೆಂದ್ರನ್ ನಂತಹ ಪ್ರಮುಖರು ರಂಗದ ಖಾತೆ ತೆಗೆಯುವ ಪ್ರಯತ್ನದಲ್ಲಿ ಕಣದಲ್ಲಿದ್ದಾರೆ.

ಮೇಲೆ ಹೇಳಿದ ದೀರ್ಘಕಾಲೀನ ಟ್ರೆಂಡ್ ಗಳು ಮತ್ತು ರಾಜಕೀಯ ಅಂಶಗಳು, ಇತ್ತೀಚಿನ ರಾಜಕೀಯ ಪಲ್ಲಟಗಳು, ರಂಗಗಳ ಪ್ರಚಾರದ ವ್ಯೂಹ–ತಂತ್ರಗಳು ಮತ್ತು ಅವುಗಳಿಗೆ ಪ್ರತಿಸ್ಪಂದನೆಯ ಬೆಳಕಿನಲ್ಲಿ ಎಷ್ಟರ ಮಟ್ಟಿಗೆ ಫಲಿತಾಂಶಗಳ ಮುನ್ನೋಟ ಕೊಡುವಲ್ಲಿ ಸಹಕಾರಿಯಾಗುತ್ತವೆ ಎಂದು ಪರಿಶೀಲಿಸೋಣ.

ಮೂರು ರಂಗಳಿಂದ ಬಿರುಸಿನ ಪ್ರಚಾರ

ಅತ್ಯಂತ ಸುಸಂಘಟಿತ ಕಾರ್ಯಕರ್ತರು ಇರುವ LDF ಕಳೆದ ಹಲವು ತಿಂಗಳುಗಳಿಂದ ಜನಸಂಪರ್ಕ ಕಾರ್ಯಕ್ರಮ ಆರಂಭಿಸಿದೆ. ಕಳೆದ ಮೂರು ವರ್ಷಗಳ ಆಡಳಿತದ ನ್ಯೂನತೆಗಳು ತೊಡಕಾಗದಂತೆ ಮುಖ್ಯಮಂತ್ರಿ ಸೇರಿದಂತೆ ಇಡೀ ಸಚಿವ ಸಂಪುಟ ಬಸ್ ನಲ್ಲಿ ಪ್ರತಿಯೊಂದು ಕ್ಷೇತ್ರಕ್ಕೆ ಹೋಗಿ ಜನರ ದೂರುಗಳನ್ನು ನೇರವಾಗಿ ಆಲಿಸಿತು. ಮನೆಮನೆ ಸಂಪರ್ಕ, ಬೀದಿ ಬದಿ ಸಭೆಗಳು, ಭಾರೀ ಬಹಿರಂಗ ಸಭೆಗಳಲ್ಲದೆ ಸಾಮಾಜಿಕ ಮಾಧ್ಯಮಗಳಲ್ಲೂ ವ್ಯಾಪಕ ಪ್ರಚಾರ ಕೈಗೊಂಡಿದೆ.

LDF ನಾಯಕರು ಕಾರ್ಯಕರ್ತರು ಎಲ್ಲ ಹಂತಗಳಲ್ಲಿ ಕಾರ್ಪೊರೆಟ್–ಕೋಮುವಾದಿ ಕೂಟದ ಪ್ರಧಾನ ಪಕ್ಷವಾಗಿ ಬಿಜೆಪಿ–ಮೋದಿ ಆಡಳಿತವನ್ನು, ಕಾರ್ಪೊರೆಟ್ ಪರ ನೀತಿಗಳ ಸರಣಿಯನ್ನು ಸಮಗ್ರ ಟೀಕೆಗೆ ಗುರಿ ಮಾಡುತ್ತಿದ್ದಾರೆ. ಅದಕ್ಕೆ ಜನಪರ ಬದಲಿ ನೀತಿಗಳನ್ನು ಪ್ರಸ್ತುತ ಪಡಿಸುತ್ತಿದ್ದಾರೆ. ಕ 'ೀರಳ ಮತ್ತು ಇತರ ಬಿಜೆಪಿಯೇತರ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುವ ಗವರ್ನರ್ ಗಳ ಅಸಾಂವಿಧಾನಿಕ ಹಸ್ತಕ್ಷೇಪ ಅತಿರೇಕಗಳು: ಕೇರಳವನ್ನು ಆರ್ಥಿಕವಾಗಿ ಕತ್ತು ಹಿಸುಕುವ ಜಿ.ಎಸ್.ಟಿ ಆದಾಯ ಮತ್ತಿತರ ತೆರಿಗೆಗಳು ಪ್ರಾಕೃತಿಕ ವಿಕೋಪ ನಿಧಿಯಲ್ಲಿ ರಾಜ್ಯದ ಪಾಲು ಕೊಡದ ವಿಳಂಬ ಮಾಡುವ ತಾರತಮ್ಯ ಒಕ್ಕೂಟವಾದಿ–ವಿರೋಧಿ ಹಣಕಾಸು ನೀತಿಗಳು: ವಿರೋಧ ಪಕ್ಷದ ನಾಯಕರ ಮತ್ತು ನಿಕಟವರ್ತಿಗಳ ಮೇಲೆ ಇಡಿ–ಸಿಬಿಐ ಗಳ ಮೂಲಕ ಹುಸಿ ಭ್ರಷ್ಟಾಚಾರ ಆರ್ಥಿಕ–ಅಪರಾಧಗಳ ಪ್ರಕರಣ ದಾಖಲೆಗಳ ಮೂಲಕ ಕಿರುಕುಳ ಕೊಡುವ ಮೂಲಕ ಪ್ರಜಾಪ್ರಭುತ್ವ–ವಿರೋಧಿ ಕ್ರಮಗಳು – ಇವುಗಳ ವಿರುದ್ಧ ಬಿರುಸಿನ ಪ್ರಚಾರ ನಡೆಸುತ್ತಿದೆ. ರಾಜ್ಯದ ಹಿತಾಸಕ್ತಿಗಳನ್ನು ಸ್ವಾಯತ್ತತೆಯನ್ನು ಸಂರಕ್ಷಿಸಲು ದೆಹಲಿಗೆ ಕೇರಳದ ಇಡೀ ಮಂತ್ರಿಮಂಡಲ, ಎಲ್ಲ ಶಾಸಕರ, ಸಂಸದರ ಪ್ರತಿಭಟನಾ ಸಭೆಯನ್ನು ದೆಹಲಿಯ ಜಂತರ್ ಮಂತರ್ ನಲ್ಲಿ ಸಂಘಟಿಸುವ ಮೂಲಕ ಬಿಜೆಪಿ ಕೇಂದ್ರ ಸರಕಾರದ ಅಂಗಳಕ್ಕೆ ಒಯ್ದಿತ್ತು. ಹಲವು ವಿಷಯಗಳಲ್ಲಿ ಕೇಂದ್ರ ಸರಕಾರದ ಕಾನೂನು–ಸಂವಿಧಾನ ವಿರೋಧಿ ಕ್ರಮಗಳ ವಿರುದ್ಧ ➚

ಸುಪ್ರೀಂ ಕೋರ್ಟಿನ ಮೆಟ್ಟಿಲು ಸಹ ಹತ್ತಿದೆ.

ಸಿಎಎ ವಿರುದ್ಧ ರಾಜ್ಯದ ಹಲವು ಪ್ರಾದೇಶಿಕ ಕೇಂದ್ರಗಳಲ್ಲಿ ಭಾರೀ ಸಭೆಗಳನ್ನು ನಡೆಸಿ ಅಭಿಯಾನ ನಡೆಸಿತ್ತು. ಕೇರಳದಲ್ಲಿ ಸಿಎಎ ಜಾರಿ ಮಾಡುವುದಿಲ್ಲ, ಬಿಜೆಪಿಯೇತರ ಬದಲಿ ಸರಕಾರ ಸಿಎಎ ರದ್ದು ಮಾಡಲು ಒತ್ತಡ ಹೇರುತ್ತದೆ ಎಂದು ಈ ಸಭೆಗಳಲ್ಲಿ ಹೇಳಲಾಯಿತು. ಇದೇ ರೀತಿ ಇಡಿ ಗೆ ಅನಗತ್ಯ ಅನಿರ್ಬಂಧಿತ ಅಧಿಕಾರ ಕೊಟ್ಟು ವಿರೋಧ ಪಕ್ಷಗಳ ಮತ್ತು ಇತರ ವಿರೋಧಿಗಳಿಹೆ ಕಿರುಕುಳ ವಸೂಲಿ ಧಂಧೆಗೆ ಕಾರಣವಾಗಿರುವ ಪಿ.ಎಂ.ಎಲ್.ಎ ತಿದ್ದುಪಡಿಗಳನ್ನು ರದ್ದು ಮಾಡುತ್ತದೆ ಎಂದೂ ಪ್ರಚಾರ ಮಾಡುತ್ತಿದೆ. ಏಕರೂಪ ನಾಗರಿಕ ಸಂಹಿತೆ(ಯು.ಸಿ.ಸಿ) ಯನ್ನು ಸಹ ವಿರೋಧಿಸಿದೆ. ಕಲಮು 370ನ್ನು ಮರುಸ್ಥಾಪಿಸುವುದಕ್ಕೆ ಹೋರಾಡುವುದಾಗಿ ಸಹ ಹೇಳಿದೆ. ಚುನಾವಣಾ ಬಾಂಡುಗಳ ವಿವರಗಳಿಂದ ಗೊತ್ತಾಗಿರುವ ಮತ್ತು ಇತರ ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಸಹ ಬಿರುಸಿನಿಂದ ಬಯಲಿಗೆಳೆಯುತ್ತಿದೆ. ಚುನಾವಣಾ ಬಾಂಡುಗಳನ್ನು ತಿರಸ್ಕರಿಸಿದ ಮತ್ತು ಅದಕ್ಕೆ ಕಾನೂನಾತ್ಮಕವಾಗಿ ಸಫಲವಾಗಿ ಸವಾಲು ಹಾಕಿದ ಏಕಮಾತ್ರ ಪಕ್ಷವೆಂದು ಸಾರುತ್ತಿದೆ.

UDF ಸಹ ಚುನಾವಣಾ ಪ್ರಚಾರದಲ್ಲಿ 10 ವರ್ಷಗಳ ಮೋದಿ ದುರಾಡಳಿತದ, ಕೆಲವು ಆರ್ಥಿಕ ನೀತಿಗಳ ಟೀಕೆ ಮಾಡುತ್ತವೆ. ಜನರ ಸಮಸ್ಯೆಗಳಾದ ಬೆಲೆಏರಿಕೆ, ನಿರುದ್ಯೋಗ ಇತ್ಯಾದಿ ಸಮಸ್ಯೆಗಳ ಪರಿಹಾರ ಮಾಡುವಲ್ಲಿ ವೈಫಲ್ಯ; ಚುನಾವಣಾ ಬಾಂಡ್ ಭ್ರಷ್ಟಾಚಾರ, ಬಿಜೆಪಿಯೇತರ ರಾಜ್ಯ ಸರಕಾರಗಳು ಮತ್ತು ನಾಯಕರ ವಿರುದ್ಧ ಅಪ್ರಜಾಸತ್ತಾತ್ಮಕ ಕ್ರಮಗಳ ಟೀಕೆ ಮಾಡುತ್ತಿದೆ. ಆದರೆ LDF ರಾಜ್ಯ ಸರಕಾರದ ಆರ್ಥಿಕ ಅಶಿಸ್ತು, ದುರಾಡಳಿತ, ಭ್ರಷ್ಟಾಚಾರದ ಆಪಾದನೆಗಳ ಮೇಲೂ ಅಷ್ಟೇ ಅಥವಾ ಇನ್ನೂ ಹೆಚ್ಚು ಬಿರುಸಾಗಿ ಒತ್ತು ಕೊಡುತ್ತಿದೆ. ಸಿಎಎ, ಯುಸಿಸಿ, ಕಲಮು 370 ಗಳ ಬಗ್ಗೆ ಪ್ರಚಾರದಲ್ಲಿ UDF ಮೌನವಾಗಿದೆ.

NDA ಎರಡೂ ರಂಗಗಳ ವಿರುದ್ಧ ಅಥವಾ ಇಡಿಯಾಗಿ ಇಂಡಿಯಾ ಕೂಟದ ವಿರುದ್ಧ ಪ್ರಚಾರದಲ್ಲಿ ಪ್ರಮುಖವಾಗಿ ಹಿಂದೂ–ವಿರೋಧಿ ಮುಸ್ಲಿಂ ತುಷ್ಟೀಕರಣದ ಆಪಾದನೆಗಳನ್ನು ಮಾಡುವುದಕ್ಕೆ ಒತ್ತು ಕೊಟ್ಟಿದೆ. ಕೇರಳ ಲವ್–ಜಿಹಾದ್ ನ, ಇಸ್ಲಾಮಿಕ್ ಮೂಲಭೂತವಾದದ ಕೇಂದ್ರ ಇತ್ಯಾದಿಯಾಗಿ ಪ್ರಚಾರ ಮಾಡುತ್ತಿದೆ. ಇದಕ್ಕಾಗಿ 'ಕೇರಳ ಸ್ಟೋರಿ' ಫಿಲಂ ನ್ನು ಉಚಿತ ಸಾರ್ವಜನಿಕ ಪ್ರದರ್ಶನ ಮಾಡಿತು. ಅದನ್ನು ದೂರದರ್ಶನದಲ್ಲೂ ಪ್ರಸಾರ ಮಾಡಿಸಿತು. ಕಳೆದ ಕೆಲವು ವರ್ಷಗಳಿಂದ ಕೆಲವು ಕ್ರೈಸ್ತ ಪಾದರಿಗಳನ್ನು ವಿಶ್ವಾಸಕ್ಕೆ ಪಡೆದು ಅವರ ನೆರವಿನಿಂದ ಕ್ರೈಸ್ತರ ನಡುವೆ ಮುಸ್ಲಿಂ ದ್ವೇಷ ಹರಡುವ ಮೂಲಕ ಬಿಜೆಪಿಗೆ ಗೆದ್ದುಕೊಳ್ಳುವ ಪ್ರಯತ್ನ ನಡೆಸಿತು. ಕೆಲವು ಕ್ರೈಸ್ತ ಪಾದರಿಗಳು ಕ್ರೈಸ್ತರು 'ಲವ್–ಜಿಹಾದ್' ಗೆ ಬಲಿ ಬೀಳದಂತೆ ಎಚ್ಚರ ವಹಿಸುವ ಧಾರ್ಮಿಕ ನಿರ್ದೇಶನ ಸಹ ಕೊಟ್ಟರು. ಕೆಲವು ಕ್ರೈಸ್ತ ಧಾರ್ಮಿಕ ಸಂಸ್ಥೆಗಳಲ್ಲಿ 'ಕೇರಳ ಸ್ಟೋರಿ' ಚಿತ್ರ ಪ್ರದರ್ಶನವೂ ನಡೆಯಿತು. ಆದರೆ ಮಣಿಪುರದಲ್ಲಿ ಕ್ರೈಸ್ತ ಬುಡಕಟ್ಟುಗಳ ಮೇಲೆ ದೌರ್ಜನ್ಯಗಳು ಮತ್ತು ದೇಶದ ಇತರೆಡೆಯಲ್ಲಿ ಕ್ರೈಸ್ತರು ಮತ್ತು ಚರ್ಚುಗಳ ಮೇಲೆ ದಾಳಿಯ ಹಿನ್ನೆಲೆಯಲ್ಲಿ ಇಂತಹ ಪ್ರಯತ್ನಗಳಿಗೆ ಪ್ರತಿರೋಧ ಮತ್ತು ತಡೆಗಳು ಬಂದಿವೆ. ಇತ್ತೀಚೆಗೆ ಕೇರಳ ಕಾಂಗ್ರೆಸ್ ನ ಒಂದು ಹೊಸ ಬಣ ಸೃಷ್ಟಿಸಿ ತನ್ನ ರಂಗಕ್ಕೆ ಸೇರಿಸಿಕೊಳ್ಳುವುದರಲ್ಲೂ ಸಫಲವಾಗಿದೆ. ಇಂಡಿಯಾ ಕೂಟ ಒಬ್ಬ ನಾಯಕನಿಲ್ಲದ ಒಡೆದ ಮನೆ, ಹಿಂದೂ–ವಿರೋಧಿ, ಮೋದಿ ಅಪ್ರತಿಮ ನಾಯಕ, ಜಿಡಿಪಿ ಹೆಚ್ಚಳ, ಕಲ್ಯಾಣ ಯೋಜನೆಗಳು, ವಿಶ್ವದಲ್ಲಿ ಪ್ರತಿಷ್ಠೆ, ಮೋದಿ ಸರಕಾರ ಸಾಧನೆಗಳು, ವಿಕಸಿತ ಭಾರತದ ಕನಸುಗಳು – ಇವು NDA ಪ್ರಚಾರದ ಪ್ರಮುಖ ಅಂಶಗಳು. ಇದಲ್ಲದೆ LDF ರಾಜ್ಯ ಸರಕಾರದ ವಿರುದ್ಧ UDF ಮಾಡುವ ಆರ್ಥಿಕ ಅಶಿಸ್ತು, ದುರಾಡಳಿತ, ಭ್ರಷ್ಟಾಚಾರದ ಆಪಾದನೆಗಳ ಪ್ರಚಾರ ಸಹ ಮಾಡುತ್ತಿದೆ. ಸಿಎಎ, ಯುಸಿಸಿ, ಕಲಮು 370 ರದ್ದತಿಗಳ ಸಮರ್ಥನೆಯಲ್ಲೂ ತೊಡಗಿದೆ.

ಫಲಿತಾಂಶದ ಮೇಲೆ ಪರಸ್ಪರ ಬಿರುಸಿನ ಪ್ರಚಾರದ ಒಟ್ಟು ಪರಿಣಾಮವೇನು?

ಲೋಕಸಭೆಯಲ್ಲಿ ಕೇರಳದ ಮತದಾರರ ಆಯ್ಕೆಯ ದೀರ್ಘ ಕಾಲೀನ ಟ್ರೆಂಡ್ UDF ಪರವಾಗಿದೆ. ಇದು ಪ್ರಮುಖವಾಗಿ ಕೆಲವು ರಾಜಕೀಯ ಅಂಶಗಳ ಮೇಲೆ ಅವಲಂಬಿತವಾಗಿದೆ.

* ಕೇರಳದ ಸುಮಾರು ಶೇ.45 ಇರುವ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಒಂದು ವಿಭಾಗ UDF ನ ಭಾಗವಾಗಿರುವ ಮುಸ್ಲಿಂ ಲೀಗ್ ಮತ್ತು ಕೇರಳ ಕಾಂಗ್ರೆಸ್ ನ್ನು ಸ್ಥಿರವಾಗಿ ಬೆಂಬಲಿಸುತ್ತದೆ.
* ಬಿಜೆಪಿಯಂತಹ ಹಿಂದೂ ಕೋಮುವಾದಿ ಪಕ್ಷವನ್ನು ಕೇಂದ್ರ ಸರಕಾರ ರಚಿಸದಂತೆ ಮಾಡುವುದು ಕೇರಳದ ಎಲ್ಲ ಅಲ್ಪಸಂಖ್ಯಾತರ ಮತ್ತು ಬಹುಪಾಲು ಸೆಕ್ಯುಲರ್ ಹಿಂದೂಗಳ ಆದ್ಯತೆ.
* ಕೇಂದ್ರದಲ್ಲಿ ಸೆಕ್ಯುಲರ್ ಸರಕಾರ ರಚಿಸುವುದಕ್ಕೆ ಪ್ರಬಲ ಕಾಂಗ್ರೆಸ್ ಅಗತ್ಯವಿದೆ. ರಾಷ್ಟ್ರಮಟ್ಟದಲ್ಲಿ (ಪ.ಬಂಗಾಳ ಮತ್ತಿತರ ರಾಜ್ಯಗಳಲ್ಲಿ ಅದು ದುರ್ಬಲವಾಗಿರುವುದರಿಂದ) ಸೆಕ್ಯುಲರ್ ಸರಕಾರ ರಚಿಸುವುದರಲ್ಲಿ ಎಡಪಕ್ಷಗಳು ಹೆಚ್ಚಿನ ಪ್ರಭಾವ ಬೀರಲಾಗುವುದಿಲ್ಲವೆಂದು LDF ನ ಶಾಶ್ವತ, ಸ್ಥಿರ ಬೆಂಬಲಿಗರನ್ನು ಬಿಟ್ಟರೆ ಉಳಿದವರ ಸ್ಥೂಲ ಅಭಿಮತ.

ಈ UDF ಪರವಾಗಿರುವ ಅಂಶಗಳನ್ನು ಬದಲಾಯಿಸಲು LDF ಮತ್ತು NDA ಎರಡೂ ಪ್ರಯತ್ನಿಸುತ್ತಿವೆ.

LDF ಸಿಎಎ, ಯುಸಿಸಿ, ಕಲಮು 370 ಗಳ ಮತ್ತು ಮುಸ್ಲಿಮರು ಕ್ರಿಶ್ಚಿಯನ್ನರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತು ಪ್ರಚಾರದಲ್ಲೂ ಪ್ರಣಾಳಿಕೆಯಲ್ಲೂ ಕಾಂಗ್ರೆಸ್ ನ ಮೌನ ಮತ್ತು ಒಟ್ಟಾರೆ ಮೃದು–ಹಿಂದುತ್ವವನ್ನು ಕಟುವಾಗಿ ಟೀಕಿಸುತ್ತಿದೆ. ಇದಲ್ಲದೆ ದೇಶದಾದ್ಯಂತ ಮತ್ತು ಕೇರಳದಲ್ಲಿಯೂ ಇಬ್ಬರು ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿಗಳ ಮಕ್ಕಳು ಸೇರಿದಂತೆ ಕಾಂಗ್ರೆಸ್ ನಾಯಕರು ಚುನಾವಣೆಗೆ ಮೊದಲೂ ನಂತರವೂ (ಉದಾ: ಹಿಮಾಚಲ ಪ್ರದೇಶ) ಬೆದರಿಕೆ ಆಮಿಷಗಳಿಗೆ ಬಲಿಬಿದ್ದು ಬಿಜೆಪಿಗೆ ಪಕ್ಷಾಂತರ ಮಾಡುತ್ತಿರುವುದನ್ನು LDF ತನ್ನ ಪ್ರಚಾರದಲ್ಲಿ ಎತ್ತಿತೋರಿಸುತ್ತಿದೆ. ಕೇಂದ್ರದಲ್ಲಿ ಬಿಜೆಪಿಯೇತರ ಸರಕಾರ ರಚನೆಗೆ LDF ಅಭ್ಯರ್ಥಿಗಳು ಹೆಚ್ಚು ಭದ್ರ ಬುನಾದಿಯಾಗುತ್ತಾರೆ. ಮುಸ್ಲಿಮರು ಕ್ರಿಶ್ಚಿಯನ್ನರ ರಕ್ಷಣೆಗೆ ಹೋರಾಡುವುದಕ್ಕೆ ಮತ್ತು ಹಿಂದುತ್ವಕ್ಕೆ ದೃಢ ಪ್ರತಿರೋಧ ತೋರುವುದಕ್ಕೆ ಎಡ ಪಕ್ಷಗಳು ಹೆಚ್ಚು ಉತ್ತಮ ಆಯ್ಕೆ ಎಂದು ಪ್ರತಿಪಾದಿಸುತ್ತಿವೆ.

	ವಿಧಾನಸಭಾ				ಲೋಕಸಭಾ				
	UDF		LDF		UDF		LDF		
	ಸೀಟು	%ಮತ	ಸೀಟು	%ಮತ	ಸೀಟು	%ಮತ	ಸೀಟು	%ಮತ	%ಮತ
2014					12	41.98	8	40.12	10.8
2016	47	35.5	91	39.1					10.5
2019					19	47.48	1	36.29	15.6
2021	41	33.39	99	38.51					11.30

ಕೇರಳದ ಹಿತಾಸಕ್ತಿ ಕಾಪಾಡುವುದಕ್ಕೆ ಹೋರಾಡುವುದಕ್ಕಿಂತ ರಾಜ್ಯ ಸರಕಾರಕ್ಕೆ ವಿರೋಧ ವ್ಯಕ್ತಪಡಿಸುವುದೇ UDF ಆದ್ಯತೆಯಾಗಿದೆ. ಕೇರಳದ ವಿರುದ್ಧ ಕೇಂದ್ರದ ಬಿಜೆಪಿ ಸರಕಾರದ ತಾರತಮ್ಯ ದಮನ ಧೋರಣೆಯ ವಿರುದ್ಧ ಕೇರಳ ಸರಕಾರ ದೆಹಲಿಯಲ್ಲಿ ಆಯೋಜಿಸಿದ ಎಲ್ಲ ಶಾಸಕರ ಮತ್ತು ಸಂಸದರ ಪ್ರತಿಭಟನಾ ಸಭೆಯಲ್ಲಿ UDF ಭಾಗವಹಿಸಿಲ್ಲ, ಪಾರ್ಲಿಮೆಂಟಿನಲ್ಲೂ ಮೌನವಾಗಿದೆ. ಅದರ ಬಗ್ಗೆ ಪ್ರಾಮಾಣಿಕವಾಗಿಲ್ಲ ಎಂದು ಗಂಭೀರ ಆರೋಪ ಮಾಡಿದೆ. ಹಲವು ವಾರಗಳ ಮೊದಲೇ ಘೋಷಿಸಿ ಫೆ.8ರಂದು LDF ಸರಕಾರ ಸಂಘಟಿಸಿದ ಪ್ರತಿಭಟನೆಯಲ್ಲಿ ಭಾಗವಹಿಸಲಿಲ್ಲ. ಅದರ ಒಂದು ದಿನ ಮೊದಲು ಕರ್ನಾಟಕ ಕಾಂಗ್ರೆಸ್ ಶಾಸಕರು, ಸಂಸದರು ಅದೇ ಪ್ರತಿಭಟನೆಯ ಕಾಪಿ ಹೊಡೆದದ್ದು ಗೋಸುಂಬೆತನವಲ್ಲವೇ ಎಂದು LDF ಪ್ರಶ್ನಿಸಿದೆ. ಈ ಎಲ್ಲಾ ಪ್ರಯತ್ನಗಳ ಫಲವಾಗಿ UDF ಗೆ ಲೋಕಸಭೆಯಲ್ಲಿ ಬೆಂಬಲಿಸುತ್ತಿದ್ದ ಧಾರ್ಮಿಕ ಅಲ್ಪಸಂಖ್ಯಾತರ ಒಂದು ವಿಭಾಗ ಮತ್ತು ಸೆಕ್ಯುಲರ್ ಹಿಂದೂಗಳ ಒಂದು ವಿಭಾಗ LDF ನತ್ತ ವಾಲುವ ಸಾಧ್ಯತೆಯಿದೆ.



ಈ ಅಪಾಯ ಮನಗಂಡ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಜೆಪಿ ಕೇಂದ್ರ ಸರಕಾರದ ಜತೆ LDF ಗುಪ್ತ ಹೊಂದಾಣಿಕೆ ಇಟ್ಟುಕೊಂಡಿದೆ. ಹಾಗಾಗಿಯೇ ಇಡಿ–ಸಿಬಿಐ ಪ್ರಕರಣಗಳಿದ್ದರೂ, ದೆಹಲಿ–ಜಾರ್ಖಂಡ್ ನಂತೆ ಕೇರಳ ಮುಖ್ಯಮಂತ್ರಿಯನ್ನು ಬಂಧಿಸಿಲ್ಲ ಎಂಬ ಹೇಳಿಕೆ ನೀಡಿ ತೀವ್ರ ವಿವಾದವೆಬ್ಬಿಸಿದ್ದಾರೆ. ಇದಕ್ಕೆ "ನಿಮ್ಮ ಅಜ್ಜಿ ತುರ್ತು ಪರಿಸ್ಥಿತಿಯಲ್ಲಿ ಬಂಧಿಸಿ ಒಂದುವರೆ ವರ್ಷ ಜೈಲಿನಲ್ಲಿಟ್ಟಿದ್ದರು" ಎಂದು ಮುಖ್ಯಮಂತ್ರಿ ಪಿಣರಾಯಿ ಸೇರಿದಂತೆ ಸಿಪಿಐ(ಎಂ) ನಾಯಕರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಉತ್ತರ ಪ್ರದೇಶದಂತಹ ಬಿಜೆಪಿ ರಾಜ್ಯದಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಸ್ಪರ್ಧೆ ನೀಡಿ ತಮ್ಮ ಬಿಜೆಪಿ–ವಿರೋಧಿ ನಾಯಕತ್ವವನ್ನು ದೃಢವಾಗಿ ಪ್ರದರ್ಶಿಸುವ ತಾಕತ್ತು ಇಲ್ಲದೆ ಕೇರಳಕ್ಕೆ ವಲಸೆ ಬಂದಿದ್ದಾರೆ ಎಂದು ಮೂದಲಿಸಿದ್ದಾರೆ. LDF ಮತ್ತು UDF ನಡುವಿನ ಈ ಘರ್ಷಣೆಯನ್ನು ಬಳಸಿ ಇಂಡಿಯಾ ಕೂಟ ಒಡೆದ ಮನೆ, ಕೇರಳದಲ್ಲಿ ಅವರ ಘರ್ಷಣೆ, ಕೇಂದ್ರದಲ್ಲಿ ಅವರ ಒಕ್ಕಟ್ಟು ಎರಡೂ ಬರಿಯ ಡ್ರಾಮಾ ಎಂದು ಮೂದಲಿಸಲು NDA ಬಳಸಿದೆ.

ಇವೆಲ್ಲ ಬಿರುಸಿನ ಪ್ರಚಾರದ ಪರಿಣಾಮ ಪ್ರತಿ ರಂಗದ ಮತಗಳಿಕೆಯ ಮೇಲೆ ಎಷ್ಟು ಪರಿಣಾಮ ಬೀರಬಹುದು ಎಂಬುದರ ಮೇಲೆ ಸೀಟುಗಳ ಪ್ರಮಾಣ ನಿಗದಿಯಾಗುತ್ತದೆ. ಇತ್ತೀಚಿನ ಚುನಾವಣೆಗಳಲ್ಲಿ ಸೀಟು ಮತ್ತು % ಮತಗಳಿಕೆ ಈ ಕೆಳಗಿನಂತಿದೆ:

ಲೋಕಸಭಾ ಚನಾವಣೆಯಲ್ಲಿ ಮೇಲೆ ಹೇಳಿದ UDF ಪರ ಅಂಶಗಳ ಜತೆ 2019 ರಲ್ಲಿ ಶಬರಿಮಲೈ ವಿವಾದವನ್ನು LDF ವಿರುದ್ಧ ತಿರುಗಿಸಿದ್ದು, UDF ಜಯಭೇರಿಗೆ ಕಾರಣವಾಗಿತ್ತು. ಎರಡು ಸತತ ವಿಧಾನಸಭೆ ಚುನಾವಣೆಗಳಲ್ಲಿ ಗೆಲ್ಲುವ ಮೂಲಕ LDF ತನ್ನ ಶಾಶ್ವತ ಸ್ಥಿರ ಮತದಾರರನ್ನು ಹೆಚ್ಚಿಸಿಕೊಂಡಂತೆ ಕಾಣುತ್ತಿದೆ. 2021 ವಿಧಾನಸಭಾ ಚುನಾವಣೆಯಲ್ಲಿ – ವಾಯನಾಡ್, ಮಲಪ್ಪುರಂ, ಪೊನ್ನಾನಿ, ಕೊಟ್ಟಾಯಂ, ಎರ್ನಾಕುಲಂ – ಈ 5 ಕ್ಷೇತ್ರಗಳನ್ನು ಬಿಟ್ಟರೆ ಇತರ 15 ಲೋಕಸಭಾ ಕ್ಷೇತ್ರಗಳಲ್ಲಿ LDF ನಿಚ್ಚಳ ಬಹುಮತ ಪಡೆದಿದೆ. ಈ ಸಾಧನೆ ರಿಪೀಟ್ ಆಗದಿದ್ದರೂ, ಉತ್ತಮ ಆಡಳಿತ ಮತ್ತು ರಾಜ್ಯದ ವಿರುದ್ಧ ಕೇಂದ್ರದ ತಾರತಮ್ಯದ ವಿರುದ್ಧ ದೃಢ ಹೋರಾಟಗಳಿಂದಾಗಿ, LDF ಹೊಯ್ದಾಡುವ ಮತದಾರರ ವಿಭಾಗದ ಸಾಕಷ್ಟು ಮತ ಗಳಿಸುವ ಸಾಧ್ಯತೆಯಿದೆ. ಕಾಂಗ್ರೆಸ್ ನ ಮೃದು ಹಿಂದುತ್ವದ ಮತ್ತು ಅನೈಕ್ಯತೆ ಅಸ್ಥಿರತೆಗಳ ಕಾರಣದಿಂದ UDF ಅಲ್ಪಸಂಖ್ಯಾತರ ಮತ್ತು ಇತರ ಮತವನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಿದೆ. ಮೋದಿ ಸರಕಾರದ 10 ವರ್ಷಗಳ ಕೇಂದ್ರದ ಆಡಳಿತದ ವೈಫಲ್ಯ ಮತ್ತು ಕೇರಳಕ್ಕೆ ತಾರತಮ್ಯದ ನೀತಿಯಿಂದಾಗಿ NDA 2019ರ ಮತಗಳಿಕೆಗಿಂತ ಕಡಿಮೆ ಯಾಗುವ ಸಾಧ್ಯತೆ ಹೆಚ್ಚಿದೆ.

ಹೆಚ್ಚು ಕಡಿಮೆ 2014ರ ಪ್ರಮಾಣ ಆದರೆ LDF ಮತ್ತು UDF ಪಾತ್ರ ತಿರುವು ಮುರುವು ಆಗುವ ಸಾಧ್ಯತೆ ಹೆಚ್ಚು. ಅಂದರೆ LDF 12 ಸೀಟು (43% ಮತ) UDF 8 ಸೀಟು (40% ಮತ) NDA 0 ಸೀಟು (10%) ಸಂಭಾವ್ಯ ಫಲಿತಾಂಶವಾಗಿರುತ್ತದೆ. ಕೇರಳದಲ್ಲಿ ಲೋಕಸಭಾ ಚುನಾವಣೆಯಲ್ಲಿ ನಿಶ್ಚಿತವಾಗಿ ಏನನ್ನೂ ಹೇಳುವುದು ಕಷ್ಟ. ಒಂದು ರಂಗ ಭಾರೀ ಮೇಲುಗೈ ಸಾಧಿಸುವುದು ಸಾಮಾನ್ಯ. ಈ ಬಾರಿ LDF ಭಾರೀ ಮೇಲುಗೈ ಸಾಧಿಸುವ ಸಾಧ್ಯತೆ ಇಲ್ಲದಿಲ್ಲ. ●

ಹಳಸಲು ಹಿಂದುತ್ವ ಮಿಥ್ಯೆಗಳ ಹೊಸ ಆವೃತ್ತಿ: ಮೋದಿ ಚುನಾವಣಾ ಟೂಲ್‌ಕಿಟ್–2024

ರಾಮಮಂದಿರದ ಉದ್ಘಾಟನೆಯಲ್ಲಿ ಭಾಗವಹಿಸದ 'ಶ್ರೀರಾಮ–ವಿರೋಧಿಗಳು' ಎನ್ನುವುದರಿಂದ ಆರಂಭಿಸಿ 'ಮಛ್ಲಿ–ಮೊಗಲ್–ಮುಸ್ಲಿಮ್' ನಂತರ, ಈಗ ಪ್ರತಿದಿನ ಎಂಬಂತೆ ಚುನಾವಣಾ ನೀತಿ ಸಂಹಿತೆಯನ್ನೂ ಲೆಕ್ಕಿಸದೆ ವಿವಾದಾಸ್ಪದ ಹೇಳಿಕೆಗಳನ್ನು ಸ್ವತಃ ಪ್ರಧಾನ ಮಂತ್ರಿಗಳು ಕೊಡುತ್ತಿದ್ದಾರೆ. ಹಲವು ವೀಕ್ಷಕರು ಗಮನಿಸಿದಂತೆ, ಮೊದಲ ಹಂತದ ಮತದಾನದ ನಂತರ ಇದು ಕಾಣ–ಕೇಳಬರುತ್ತಿದೆ.

ರಾಜಸ್ಥಾನ–ಮಧ್ಯಪ್ರದೇಶದಲ್ಲಿ ಚುನಾವಣಾ ಪ್ರಚಾರ ಸಭೆಗಳಲ್ಲಿ 'ಇಂಡಿಯಾ' ಮೈತ್ರಿ ಕೂಟವನ್ನು ಟೀಕಿಸಲು 'ದೊಡ್ಡ ಸಂಖ್ಯೆಗಳಲ್ಲಿ ಮಕ್ಕಳನ್ನು ಹೊಂದಿರುವ' ಸಮುದಾಯವನ್ನು ಗುರಿ ಮಾಡುತ್ತಿದ್ದಾರೆ. ಅವರ ಗುರಿ ಮುಸ್ಲಿಂ ಸಮುದಾಯ ಎಂಬ ಬಗ್ಗೆ ಸಂದೇಹವೂ ಇರದಂತಹ ಮಾತುಗಳನ್ನೂ ಆಡಿದ್ದಾರೆ.

ಮುಸ್ಲಿಂ ಮಹಿಳೆಯರು ಹೆಚ್ಚು ಮಕ್ಕಳನ್ನು ಹೆರುವ ಮೂಲಕ ಭಾರತದಲ್ಲಿ ಮುಸ್ಲಿಮರು ಬಹುಸಂಖ್ಯಾತ ಸಮುದಾಯವಾಗುವ ಹುನ್ನಾರ ನಡೆದಿದೆ ಎಂಬುದು ಹಿಂದುತ್ವ ಮಂದಿ ಲಾಗಾಯ್ತಿನಿಂದ ಹುಟ್ಟಿಸಿರುವ 'ಇಸ್ಲಾಂ ಭೀತಿ'ಯ ಮಿಥ್ಯೆಯ ಪ್ರಮುಖ ಅಂಶ. ಅದು ಶುದ್ಧಸುಳ್ಳು ಎಂಬುದು ಬಹಳ ಹಿಂದೆಯೇ ಸಾಬೀತಾಗಿದೆ. 2011ರ ಜನಗಣತಿ ಇದನ್ನು ಸ್ಪಷ್ಟವಾಗಿ ತೋರಿಸಿತು. ಆದರೂ ಹೊಸ–ಹೊಸ ರೂಪಗಳಲ್ಲಿ ಅದರ ಪುನರಾವರ್ತನೆ ನಡೆದಿದೆ. 2021ರ ಜನಗಣತಿಯನ್ನು ಕೋವಿಡ್ ಹೆಸರಲ್ಲಿ ಅನಿರ್ದಿಷ್ಟ ಕಾಲದ ವರೆಗೂ ಮುಂದೂಡಿರುವುದು ಇಂತಹ ಹಲವು ಅಂಕಿ–ಅಂಶಗಳು ಬೆಳಕಿಗೆ ಬರದಿರಲಿ ಎಂದು ಹಲವು ಅಧ್ಯಯನಕಾರರು ಈಗ ಹೇಳುತ್ತಿದ್ದಾರೆ.

ಆದರೂ ತೀರಾ ಇತ್ತೀಚಿನ(2019–21) 'ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ' (ಎನ್‌ಎಫ್‌ಹೆಚ್‌ಎಸ್–5) ಇದು ಶುದ್ಧ ಮಿಥ್ಯೆ ಎಂಬುದನ್ನು ಇನ್ನೊಮ್ಮೆ ಸ್ಪಷ್ಟಗೊಳಿಸಿದೆ (ದಿ ಹಿಂದು, ಎಪ್ರಿಲ್ 23)

ಒಟ್ಟು ಫಲವತ್ತೆಯ ದರ' (ಟಿಎಫ್‌ಆರ್), ಅಂದರೆ ಒಬ್ಬ ಮಹಿಳೆ ತನ್ನ ಜೀವಮಾನದಲ್ಲಿ ಹೆರುವ ಮಕ್ಕಳ ಸರಾಸರಿ, ದೇಶದ ಎಲ್ಲ ಸಮುದಾಯಗಳಲ್ಲೂ ಇಳಿಯುತ್ತ ಬಂದಿದೆ. 1998–99ರಲ್ಲಿ ನಡೆಸಿದ ಸರ್ವೆಯ (ಎನ್‌ಎಫ್‌ಹೆಚ್‌ಎಸ್–2) ಪ್ರಕಾರ ಹಿಂದೂಗಳಲ್ಲಿ 2.78 ಆಗಿದ್ದರೆ, ಮುಸ್ಲಿಮರಲ್ಲಿ 3.59. ಅಂದರೆ ವ್ಯತ್ಯಾಸ 0.81. 2019–21ರ ಸರ್ವೆಯಲ್ಲಿ ಇದು 0.42ಕ್ಕೆ ಇಳಿದಿದೆ. ಅಂದರೆ ಹಿಂದೂಗಳಲ್ಲಿ 1.94, ಮುಸ್ಲಿಮರಲ್ಲಿ 2.36.

ಕಳೆದ 4 ಸರ್ವೆಗಳ ಅಂಕಿ–ಅಂಶಗಳು ಹೀಗಿವೆ:

	ವರ್ಷ	ಹಿಂದು	ಮುಸ್ಲಿಂ	ವ್ಯತ್ಯಾಸ
ಎನ್‌ಎಫ್‌ಹೆಚ್‌ಎಸ್–1	1992–93	3.30	4.41	1.11
ಎನ್‌ಎಫ್‌ಹೆಚ್‌ಎಸ್–2	1998–99	2.78	3.59	0.81
ಎನ್‌ಎಫ್‌ಹೆಚ್‌ಎಸ್–3	2005–06	2.59	3.4	0.81
ಎನ್‌ಎಫ್‌ಹೆಚ್‌ಎಸ್–4	2015–16	2.13	2.62	0.49
ಎನ್‌ಎಫ್‌ಹೆಚ್‌ಎಸ್–5	2019–21	1.94	2.36	0.42

ನವಜಾತ ಶಿಶುಗಳ ಮರಣ ದರದಲ್ಲೂ, ಮತ್ತು 5 ವರ್ಷಗಳ ಕೆಳಗಿನ ಮಕ್ಕಳ ಮರಣದರದಲ್ಲೂ ಇಳಿಕೆಯಾಗಿದೆ, ಮತ್ತು ಇವೂ ಎಲ್ಲ ಸಮುದಾಯಗಳಲ್ಲೂ ಇಳಿಯುತ್ತ ಬಂದಿವೆ.

ನಗರಗಳಲ್ಲಿ ಶಿಶು ಮರಣ ದರ(NMR) ಮತ್ತು ಇಳಿಕೆ

ವರ್ಷ	1998–99	2005–06	2019–21
ಹಿಂದು	36.6	30.9	18.4
ಇಳಿಕೆ	–	5.7	12.5
ಮುಸ್ಲಿಂ	25.9	21.6	18.7
ಇಳಿಕೆ	–	4.3	2.9

5 ವರ್ಷಗಳ ಕೆಳಗಿನ ಮಕ್ಕಳ ಮರಣ ದರ ಮತ್ತು ಇಳಿಕೆ(U5MR)

ವರ್ಷ	1998–99	2005–06	2019–21
ಹಿಂದು	69.6	54.7	31.7
ಇಳಿಕೆ	–	14.9	23
ಮುಸ್ಲಿಂ	57.9	44.8	32.8
ಇಳಿಕೆ	–	13.1 –	12

ಇದು ನಗರ ಪ್ರದೇಶಗಳಲ್ಲಿ. ಗ್ರಾಮಾಂತರದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇಳಿಕೆಯಾಗಿದೆ.

***

ವಾಸ್ತವವಾಗಿ ಜನನ–ದರಕ್ಕೂ ಮತಧರ್ಮಕ್ಕೂ ನೇರ ಸಂಬಂಧವಿಲ್ಲ, ನೇರ ಸಂಬಂಧವಿರುವುದು ಸಂಬಂಧಪಟ್ಟ ಸಮುದಾಯದ ಸಾಮಾಜಿಕ–ಆರ್ಥಿಕ ಸ್ಥಿತಿ–ಗತಿಯೊಂದಿಗೆ ಮಾತ್ರ ಎಂಬುದನ್ನೂ ಈ ಅಂಕಿ–ಅಂಶಗಳು ತೋರಿಸುತ್ತವೆ.

2019–21ರ ಎನ್‌ಎಫ್‌ಹೆಚ್‌ಎಸ್–5ರ ಈ ಅಂಕಿಅಂಶಗಳನ್ನು ನೋಡಿ:

* ಒಟ್ಟು ಹಿಂದು ಕುಟುಂಬಗಳಲ್ಲಿ ಇದು 1.94 ಇದ್ದಾಗ, ಉತ್ತರ ಭಾರತದ ಐದು ರಾಜ್ಯಗಳಲ್ಲಿ ಹಿಂದುಗಳಲ್ಲಿ ಇದು ಈ ಸರಾಸರಿಗಿಂತ ಹೆಚ್ಚಿತ್ತು. ಉದಾ: ಬಿಹಾರದಲ್ಲಿ 2.88 ಮತ್ತು ಉತ್ತರಪ್ರದೇಶದಲ್ಲಿ 2.29.
* ದಕ್ಷಿಣ ಭಾರತದ ಐದೂ ರಾಜ್ಯಗಳಲ್ಲಿ ಮುಸ್ಲಿಮ್ ಸಮುದಾಯಕ್ಕೆ ಸಂಬಂಧಪಟ್ಟಂತೆ, ಈ ದರಗಳು ಇದಕ್ಕಿಂತಲೂ ಕಡಿಮೆಯಿದ್ದವು ಉದಾ: ತಮಿಳುನಾಡಿನಲ್ಲಿ 1.93, ಆಂಧ್ರದಲ್ಲಿ 1.97. ಕರ್ನಾಟಕದಲ್ಲಿ 2.05.

***

ಇನ್ನು, "ನುಸುಳುಕೋರರು' ಎಂಬ ತೆಗಳಿಕೆಯ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಮಾಹಿತಿ ಕೇಳಿದಾಗಲೆಲ್ಲ ಮೋದಿ ಸರಕಾರದ ವಕ್ತಾರರು ಅಂತಹ ಮಾಹಿತಿಯೇನೂ ಸರಕಾರದ ಬಳಿ ಇಲ್ಲ ಎಂದು ಕಳೆದ ಒಂದು ದಶಕದಲ್ಲಿ 16 ಬಾರಿ ಹೇಳಿದ್ದಾರೆ ಎಂದು ಒಂದು ಲೆಕ್ಕ ಹೇಳುತ್ತದೆ ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಶ್ರೀನಿವಾಸನ್ ಜೈನ್,

***

ಸಾಮಾಜಿಕ–ಆರ್ಥಿಕ ಸ್ಥಿತಿ–ಗತಿಯ ಈ ಸಮುದಾಯವಾರು ಅಂಕಿ–ಅಂಶಗಳನ್ನು ನೋಡಿ:

ಶಿಕ್ಷಣದ ಪ್ರಮಾಣ:

ಸಮುದಾಯ	ವರ್ಷ	ಅನಕ್ಷರಸ್ಥರು	12ವರ್ಷಕ್ಕಿಂತ ಹೆಚ್ಚು ಶಾಲೆಗೆ ಹೋದವರು
ಹಿಂದೂ(ಪುರುಷರು)	2005–06	17.1	20.7
	2019–21	12.9	23.8
ಹಿಂದೂ(ಸ್ತ್ರೀಯರು)	2005–06	40.5	12.2
	2019–21	28.5	17.1
ಮುಸ್ಲಿಂ (ಪುರುಷರು)	2005–06	26.3	11.7
	2019–21	17.9	14.6
ಮುಸ್ಲಿಂ (ಸ್ತ್ರೀಯರು)	2005–06	47.9	6.6
	2019–21	29.1	11.4

ಸಂಪತ್ತಿನ ಪ್ರಮಾಣ:

ಸಮುದಾಯವಾರು ಸಂಪತ್ತಿನ ಪ್ರಮಾಣದ ಬಗ್ಗೆ ಹೆಚ್ಚೇನೂ ಅಂಕಿ–ಅಂಶಗಳಿಲ್ಲ. 2020ರಲ್ಲಿ ಪ್ರಕಟವಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ದಲಿತ್ ಸ್ಟಡೀಸ್ ಭಾರತದಲ್ಲಿ ಸಂಪತ್ತಿನ ಒಡೆತನದಲ್ಲಿ ಅಸಮಾನತೆಯ ಕುರಿತು ಪ್ರಕಟಿಸಿದ ವರದಿಯಲ್ಲಿ ಕೆಲವು ಮಾಹಿತಿಗಳನ್ನು ಆಧರಿಸಿದ ಒಂದು ಲೇಖನದಲ್ಲಿ (ಇಂಡಿಯನ್‌ಎಕ್ಸ್‌ಪ್ರೆಸ್, ಎಪ್ರಿಲ್ 24) ಕೊಟ್ಟಿರುವ ಅಂಕಿ–ಅಂಶಗಳು ಹೀಗಿವೆ(ಇವು ನ್ಯಾಷನಲ್ ಸ್ಯಾಂಪಲ್ ಸರ್ವೆ ನಡೆಸಿದ ಅಖಿಲ ಭಾರತ ಸಾಲ ಮತ್ತು ಹೂಡಿಕೆ ಸರ್ವೆಯ ಮಾಹಿತಿಗಳನ್ನು ಆಧರಿಸಿವೆ).

ಈ ಸರ್ವೆಯ ಆಧಾರದಲ್ಲಿ ಒಟ್ಟು ಸಂಪತ್ತಿನ ಸಮುದಾಯವಾರು ಅಂಕಿ–ಅಂಶಗಳು ಹೀಗಿವೆ: (ಶತಕೋಟಿ ರೂ.ಗಳಲ್ಲಿ).

	ಕುಟುಂಬಗಳ %	ಒಟ್ಟು ಸಂಪತ್ತು	ಪಾಲು
ಹಿಂದು ಮೇಲ್ಜಾತಿಗಳು	22.2%	146394	40.9%
ಹಿಂದು ಒಬಿಸಿ	35.8%	110520	30.8%
ಪರಿಶಿಷ್ಟ ಜಾತಿಗಳು	17.9%	26134	7.3%
ಪರಿಶಿಷ್ಟ ಬುಡಕಟ್ಟುಗಳು	9.1%	13268	3.7%
ಮುಸ್ಲಿಮರು	12.1%	28707	8.0%
ಇತರರು	2.9%	33329	9.3%

ಸಮುದಾಯವಾರು ಸಂಪತ್ತಿನ ಹಂಚಿಕೆ:

	ಚಿನ್ನ	ಒಟ್ಟುಸಂಪತ್ತು	ತಲಾಕುಟುಂಬಸಂಪತ್ತು
ಹಿಂದು ಮೇಲ್ಜಾತಿಗಳು	31.3%	40.9%	ರೂ.27.73ಲಕ್ಷ
ಹಿಂದು ಒಬಿಸಿ	39.1%	30.8%	12.96ಲಕ್ಷ
ಪರಿಶಿಷ್ಟ ಜಾತಿ	9.9%	7.3%	6.12ಲಕ್ಷ
ಪ.ಬುಡಕಟ್ಟು	3.4%	3.7%	6.13ಲಕ್ಷ
ಮುಸ್ಲಿಂ	9.2%	8%	9.95ಲಕ್ಷ

ಈ ಸಮುದಾಯಗಳ ಒಳಗೇ ಇನ್ನಷ್ಟು ಅಸಮಾನತೆಗಳು ಇವೆ ಎಂಬುದು ಬೇರೆ ಸಂಗತಿ.

***

2006ರಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಹೇಳಿದ್ದಾದರೂ ಏನು?

"ನಮ್ಮ ಸಾಮೂಹಿಕ ಆದ್ಯತೆಗಳು ಸ್ಪಷ್ಟವಾಗಿವೆ ಎಂದು ನಾನು ನಂಬುತ್ತೇನೆ. ಕೃಷಿ, ನೀರಾವರಿ, ಮತ್ತು ಜಲಸಂಪನ್ಮೂಲಗಳು , ಆರೋಗ್ಯ, ಶಿಕ್ಷಣ ...ಇವುಗಳ ಜೊತೆಗೆ ಪರಿಶಿಷ್ಟ ಜಾತಿ/ಬುಡಕಟ್ಟುಗಳ , ಇತರ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ , ಮಹಿಳೆಯರ ಮತ್ತು ಮಕ್ಕಳ ಉದ್ಧಾರ...ಅಲ್ಪಸಂಖ್ಯಾತರು, ವಿಶೇಷವಾಗಿ ಮುಸ್ಲಿಂ ಅಲ್ಪಸಂಖ್ಯಾತರು ಅಭಿವೃದ್ಧಿಯ ಫಲಗಳಲ್ಲಿ ಸಮಪಾಲನ್ನು ಪಡೆಯಲು ಶಕ್ತರಾಗುವಂತೆ ನವೀನ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಅವರಿಗೆ ಸಂಪನ್ಮೂಲಗಳ ಮೇಲೆ ಮೊದಲ ದಾವೆ ಇರಬೇಕು".

ಅದು ಎಡಪಕ್ಷಗಳ ಬೆಂಬಲಿತ ಯುಪಿಎ–1 ಸರಕಾರ ಬಹಳಷ್ಟು ಚರ್ಚೆಗಳ ನಂತರ ಅಂಗೀಕರಿಸಿದ 'ಸಾಮಾನ್ಯ ಕನಿಷ್ಟ ಕಾರ್ಯಕ್ರಮ' ದ ಆಧಾರದಲ್ಲಿ ಅಡಳಿತ ನಡೆಸುತ್ತಿದ್ದ ಸಮಯ, ಗ್ರಾಮೀಣ ಉದ್ಯೋಗ ಖಾತರಿ, ಅರಣ್ಯ ಹಕ್ಕುಗಳ ಕಾಯ್ದೆ ಮುಂತಾದ ಜನಪರ ಕ್ರಮಗಳು ಜಾರಿಗೆ ಬಂದ ಕಾಲ ಎಂಬುದನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬೇಕು.

***

ಕಾಂಗ್ರೆಸಿನ 2024ರ ಪ್ರಣಾಳಿಕೆ ಜಾತಿ ಜನಗಣತಿಯ ಬಗ್ಗೆ ಹೇಳಿದೆಯಷ್ಟೇ, ಸಂಪತ್ತಿನ ಮರುಹಂಚಿಕೆಯ ಬಗ್ಗೆ ಏನೂ ಹೇಳಿಲ್ಲದಿರುವಾಗ ಪ್ರಧಾನ ಮಂತ್ರಿಗಳ ಹೇಳಿರುವುದೆಲ್ಲ ಚುನಾವಣಾ ಸಂಹಿತೆಯ ಬಹಿರಂಗ ಉಲ್ಲಂಘನೆ ಎಂಬ ಆರೋಪಗಳು ಎಷ್ಟು ಬಲಯುತವಾಗಿವೆಯೆಂದರೆ ಪ್ರಧಾನಿಗಳ ಬಗ್ಗೆ ಮೌನವಾಗಿರುವ ಚುನಾವಣಾ ಆಯೋಗ ಕೂಡ ಈ ಬಗ್ಗೆ ನೋಟೀಸು ಕಳಿಸಿದೆ. ನಿಜ. ಅವರಿಗೆ ನೇರವಾಗಿ ಕಳಿಸುವ ಬದಲು ಆಳುವ ಪಕ್ಷದ ಅಧ್ಯಕ್ಷರಿಗೆ ಕಳಿಸಿದೆ. ಮತ್ತು ಇದಾದ ಮೇಲೂ ಪ್ರಧಾನ ಮಂತ್ರಿಗಳು ಇದನ್ನು ಮುಂದುವರೆಸುತ್ತಲೇ ಇದ್ದಾರೆ. ಭಕ್ತರು ಮತ್ತು 'ಗೋದಿ ಮೀಡಿಯ' ಅವಕ್ಕೆ ಸಮರ್ಥನೆಗಳ ಹುಡುಕಾಟದಲ್ಲಿ ಮಗ್ನವಾಗಿದ್ದಾರೆ!




ದ್ವೇಷ ಕಾರುವುದು......... ಅವರ ಮಾಸ್ಟರ್‌ಪೀಸ್ ಐಟಂ!
ವ್ಯಂಗ್ಯಚಿತ್ರ ಕೃಪೆ: ಪೆನ್ಸಿಲಾಶನ್, ಫೇಸ್‌ಬುಕ್

"ಜಾಗ್ರತೆ! ಕಾಂಗ್ರೆಸ್ ನಿಮ್ಮ ಮಂಗಳಸೂತ್ರವನ್ನು ಕಿತ್ತುಕೊಳ್ಳುತ್ತದೆ!" "ಅದು ಸಾಧ್ಯವಿಲ್ಲ, ಸಾರ್! ಅದನ್ನು ಆಗಲೇ ಕಳಕೊಂಡಿದ್ದೇವೆ..."



..ನೋಟುರದ್ಧತಿಯಲ್ಲಿ.....ಲಾಕ್‌ಡೌನಿನಲ್ಲಿ.. ಉದ್ಯೋಗ ನಷ್ಟದಲ್ಲಿ..ರೈತರ ಹೋರಾಟದಲ್ಲಿ..

ಈ ನಡುವೆ 'ನಿರ್ವಾಚನಾ ಸದನ'ದಲ್ಲಿ..



ನನ್ನ ಕೆಲಸ ಕಳೆದುಕೊಳ್ಳುಷ್ಟು ದಡ್ಡನಲ್ಲ!
ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಜಿಡಿಪಿ ಬೆಳವಣಿಗೆ ದರದ ವ್ಯಾಮೋಹ

ನವ-ಉದಾರವಾದದ ಅಡಿಯಲ್ಲಿ ಜಿಡಿಪಿಯು ಉನ್ನತ ದರದಲ್ಲಿ ಬೆಳೆಯುತ್ತಿದ್ದರೂ ಸಹ ಉದ್ಯೋಗ ಬೆಳವಣಿಗೆಯ ದರವು ಅತಿ ಕೆಳಗಿನ ಮಟ್ಟದಲ್ಲೇ ಉಳಿದಿದೆ. ಸರ್ಕಾರವು ಹೊಂದಿರುವ ಜಿಡಿಪಿ ಬೆಳವಣಿಗೆ ದರದ ವ್ಯಾಮೋಹವು ಬಡತನದ ಹೆಚ್ಚಳವನ್ನು ತಡೆಯುವಲ್ಲಿ ಯಶಸ್ವಿಯಾಗುವುದಿಲ್ಲ ಅಥವಾ ಸ್ವತಃ ಜಿಡಿಪಿ ಬೆಳವಣಿಗೆ ದರ ಇಳಿಕೆಯನ್ನು ತಡೆಯುವಲ್ಲಿಯೂ ಯಶಸ್ವಿಯಾಗುವುದಿಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು:ಕೆ.ಎಂ.ನಾಗರಾಜ್

ಆಧುನಿಕ ಕಾಲದ ಅಗ್ರಗಣ್ಯ ಉದಾರವಾದಿ ಚಿಂತಕ ಜಾನ್ ಸ್ಟುವರ್ಟ್ ಮಿಲ್ (1806–1873), ಅರ್ಥಶಾಸ್ತ್ರ ಮತ್ತು ತತ್ವಶಾಸ್ತ್ರದ ಬಗ್ಗೆ ವ್ಯಾಪಕವಾಗಿ ಬರೆದಿದ್ದಾರೆ. ತಮ್ಮ ಪತ್ನಿ ಹ್ಯಾರಿಯೆಟ್ ಟೇಲರ್ ಮಿಲ್ ಅವರ ಪ್ರಭಾವದಿಂದ ತಮ್ಮ ಕೊನೆಗಾಲದಲ್ಲಿ ಸಮಾಜವಾದದತ್ತ ಆಕರ್ಷಿತರಾಗಿದ್ದ ಮತ್ತು ಒಂದು ರೀತಿಯ ಸಹಕಾರಿ ಸಮಾಜವಾದದ ಬಗ್ಗೆ ಒಲವು ಹೊಂದಿದ್ದ ಮಿಲ್ ಅವರನ್ನು ಪ್ರಧಾನವಾಗಿ ಒಬ್ಬ ಸರ್ವ ಶ್ರೇಷ್ಠ ಉದಾರವಾದಿ ಚಿಂತಕ ಎಂದೇ ಪರಿಗಣಿಸಲಾಗಿದೆ. ಬಂಡವಾಳಶಾಹಿಯ ಆರ್ಥಿಕ ಬೆಳವಣಿಗೆಯ ದರ ಶೂನ್ಯ ಮಟ್ಟಕ್ಕೆ ಇಳಿಯಲಿದ್ದು, ಇನ್ನು ಮುಂದೆ ಬಂಡವಾಳ ಶೇಖರಣೆಗೆ ಅವಕಾಶವಿಲ್ಲದ ಕೇವಲ ಒಂದು ಪುನರುತ್ಪಾದನೆಯ ಸ್ಥಿತಿಯನ್ನು ಅಥವಾ ಒಂದು ಸ್ಥಾಯಿ ಸ್ಥಿತಿಯನ್ನು ತಲುಪುವ ಕಾಲ ಸನ್ನಿಹಿತವಾಗಲಿದೆ ಎಂಬ ಭಯ ಮಿಲ್ ಅವರ ಕಾಲದ ಅರ್ಥಶಾಸ್ತ್ರಜ್ಞರನ್ನು ಕಾಡುತ್ತಿತ್ತು. ಈ ತಳಮಳವನ್ನು ಸಮಚಿತ್ತದಿಂದ ನೋಡಿದ ಮಿಲ್, ಬರಿಯ ಉತ್ಪಾದನೆಯನ್ನು ಹೆಚ್ಚಿಸಲು ಸಾಮಾನ್ಯವಾಗಿ ಅಗತ್ಯಕ್ಕಿಂತ ಹೆಚ್ಚಿನ ಮಹತ್ವವನ್ನು ಕೊಡುವುದುಕ್ಕಿಂತ "ವಿತರಣೆಯನ್ನು ಉತ್ತಮಗೊಳಿಸಲು ಮತ್ತು ಕಾರ್ಮಿಕರಿಗೆ ಕೊಡುವ ಸಂಭಾವನೆಯನ್ನು ಹೆಚ್ಚಿಸಲು ಗಮನ ಕೊಡುವುದೇ ನಿಜವಾಗಿಯು ಅಪೇಕ್ಷಣೀಯ" ಎಂದು ಭಾವಿಸಿದ್ದರು.

ಹತ್ತೊಂಬತ್ತನೇ ಶತಮಾನದ ಈ ಉದಾರವಾದಿ ಚಿಂತಕ ಹೊಂದಿದ್ದ ಅಭಿಪ್ರಾಯವನ್ನು ಅಂತಾರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು ಮತ್ತು ಭಾರತದ ಸರ್ಕಾರವೂ ಸೇರಿದಂತೆ ರಾಷ್ಟ್ರಿಯ ಸರ್ಕಾರಗಳೊಂದಿಗೆ ಹೋಲಿಸಿ ನೋಡೋಣ. ಜಿಡಿಪಿಯ ಬೆಳವಣಿಗೆಯೊಂದಿಗೇ ಬಡತನವೂ ಅಗಾಧವಾಗಿ ಬೆಳೆಯುತ್ತಿರುವ ಸನ್ನಿವೇಶದಲ್ಲಿ, ಭಾರತ ಸರ್ಕಾರವೂ ಸೇರಿದಂತೆ ಈ ಅಂತಾರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು ಜಿಡಿಪಿ ಬೆಳವಣಿಗೆಯನ್ನು ಮಾತ್ರವೇ ಒತ್ತಿಹೇಳುತ್ತವೆ. ವಿತರಣೆಯನ್ನು ಉತ್ತಮಗೊಳಿಸುವ ಮತ್ತು ಕಾರ್ಮಿಕರಿಗೆ ಕೊಡುವ ಸಂಭಾವನೆಯನ್ನು ಹೆಚ್ಚಿಸುವುದು ಅಪೇಕ್ಷಣೀಯವಾಗಿದ್ದರೂ ಸಹ, ಜಿಡಿಪಿಯ ಬೆಳವಣಿಗೆಗೆ ಮಾತ್ರವೇ ಮಹತ್ವ ನೀಡುತ್ತವೆ.

ನಮ್ಮಂತಹ ದೇಶಗಳಲ್ಲಿ ನಿರುದ್ಯೋಗವನ್ನು ಮತ್ತು ಬಡತನವನ್ನು ನಿವಾರಿಸಲು ಜಿಡಿಪಿಯು ಉನ್ನತ ದರದಲ್ಲಿ ಬೆಳೆಯುವುದು ಅಗತ್ಯವೆಂದು ಪರಿಗಣಿಸಲ್ಪಟ್ಟ ಕಾಲವೊಂದಿತ್ತು. ಆಗ, "ಉತ್ಪಾದನೆಯ ಹೆಚ್ಚಳ" ಮತ್ತು "ಕಾರ್ಮಿಕರ ಸಂಬಳ ಹೆಚ್ಚಳ" ಇವುಗಳ ನಡುವೆ ಇರುವ ತಿಕ್ಕಾಟವನ್ನು ಗ್ರಹಿಸುವ ಮಾತಿರಲಿ, ಅವುಗಳನ್ನು ವಿಂಗಡಿಸಿ ನೋಡುವ ಪರಿಸ್ಥಿತಿಯೇ ಇರಲಿಲ್ಲ. ಜಿಡಿಪಿಯ ಉನ್ನತ ಬೆಳವಣಿಗೆಯು, ಉದ್ಯೋಗ ಬೆಳವಣಿಗೆಯ ದರವನ್ನು ಹೆಚ್ಚಿಸುತ್ತದೆ, ಇದು ಶ್ರಮ ಮೀಸಲು ಪಡೆಯ ಗಾತ್ರವನ್ನು ಸಾಪೇಕ್ಷವಾಗಿ ಕಡಿಮೆ ಮಾಡುತ್ತದೆ, ಶ್ರಮ ಮಾರುಕಟ್ಟೆಯಲ್ಲಿ ಬಿಗಿತವನ್ನು ಸೃಷ್ಟಿಸುತ್ತದೆ ಮತ್ತು ನಿಜ ವೇತನದ ದರವನ್ನು ಹೆಚ್ಚಿಸುತ್ತದೆ ಎಂದು ವಾದಿಸಲಾಯಿತು. ಅಂತಹ ಒಂದು ಪರಿಸ್ಥಿತಿಯಲ್ಲಿ ನಿಜ ಕೂಲಿಯ ದರವು ಶ್ರಮದ ಉತ್ಪಾದಕತೆಯಷ್ಟು ವೇಗವಾಗಿ ಏರದಿದ್ದರೂ ಸಹ, ಶ್ರಮದ ಉತ್ಪಾದಕತೆಯ ಹೋಲಿಕೆ ಇಲ್ಲದಿದ್ದರೆ ಆಗುವುದಕ್ಕಿಂತ ಹೆಚ್ಚು ವೇಗವಾಗಿ ಆಗುತ್ತದೆ; ಹೇಗೆಯೇ ಆದರೂ ಜಿಡಿಪಿಯ ವೇಗದ ಬೆಳವಣಿಗೆಯು ನಿರುದ್ಯೋಗವನ್ನು ಇಳಿಕೆ ಮಾಡುವ ಮತ್ತು ಕೆಲಸಗಾರರ ಪರಿಸ್ಥಿತಿಯನ್ನು ನಿರುದ್ಯೋಗ ಇಳಿಕೆಯಾಗದಿದ್ದರೆ ಏನಾಗುತ್ತಿತ್ತೊ ಅದಕ್ಕೆ ಹೋಲಿಸಿದರೆ ನಿಜ ವೇತನವನ್ನು ಹೆಚ್ಚಿಸುವ ಈ ಎರಡೂ ಅಂಶಗಳ ಮೂಲಕ ಉತ್ತಮಗೊಳಿಸುತ್ತದೆ ಎಂದು ವಾದಿಸಲಾಯಿತು.

ಜಿಡಿಪಿ ಬೆಳವಣಿಗೆ ಮತ್ತು ಉದ್ಯೋಗದ ಬೆಳವಣಿಗೆ

ಈ ವಾದದಲ್ಲಿ ಹುರುಳಿಲ್ಲ. ಒಂದು ನಿರ್ದಿಷ್ಟ ದರದಲ್ಲಿ ಬೆಳೆಯುವ ಜಿಡಿಪಿಯೊಂದಿಗೆ ಉಂಟಾಗುವ ಉದ್ಯೋಗದ ಬೆಳವಣಿಗೆಯು ಒಂದು ಅರ್ಥವ್ಯವಸ್ಥೆಯು ಹೊಂದಿರುವ ಬೆಳವಣಿಗೆ–ಪ್ರಕ್ರಿಯೆಯ ಸ್ವರೂಪ ಮತ್ತು ಅದು ಯಾವ ಯಾವ ಸರಕುಗಳನ್ನು ಮತ್ತು ಯಾವ ಯಾವ ವಲಯಗಳನ್ನು ಒಳಗೊಳ್ಳುತ್ತದೆ ಅಥವಾ ಯಾವ ವರ್ಗದ ಬೇಡಿಕೆಗಳಿಗೆ ಸ್ಪಂದಿಸುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಜಿಡಿಪಿಯ ಬೆಳವಣಿಗೆಯಲ್ಲಿ ಕೃಷಿ ಮತ್ತು ಕಿರು ಉತ್ಪಾದನಾ ವಲಯಗಳ ಕೊಡುಗೆಯು ಒಂದು ವೇಳೆ ದೊಡ್ಡ ಪ್ರಮಾಣದಲ್ಲಿದ್ದರೆ, ಅದರ ಪರಿಣಾಮಗಳು ಉದ್ಯೋಗ ಸೃಷ್ಟಿಯಲ್ಲಿ ಸಾಕಷ್ಟು ಗಣನೀಯವಾಗಿರುತ್ತವೆ. ಆದರೆ ಒಂದು ನವ–ಉದಾರವಾದಿ ಅರ್ಥವ್ಯವಸ್ಥೆಯ ಕೃಷಿ ಮತ್ತು ಕಿರು ಉತ್ಪಾದನಾ ವಲಯಗಳು ಅನೇಕ ವರ್ಷಗಳಿಂದಲೂ ಬಿಕ್ಕಟ್ಟಿನಿಂದ ಪೀಡಿತವಾಗಿರುವ ಸನ್ನಿವೇಶದಲ್ಲಿ, ಬೆಳವಣಿಗೆಯು ವಿಶಿಷ್ಟವಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸುವ ವಲಯದಲ್ಲಿರುತ್ತದೆ ಮತ್ತು ದೇಶದಲ್ಲಿ ಆರ್ಥಿಕ ಮಿಗುತಾಯದ ಮೇಲೆ ಜೀವಿಸುವವರ ಬಳಕೆ ಬೇಡಿಕೆಗಳನ್ನು ಪೂರೈಸುವ ವಲಯದಲ್ಲಿರುತ್ತದೆ. ವಿಷಯವೆಂದರೆ, ನಿಖರವಾಗಿ ಈ ವಲಯಗಳಲ್ಲಿ ಉದ್ಯೋಗಗಳ ಪ್ರಮಾಣ ಅತಿ ಕಡಿಮೆ ಮಾತ್ರವಲ್ಲ, ಇಲ್ಲಿ ನಿರಂತರವಾಗಿ ಸಾಗುವ ಉತ್ಪಾದನಾ ಪ್ರಕ್ರಿಯೆಯ ಬದಲಾವಣೆ ಮತ್ತು ಉತ್ಪನ್ನ–ನಾವೀನ್ಯತೆಗಳ ಮೂಲಕ ಉದ್ಯೋಗಗಳು ನಿರಂತರವಾಗಿ ಕಡಿಮೆಯಾಗುತ್ತಲೇ ಹೋಗುತ್ತವೆ. ಹಾಗಾಗಿ, ಒಂದು ನವ–ಉದಾರವಾದಿ ಆಳ್ವಿಕೆಯಲ್ಲಿ ಜಿಡಿಪಿಯು ಉನ್ನತ ದರದಲ್ಲಿ ಬೆಳೆದರೂ ಸಹ, ಉದ್ಯೋಗ ಬೆಳವಣಿಗೆಯು ಅತಿ ಕಡಿಮೆ ಇರುತ್ತದೆ. ಅಥವಾ, ಉತ್ಪತ್ತಿಗೆ ಸಂಬಂಧಿಸಿದಂತೆ ಕಂಡುಬಂದ ಉದ್ಯೋಗದ ಸ್ಥಿತಿಸ್ಥಾಪಕತ್ವ ಎಂದು ಕರೆಯಲ್ಪಡುತ್ತದೆ. ಅಂದರೆ, ಉತ್ಪತ್ತಿಯ ಶೇ. ಒಂದರಷ್ಟು ಬದಲಾವಣೆಯೊಂದಿಗೆ ಉದ್ಯೋಗದ ಶೇಕಡಾವಾರು ಬದಲಾವಣೆಯು ಶೂನ್ಯಕ್ಕೆ ಹತ್ತಿರದಲ್ಲಿರುತ್ತದೆ (ಇದನ್ನು ಸಾಮಾನ್ಯವಾಗಿ "ಉದ್ಯೋಗ ರಹಿತ ಬೆಳವಣಿಗೆ" ಎಂದು ಕರೆಯಲಾಗುತ್ತದೆ). ಅಷ್ಟೇ ಅಲ್ಲದೆ, ಉತ್ಪತ್ತಿಯ ಬೆಳವಣಿಗೆ ದರವನ್ನು ಹೆಚ್ಚಿಸಿದಂತೆ, ಕಂಡುಬರುವ ಉದ್ಯೋಗದ ಸ್ಥಿತಿಸ್ಥಾಪಕತ್ವವು ಕ್ಷೀಣಿಸುತ್ತಾ ಹೋಗುತ್ತದೆ. ಹಾಗಾಗಿ, ಜಿಡಿಪಿಯ ಉನ್ನತ ಬೆಳವಣಿಗೆಯು ಹೆಚ್ಚೆಂದರೆ, ಉದ್ಯೋಗದ ಬೆಳವಣಿಗೆಯ ದರದಲ್ಲಿ ಅತ್ಯಲ್ಪ ಹೆಚ್ಚಳವನ್ನು ತರುತ್ತದೆ.

ಜನಸಂಖ್ಯೆಯು ಹೆಚ್ಚುತ್ತಾ ಹೋಗುವ ಸನ್ನಿವೇಶದಲ್ಲಿ ಶ್ರಮಜೀವಿಗಳ ಸಂಖ್ಯೆಯೂ ಹೆಚ್ಚುತ್ತದೆ. ಆದರೆ, ನವ–ಉದಾರವಾದದ ಅಡಿಯಲ್ಲಿ ಜಿಡಿಪಿಯು ಉನ್ನತ ದರದಲ್ಲಿ ಬೆಳೆಯುತ್ತಿದ್ದರೂ ಸಹ ಉದ್ಯೋಗ ಬೆಳವಣಿಗೆಯ ದರವು ಅತಿ ಕೆಳಗಿನ ಮಟ್ಟದಲ್ಲೇ ಉಳಿದಿದೆ. ಅದು ಶ್ರಮಿಕ–ಪಡೆಯ ಬೆಳವಣಿಗೆಯ ದರಕ್ಕಿಂತಲೂ ಎಷ್ಟು ಕೆಳಗಿದೆ ಎಂದರೆ, ಶ್ರಮ ಮೀಸಲು ಪಡೆಯ ಸಾಪೇಕ್ಷ ಗಾತ್ರವು ಇಳಿಕೆಯಾಗುವುದೇ ಇಲ್ಲ; ಬದಲಿಗೆ ಉಬ್ಬುತ್ತಲೇ ಹೋಗುತ್ತದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ಕೂಲಿಯ ದರವು ಏನೇನೂ ಅಲ್ಲ ಅನ್ನುವಷ್ಟು ನಿಕೃಷ್ಟವಾಗಿ ಹೆಚ್ಚುತ್ತದೆ ಮತ್ತು ಉದ್ಯೋಗ ಲಭಿಸುವ ಅವಕಾಶವು ತಲಾ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ. ಈ ವಿದ್ಯಮಾನ ದುಡಿಯುವ ಜನರಿಗೆ ದುರವಸ್ಥೆಯನ್ನು ಉಂಟುಮಾಡುವಲ್ಲಿ ಪರಿಣಮಿಸುತ್ತದೆ.

ಭಾರತದ ಅರ್ಥವ್ಯವಸ್ಥೆಯಲ್ಲಿ ನಿಖರವಾಗಿ ಈ ವಿದ್ಯಮಾನವೇ ಜರುಗುತ್ತಿದೆ. ನವ–ಉದಾರವಾದಿ ಯುಗದಲ್ಲಿ ಮತ್ತು ಅದರಲ್ಲೂ ವಿಶೇಷವಾಗಿ ಮೋದಿ ಯುಗದಲ್ಲಿ ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಗಳಲ್ಲಿ ಭಾರತವೂ ಒಂದು ಎಂದು ಹೇಳಲಾದ ಸಂದರ್ಭದಲ್ಲಿ, ಭಾರತದಲ್ಲಿ ಸಂಪೂರ್ಣ ಬಡತನದಲ್ಲಿ ಬದುಕುತ್ತಿರುವ ಜನರ ಸಂಖ್ಯೆಯೂ ಹೆಚ್ಚುತ್ತಲೇ ಇದೆ. ಹಾಗಾಗಿ, ಎರಡು ಪ್ರಶ್ನೆಗಳು ಈ ಸಂದರ್ಭದಲ್ಲಿ ಉದ್ಭವಿಸುತ್ತವೆ: ಮೊದಲನೆಯದು, ಒಬ್ಬ ಉದಾರವಾದಿ ಚಿಂತಕನಾಗಿದ್ದ ಜೆಎಸ್ ಮಿಲ್ ಕೂಡ ಯಾವುದನ್ನು ಒಂದು "ನಿಜವಾಗಿಯೂ ಅಪೇಕ್ಷಣೀಯ" ಎಂದು ಪರಿಗಣಿಸಿದ್ದರೋ ಅದರತ್ತ ಗಮನ ಹರಿಸುವ ಬದಲು, ಸರ್ಕಾರಗಳು ಹಾಡಿದ ಅದೇ ಜಿಡಿಪಿ ಬೆಳವಣಿಗೆಯ ದರದ ಹಾಡನ್ನೇ ಏಕೆ ಹಾಡುತ್ತವೆ? ಎರಡನೆಯದು, ವರಮಾನದ ಅಸಮತೆ ಮಾತ್ರವಲ್ಲದೆ ಹೆಚ್ಚುತ್ತಿರುವ ಬಡತನವು, ಅಂದರೆ, ಸರಕು ಸೇವೆಗಳ ಅನುಭೋಗ ಕುಸಿದ ಕಾರಣದಿಂದಾಗಿ ಪರಿಣಮಿಸಿದ ಬೇಡಿಕೆಯ ಕುಸಿತ ಮತ್ತು ಈ ವಿದ್ಯಮಾನವು ಬೆಳವಣಿಯನ್ನು ಉಸಿರುಗಟ್ಟಿಸುತ್ತಿರುವ ಸಂರ್ಭದಲ್ಲಿ, ಜಿಡಿಪಿ ಬೆಳವಣಿಗೆಯ ಉನ್ನತ ದರಗಳನ್ನು ನಾವು ವಿವರಿಸುವುದಾದರೂ ಹೇಗೆ?





ನವ–ಉದಾರವಾದಿ ಬಂಡವಾಳಶಾಹಿಯ ನಿಜ ಸಿದ್ಧಾಂತ

ಮೊದಲನೆಯ ಪ್ರಶ್ನೆಗೆ ಕೊಡಬಹದಾದ ಒಂದು ಸರಳ ಉತ್ತರವೆಂದರೆ, ನವ–ಉದಾರವಾದವು ಜೆ.ಎಸ್.ಮಿಲ್ ಮಾದರಿಯ ಅಪೇಕ್ಷಣೀಯ ಎಂಬುದನ್ನು ಒಪ್ಪುವುದಿಲ್ಲ ಎಂಬುದು. ದೇಶ ದೇಶಗಳ ಗಡಿಗಳಾದ್ಯಂತ ಹಣಕಾಸು ಬಂಡವಾಳವೂ ಸೇರಿದಂತೆ ಬಂಡವಾಳ ಹಾಗೂ ಸರಕು ಮತ್ತು ಸೇವೆಗಳ ಅನಿಯಂತ್ರಿತ ಚಲನೆಯೇ ನವ–ಉದಾರವಾದದ ಮುಖ್ಯ ಲಕ್ಷಣ. ಮತ್ತು ಪ್ರಭುತ್ವದ ಪಾತ್ರ "ಕಾರ್ಮಿಕರಿಗೆ ಹೆಚ್ಚು ಸಂಭಾವನೆ" ನೀಡುವ ಬದಲು ಬಂಡವಾಳದ ಹಿತಾಸಕ್ತಿಗಳನ್ನು ಕಾಪಾಡುವ ಪೋಷಕ ಪಾತ್ರದ ಮಟ್ಟಕ್ಕೆ ಇಳಿಸಲ್ಪಟ್ಟಿದೆ. ಮಿಲ್ ಸೂಚಿಸಿದ ರೀತಿಯ ಅಪೇಕ್ಷೆಯನ್ನು ಹೊಂದುವ ಕ್ರಮವು ಕಾರ್ಮಿಕರ ಪರವಾಗಿ ಪ್ರಭುತ್ವವು ಮಧ್ಯಪ್ರವೇಶಿಸುವುದರ ಸಮರ್ಥನೆಯಾಗುವುದರಿಂದ ನವ–ಉದಾರವಾದವು ಅದನ್ನು ಸಹಿಸದು. ಆದ್ದರಿಂದ, ಅದು, ಬಂಡವಾಳಕ್ಕೆ ಸ್ವಾತಂತ್ರ್ಯವನ್ನು ನೀಡುವ ಮೂಲಕ (ಅಂದರೆ, ಬಂಡವಾಳದ ಹಿತಾಸಕ್ತಿಗಳಿಗೆ ಪ್ರಭುತ್ವವು ಉತ್ತೇಜನ ನೀಡುವ ಮೂಲಕ) ಬೆಳವಣಿಗೆ ಸಂಭವಿಸುತ್ತದೆ ಎಂಬುದಾಗಿ ಮತ್ತು ಜಿಡಿಪಿಯ ಉನ್ನತ ಬೆಳವಣಿಗೆಯನ್ನು ಸಾಧಿಸುವ ಮೂಲಕ ಎಲ್ಲ ಅಪೇಕ್ಷೆಗಳೂ ಅಪ್ರಯತ್ನವಾಗಿ ಕೈಗೂಡುತ್ತವೆ ಎಂಬುದಾಗಿಯೂ ನಟನೆ ಮಾಡಬೇಕಾಗುತ್ತದೆ. ಇದು ನಿಜವೇ ಎಂಬುದು ಮುಖ್ಯ ವಿಷಯವಲ್ಲ (ಅಲ್ಲ ಎಂಬುದು ಸ್ಪಷ್ಟವಾಗಿದೆ); ವಿಷಯವೆಂದರೆ, ಇದುವೇ ನವ–ಉದಾರವಾದಿ ಬಂಡವಾಳಶಾಹಿಯ ನಿಜ ಸಿದ್ಧಾಂತ. ಮತ್ತು, ಭಾರತದಂತಹ ಸರ್ಕಾರಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕ್‌ನಂತಹ ಸಂಸ್ಥೆಗಳು ಪ್ರತಪಾದಿಸುವುದು ಈ ಸಿದ್ಧಾಂತವನ್ನೇ.

ಎರಡನೆಯ ಪ್ರಶ್ನೆಗೆ ಉತ್ತರವೆಂದರೆ, ವರಮಾನಗಳ ಅಸಮತೆ ಮತ್ತು ಬಡತನದ ಹೆಚ್ಚಳ ಇವು ಜಿಡಿಪಿಯ ಬೆಳವಣಿಗೆ ದರದ ಮೇಲೆ ತಮ್ಮ ಪ್ರಬಾವವನ್ನು ನಿಜಕ್ಕೂ ಬೀರಿವೆ. ಅರ್ಥವ್ಯವಸ್ಥೆಯ ತಾನು ಸೃಷ್ಟಿಸಿದ ಮತ್ತು ವೇಗವಾಗಿ ಬೆಳೆಯುತ್ತಿರುವ ವರಮಾನಗಳ ಅಸಮತೆಯ ಕಾರಣದಿಂದಾಗಿ, ನವ–ಉದಾರವಾದವು ದಾರಿ ಕಾಣದ ಒಂದು ಹಂತವನ್ನು ತಲುಪಿರುವ ಸಂದರ್ಭದಲ್ಲಿ, ವಿಶ್ವ ಮಟ್ಟದಲ್ಲಿ ಇದು ನಿಜವಾಗಿದೆ. ಮಾತ್ರವಲ್ಲ, ಭಾರತದ ಅರ್ಥವ್ಯವಸ್ಥೆಯ ಮಟ್ಟಿಗೂ ನಿಜ. ಇದು ಒಟ್ಟಾರೆ ಬೇಡಿಕೆಯ ಬೆಳವಣಿಗೆಯ ಉಸಿರುಗಟ್ಟಿಸಿದೆ ಮತ್ತು ಅತಿ–ಉತ್ಪಾದನೆಯ ಒಂದು ಪ್ರವೃತ್ತಿಯನ್ನು ಹುಟ್ಟುಹಾಕಿದೆ.

ಪುಟ 14 ಕ್ಕೆ

ಏನಿದು 'ಸನಾತನ ಧರ್ಮ'......... ಪುಟ 4 ರಿಂದ

ಹುಟ್ಟು ಹಾಕುತ್ತಾರೆ.

ಅದೇ ಸಮಯದಲ್ಲಿ ಸಮಾಜ ಎಷ್ಟೇ ಬದಲಾದರೂ ಕೆಲವು ಆದರ್ಶಗಳು ಮತ್ತು ಸಂಪ್ರದಾಯಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುವುದಿಲ್ಲ. "ಓಂ ಸಹನಾವವತು ಸಹನೌಭುನಕ್ತು, ಸಹವೀರ್ಯಂ ಕರವಾವಹೈ.." ಎಂಬ ಅತ್ಯಂತ ಪುರಾತನವಾದ ಶಾಂತಿ ಮಂತ್ರವು, ನಾವೆಲ್ಲರೂ ಒಟ್ಟಿಗೆ ಬಾಳೋಣ, ಒಟ್ಟಿಗೆ ಕಲಿಯೋಣ, ಒಟ್ಟಿಗೆ ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳೋಣ, ನಮ್ಮ ನಡುವೆ ವೈರತ್ವ ಬೇಡ ಎಂಬುದನ್ನು ಸೂಚಿಸುತ್ತದೆ. ಇವು ಸಾಂಪ್ರದಾಯಿಕ ಭಾವನೆಗಳು. ಆದರೆ ಉದಾತ್ತ ಭಾವನೆಗಳು.

ಭೂತಕಾಲದ ಭಾವನೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳಲ್ಲಿ ಮುಂದುವರಿಯಲು ನಮಗೆ ಸಹಾಯ ಮಾಡುವ ವಿಷಯಗಳನ್ನು ಮುಂದುವರಿಸುವಾಗ, ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ನಾವು ಹೊಸ ಭಾವನೆಗಳು ಮತ್ತು ಹೊಸ ಸಂಪ್ರದಾಯಗಳನ್ನು ಸ್ವಾಗತಿಸಬೇಕು.

ಆದಿಕಾಲದಲ್ಲಿ ಧರ್ಮ ಎಂಬುದೇ ಇರಲಿಲ್ಲ

ಇಲ್ಲಿಯವರೆಗೆ ನಾವು ಸನಾತನ ಭಾವನೆಗಳ ಕುರಿತು ಚರ್ಚಿಸಿದ್ದೇವೆ. ಈಗ ಸನಾತನ 'ಧರ್ಮ'ದ ಕುರಿತು ಚರ್ಚಿಸಬೇಕಿದೆ. ಹಿಂದುತ್ವವಾದಿಗಳ ಹೋರಾಟವೆಲ್ಲಾ ಆ ಸನಾತನ ಧರ್ಮದ ಬಗ್ಗೆಯೇ. ಧರ್ಮ ಎಂದರೆ ಆ ಕಾಲದಲ್ಲಿ ಸಮಾಜದಲ್ಲಿ ಪ್ರಭುತ್ವ ಸಾಧಿಸಿದವರು ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಮಾಡಿದ ನಿಯಮಗಳು. ಆದಿಕಾಲದಲ್ಲಿ ದೊರೆಗಳು ಮತ್ತು ಆಳುವವರು ಇರಲಿಲ್ಲವಾದ್ದರಿಂದ ಧರ್ಮ ಎಂಬುದೇ ಇರಲಿಲ್ಲ. ಕೆಲವು ನಂಬಿಕೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು ಮಾತ್ರ ರೂಪುಗೊಂಡಿದ್ದವು. ಸಮಾಜವನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ ಪ್ರಬಲ ಗುಂಪುಗಳು ರೂಪುಗೊಂಡ ನಂತರ ಧರ್ಮದ ಪ್ರಸ್ತಾಪವು ಮುಂದೆ ಬಂದಿತು.

ಜಾತಿ ವ್ಯವಸ್ಥೆಯ ರಚನೆ

ನಮ್ಮ ದೇಶದಲ್ಲಿ ಸಮಾಜವನ್ನು ಜಾತಿಗಳಾಗಿ ವಿಭಜಿಸುವುದು ಮತ್ತು ಜಾತಿ ವ್ಯವಸ್ಥೆಯ ರಚನೆ ಇವೆರಡೂ ಬಹುತೇಕ ಏಕಕಾಲದಲ್ಲಿ ಸಂಭವಿಸಿದೆ. ಬ್ರಾಹ್ಮಣ ಮತ್ತು ಕ್ಷತ್ರಿಯ ಜಾತಿಗಳು ಪ್ರಬಲ ವರ್ಗವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದಾಗ, ಜಾತಿ ವ್ಯವಸ್ಥೆಯು ಅವರ ಪ್ರಾಬಲ್ಯ ಮತ್ತು ಶೋಷಣೆಯೊಂದಿಗೆ ವಿಸ್ತರಿಸಿತು. ಕೆಳವರ್ಗದವರ ಮೇಲಿನ ದಬ್ಬಾಳಿಕೆಯನ್ನೂ ಹೆಚ್ಚಿಸಿತು. ಸ್ಮೃತಿಗಳು ಅಥವಾ ಧರ್ಮ ಶಾಸ್ತ್ರಗಳು ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ರಚಿಸಲ್ಪಟ್ಟವು. ಅದರಲ್ಲಿ ಹೇಳಿರುವ ಎಲ್ಲವನ್ನು ಇಡೀ ಸಮಾಜ ಒಪ್ಪುವುದಿಲ್ಲ. ಕೆಲವೇ ಕೆಲವು ಪ್ರಬಲ ಜಾತಿಗಳು ತಮ್ಮ ಸಂಪತ್ತಿನ ಮುಂದುವರಿಕೆಗಾಗಿ ಅವುಗಳನ್ನು ವಿನ್ಯಾಸಗೊಳಿಸಿದವು. ಮನು ಸ್ಮೃತಿ, ನಾರದ ಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ ಇತ್ಯಾದಿ. ಇವೆಲ್ಲವನ್ನೂ ಬ್ರಾಹ್ಮಣರು ಅಂದಿನ ಅರಸರಿಗಾಗಿ ಬರೆದುಕೊಟ್ಟಿದ್ದಾರೆ. ಆದರೆ ಅವು ಜಾರಿಯಾಗಬೇಕಾದರೆ ಜನರ ಮೇಲೆ ಹೇರಬೇಕು. ಅದಕ್ಕೇ ಅಲ್ಲೊಂದು ಇಲ್ಲೊಂದು ಒಳ್ಳೆಯ ಮಾತುಗಳ ನೆಪದಲ್ಲಿ ಲೂಟಿಕೋರ ವರ್ಗದ ಸದ್ಗುಣಗಳನ್ನು ಪ್ರಚಾರ ಮಾಡಿದರು. ಅದಕ್ಕಾಗಿ ಪುರಾಣಗಳನ್ನು ಬರೆಯಲಾಗಿದೆ.

ಪ್ರತಿಯೊಬ್ಬ ರಾಜ ಅಧಿಕಾರ ಹಿಡಿದಾಗ ಧರ್ಮವನ್ನು ರಕ್ಷಿಸುತ್ತೇನೆ ಎಂದು ಪ್ರಮಾಣ ಮಾಡಬೇಕು (ಈಗ ಹುದ್ದೆ ಬೇಕಾದರೆ ಚುನಾವಣೆಯಲ್ಲಿ ಗೆದ್ದು ಸಂವಿಧಾನವನ್ನು ಪಾಲಿಸುತ್ತೇನೆ ಎಂದು ಪ್ರಮಾಣ ಮಾಡುತ್ತಾರೆ). ಧರ್ಮವನ್ನು ಎತ್ತಿಹಿಡಿಯಲು ವಿಫಲರಾದ ರಾಜನನ್ನು ತೆಗೆದುಹಾಕುವ ಅಧಿಕಾರ ಧರ್ಮಗುರುಗಳಿಗೆ ಇತ್ತು.

ಮನುಸ್ಮೃತಿ ಸಮಾಜದ ಅರ್ಧದಷ್ಟು ಮಹಿಳೆಯರನ್ನು ಮತ್ತು ಬಹುಸಂಖ್ಯಾತರಾದ ಶೂದ್ರ, ಅತಿಶೂದ್ರ, ದಲಿತ ಜಾತಿಗಳನ್ನು ಕ್ರೂರವಾಗಿ ತುಳಿಯಲು ಆಳುವವರಿಗೆ ಸ್ಪೂರ್ತಿ ನೀಡಿದೆ. ಈ ಪ್ರಕ್ರಿಯೆಯಲ್ಲಿ, ಈ ಮನಸ್ಮೃತಿ ನಮ್ಮ ಉಪಖಂಡದಲ್ಲಿ ಸಮಾಜದ ಪ್ರಗತಿಗೆ ಮುಖ್ಯ ಅಡಚಣೆಯಾಗಿದೆ.

ಸುಧಾರಣಾ ಚಳವಳಿಗಳು

ಇದನ್ನು ಮನಗಂಡ ಪ್ರಗತಿಪರರು ಭಾರತದ ಬಹುತೇಕ ಎಲ್ಲ ಭಾಗಗಳಲ್ಲಿ ವಿವಿಧ ರೀತಿಯ ಸುಧಾರಣಾ ಚಳವಳಿಗಳನ್ನು ನಡೆಸಿದರು. ನಮ್ಮ ಬಸವಣ್ಣನವರು ಹಾಗೂ ಬಸವಾದಿ ಶರಣರು ಮುಂತಾದವರು ಮನುವಾದವನ್ನು ವಿರೋಧಿಸಿ ಹೊಸ ಪ್ರಗತಿಪರ ಸಂಪ್ರದಾಯಗಳಿಗೆ ಬಾಗಿಲು ತೆರೆದರು. ಸುಧಾರಣಾ ಆಂದೋಲನದ ಪ್ರವೃತ್ತಿಯನ್ನು ಭಾರತೀಯ ರಾಷ್ಟ್ರೀಯ ಚಳವಳಿಯು ಸ್ವಲ್ಪ ಮಟ್ಟಿಗೆ ಅಳವಡಿಸಿಕೊಂಡಿದೆ. ಫುಲೆ, ಅಂಬೇಡ್ಕರ್, ಪೆರಿಯಾರ್, ಕುವೆಂಪು ಅವರಂತಹ ಮಹಾನ್ ವ್ಯಕ್ತಿಗಳು ಸಮಾಜವನ್ನು ಮಾನವೀಯತೆಯ ಪಿಡುಗಿನಿಂದ ಮುಕ್ತಗೊಳಿಸಲು ಮಹತ್ತರವಾದ ಕೆಲಸವನ್ನು ಮಾಡಿದ್ದಾರೆ. ಬಹುಪಾಲು ಜನಸಾಮಾನ್ಯರು ಸುಧಾರಣಾ ಆಂದೋಲನಗಳನ್ನು ಸ್ವಾಗತಿಸಿದರು. ನಮ್ಮ ದೇಶವನ್ನು ಆಧುನಿಕ ಸಮಾಜವಾಗಿ ಮುನ್ನಡೆಸುವ ಬಲವಾದ ಬಯಕೆ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದ ಉಳಿದ ಜನಸಾಮಾನ್ಯರಲ್ಲಿ ವ್ಯಕ್ತವಾಗಿದೆ. ಅದರ ಪರಿಣಾಮವಾಗಿ ನಮ್ಮ ಸಂವಿಧಾನ ರೂಪುಗೊಂಡಿತು.

ಸನಾತನ ಧರ್ಮ ಎಂದರೆ ಅವರ ದೃಷ್ಟಿಯಲ್ಲಿ ಮನುಧರ್ಮ

ನಮ್ಮ ದೇಶದಲ್ಲಿ ಸಂವಿಧಾನ ರಚಿಸಿ ಅಂಗೀಕರಿಸಿದ ದಿನವನ್ನು ಎಲ್ಲರೂ ಆಚರಿಸಿದರು. ಆದರೆ ಆರ್ ಎಸ್ ಎಸ್ ಇದನ್ನು ಕೆಟ್ಟ ದಿನ ಎಂದು ಕರೆದಿದೆ. ನಮ್ಮಲ್ಲಿ ಮನು ಧರ್ಮಶಾಸ್ತ್ರ ಇರುವಾಗ ಇನ್ನೊಂದು ಸಂವಿಧಾನ ಏಕೆ ಎಂಬ ವಾದವನ್ನು ಆರ್ಗನೈಸರ್ ಪತ್ರಿಕೆ ಮಾಡಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಮ್ಮಿಂದ ದೂರ ಉಳಿದು ಅಂದಿನ ಬ್ರಿಟಿಷ್ ಆಡಳಿತಗಾರರಿಗೆ ನಿಷ್ಠರಾಗಿದ್ದ ಇವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?

ಭಾರತದಲ್ಲಿ ಇಂದು ಹಿಂದುತ್ವ ಶಕ್ತಿಗಳು ಅಧಿಕಾರದಲ್ಲಿವೆ. ಇವರು ಹೆಸರಿಗೆ ಮಾತ್ರ ಸಂವಿಧಾನಕ್ಕೆ ನಿಷ್ಠರಾಗಿರುತ್ತೇವೆ ಎಂದು ಪ್ರತಿಜ್ಞೆ ಮಾಡಿದರೂ, ವಾಸ್ತವದಲ್ಲಿ ಮನುವಾದವೇ ಇವರಿಗೆ ಹೆಚ್ಚು ಮಹತ್ವದ್ದಾಗಿದೆ. ಸನಾತನ ಧರ್ಮ ಎಂದರೆ ಅವರ ದೃಷ್ಟಿಯಲ್ಲಿ ಮನುಧರ್ಮ. ಆದರೆ ನೇರವಾಗಿ ಮನುಧರ್ಮವನ್ನು ಜಾರಿಗೆ ತರುತ್ತೇವೆ ಎಂದು ಹೇಳುವ ಧೈರ್ಯ ಮಾಡಲಾರರು. ಆದುದರಿಂದ 'ಸನಾತನ ಧರ್ಮ' ಎಂಬ ಪದವನ್ನು ಮುಂದಿಡುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ, ಸ್ವಾತಂತ್ರ್ಯ ಮತ್ತು ಸಮಾನತೆಗೆ ಬೆಲೆಯೇ ಇಲ್ಲ.

ಹಾಗಾಗಿ ಸನಾತನ ಧರ್ಮ ಎಂಬ ಪದವನ್ನು ನೋಡಿ ಅದನ್ನು ವಿರೋಧಿಸುವುದು ಎಂದರೆ, ನಮ್ಮ ಸಮಾಜದ ಹಿಂದಿನ ಸಾಧನೆಗಳನ್ನು ವಿರೋಧಿಸುವುದು ಎಂದು ಭಾವಿಸಬಾರದು. ನಾವು ಹೆಮ್ಮೆಪಡುವ ಗತಕಾಲದ ಉದಾತ್ತತೆ ಬಹಳ ಸೀಮಿತವಾಗಿದೆ. ಈಗ ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಹಸಿವಿನಿಂದ ನರಳುತ್ತಿರುವ ಕೋಟಿಗಟ್ಟಲೆ ಜನರ ಅಗತ್ಯಗಳನ್ನು ಪೂರೈಸಲು ಮತ್ತು 'ಜಗತ್ತು ಸಂತೋಷ ಮತ್ತು ಸಮೃದ್ಧವಾಗಿದೆ' ಎಂಬ ಸಾಂಪ್ರದಾಯಿಕ ಆದರ್ಶವನ್ನು ಪೂರೈಸಲು, ಈ ಸಾಂಪ್ರದಾಯಿಕ ಮನುವಾದವನ್ನು ಅಗೆದು ಹೂಳಬೇಕಾಗಿದೆ. ಜಾತಿ ವ್ಯವಸ್ಥೆ ತೊಲಗಬೇಕಾಗಿದೆ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ" (ಎಲ್ಲಿ ಸ್ತ್ರೀಯರನ್ನು ಪೂಜಿಸಲಾಗುತ್ತದೆಯೊ, ಅಲ್ಲಿ ದೇವರುಗಳು ಸುಖವಾಗಿ ವಿಹರಿಸುತ್ತಾರೆ) ಎಂಬ ಪರಿಕಲ್ಪನೆ ಆಚರಣೆಗೆ ಬರಬೇಕಾದರೆ ಮನುವಾದ ಮತ್ತು ಅದರ ಪ್ರತಿಪಾದಕರನ್ನು ನಮ್ಮ ಸಮಾಜದಿಂದ ಹೊರಹಾಕಬೇಕು. ಸಾಮಾಜಿಕ ಪ್ರಗತಿ ಬಯಸುವ ಎಲ್ಲ ಶಕ್ತಿಗಳು ಜೊತೆಯಾಗಿ ಕ್ಷೇತ್ರಕ್ಕೆ ಬರಬೇಕು. ●

ಜಿಡಿಪಿ ಬೆಳವಣಿಗೆ ದರದ ವ್ಯಾಮೋಹ... ಪುಟ 13 ರಿಂದ

ಬೆಳವಣಿಗೆ ದರ ನಿಧಾನಗೊಳ್ಳುತ್ತಿರುವುದರ ಬಗ್ಗೆ ಕಾಳಜಿ

ಅದೇನೇ ಇರಲಿ, ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್ ಅವರಿಂದ ಹಿಡಿದು, ಅಶೋಕ ಮೋದಿ, ದೇಶದ ಮಾಜಿ ಮುಖ್ಯ ಅಂಕಿಅಂಶ ತಜ್ಞ ಪ್ರಣಬ್ ಸೆನ್ ವರೆಗೆ ಎಲ್ಲ ಲೇಖಕರೂ, ಭಾರತದ ಜಿಡಿಪಿ ಬೆಳವಣಿಗೆಯ ದರವು ಅತಿ–ಅಂದಾಜು ಮಾಡಲ್ಪಟ್ಟಿದೆ ಎಂಬ ಏಕಾಭಿಪ್ರಾಯವನ್ನು ಹೊಂದಿದ್ದಾರೆ. ಈ ಅತಿ–ಅಂದಾಜಿಗೆ ಅವರೆಲ್ಲರೂ ಬೇರೆ ಬೇರೆ ಕಾರಣಗಳನ್ನು ಕೊಡುತ್ತಾರೆ. ಈ ಎಲ್ಲ ಕಾರಣಗಳೂ ಒಂದು ಮಟ್ಟದ ಅಂಗೀಕಾರಾರ್ಹತೆಯನ್ನು ಹೊಂದಿವೆ. ಹಾಗಾಗಿ, ಈ ಅತಿ-ಅಂದಾಜು ಅಂಶದ ಬಗ್ಗೆ ವಿವಾದವಿಲ್ಲ. ಆದಾಗ್ಯೂ, ಅತಿ ಎಂದರೆ ಎಷ್ಟು? ಎಂಬ ಪ್ರಶ್ನೆ ಉಳಿಯುತ್ತದೆ. ಕೆಲವು ಲೇಖಕರು ಸೂಚಿಸುವ ಪ್ರಕಾರ, ವಾರ್ಷಿಕ ಶೇ. 2ರಷ್ಟು ಅಧಿಕವಾಗಿ ಅಂದಾಜು ಮಾಡಲ್ಪಟ್ಟಿದೆ ಎಂದು ಭಾವಿಸಿದರೆ, ನವ–ಉದಾರವಾದಿ ಯುಗದ ಜಿಡಿಪಿ ಬೆಳವಣಿಗೆಯ ದರವು ಹಿಂದಿನ ನಿಯಂತ್ರಣಗಳ ಆಳ್ವಿಕೆಯ ದರಕ್ಕಿಂತ ತುಸುವೇ ಹೆಚ್ಚಿನ ಮಟ್ಟದಲ್ಲಿದೆ. ಅದರ ಬಗ್ಗೆ ಪ್ರಶಂಸೆ ಮಾಡುವಂಥದ್ದು ಏನೂ ಇಲ್ಲ.

ಬೆಳವಣಿಗೆಯ ದರ ಯಾವ ಮಟ್ಟದಲ್ಲಿದೆ ಎಂಬುದಕ್ಕಿಂತ ಹೆಚ್ಚಾಗಿ, ಜಿಡಿಪಿ ಬೆಳವಣಿಗೆಯ ದರ ನಿಧಾನಗೊಳ್ಳುತ್ತಿರುವುದರ ಬಗ್ಗೆ ನಮ್ಮ ಕಾಳಜಿ ಸಂಬಂಧಿಸಿದೆ. ಒಂದು ವೇಳೆ ಬೆಳವಣಿಗೆಯ ಮಟ್ಟವನ್ನು ಅತಿಯಾಗಿ ಅಂದಾಜು ಮಾಡಿದರೆ, ಕಾಲಾನಂತರದಲ್ಲಿ ಅದರ ಚಲನೆಯ ಬಗ್ಗೆ ಮಾಡುವ ಅಂದಾಜು ತನ್ನ ವಿಶ್ವಾಸಾರ್ಹತೆಯನ್ನು ಸ್ವಲ್ಪಮಟ್ಟಿಗೆ ಕಳೆದುಕೊಳ್ಳುತ್ತದೆ. ಆದಾಗ್ಯೂ, ಅಧಿಕೃತ ಅಂಕಿಅಂಶಗಳಿಂದ ಒಂದು ನಿರ್ದಿಷ್ಟ ನಿಧಾನಗತಿಯನ್ನು ರುಜುವಾತುಪಡಿಸಬಹುದು. ಅಧಿಕೃತ ಅಂಕಿಅಂಶಗಳ ಪ್ರಕಾರ, 2001–02 ಮತ್ತು 2011–12ರ ನಡುವೆ, ಭಾರತದ ಅರ್ಥವ್ಯವಸ್ಥೆಯಲ್ಲಿ ಸೇರಿಸಲಾದ ನೈಜ ಒಟ್ಟು ಮೌಲ್ಯದ ಬೆಳವಣಿಗೆಯ ಒಟ್ಟು ವಾರ್ಷಿಕ ದರವು ಶೇ. 6.7ರಷ್ಟಿತ್ತು; 2011–12 ಮತ್ತು 2019–20ರ ಅವಧಿಯಲ್ಲಿ, ಅಂದರೆ, ಸಾಂಕ್ರಾಮಿಕದ ಕಾರಣದಿಂದಾಗಿ ಬೆಳವಣಿಗೆಯ ದರದಲ್ಲಿ ನಿಧಾನಗತಿ ಸಂಭವಿಸುವ ಮೊದಲೇ, ನೈಜ ಒಟ್ಟು ಮೌಲ್ಯದ ಒಟ್ಟು ವಾರ್ಷಿಕ ಬೆಳವಣಿಗೆ ದರವು ಶೇ. 5.4ಕ್ಕೆ ಕುಸಿದಿತ್ತು. 2022–23ರ ವೇಳೆಗೆ ಅರ್ಥವ್ಯವಸ್ಥೆಯ ಬೆಳವಣಿಗೆಯು ಇದೇ ಮಟ್ಟಕ್ಕೆ ಚೇತರಿಸಿಕೊಂಡಿತ್ತು. ಮತ್ತೆ 2011–12ರಿಂದ ಹಿಡಿದು 2022–23ರ ವರೆಗಿನ ಅವಧಿಯನ್ನು ನೋಡಿದರೂ ಸಹ, ಅದು ಶೇ. 5.4ರಷ್ಟೇ ಇದೆ.

ಅರ್ಥವ್ಯವಸ್ಥೆಯ ಈ ನಿಧಾನಗತಿಯ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ವರಮಾನದ ಹಂಚಿಕೆ ಹದಗೆಡುವುದರೊಂದಿಗೆ, ಅಂದರೆ, ಆರ್ಥಿಕ ಮಿಗುತಾಯದ ಪಾಲಿನ ಏರಿಕೆಯೊಂದಿಗೆ, ವರಮಾನದ ಬೆಳವಣಿಗೆಗೆ ಹೋಲಿಸಿದರೆ ಒಟ್ಟಾರೆ ಬೇಡಿಕೆಯ ಬೆಳವಣಿಗೆಯ ಗತಿ ನಿಧಾನಗೊಳ್ಳುವ ಅಂದಾಜು ಅನಿವಾರ್ಯವಾಗುತ್ತದೆ. ಹಿಂದೆ, ಈ ಪ್ರತಿಪಾದನೆಯ ಬಗ್ಗೆ ರಷ್ಯಾದ ಅರ್ಥಶಾಸ್ತ್ರಜ್ಞ ಮಿಖಾಯಿಲ್ ತುಗಾನ್–ಬರಾನೋವ್ಸ್ಕಿ ಒಂದು ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಬಳಕೆಯ ಬೆಳವಣಿಗೆಯ ಕುಸಿತವನ್ನು ಸರಿದೂಗಿಸಲು ಹೂಡಿಕೆಯ ಬೆಳವಣಿಗೆಯಲ್ಲಿ ಏರಿಕೆಯಾಗುವ ಸಾಧ್ಯತೆಯನ್ನು ಅವರು ಸೂಚಿಸಿದ್ದರು. ಇದು ಒಂದು ತಾರ್ಕಿಕ ಸಾಧ್ಯತೆಯಾಗಿದ್ದರೂ ಸಹ,ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಹೂಡಿಕೆ ಹೇಗೆ ಸ್ಪಂದಿಸುತ್ತದೆ ಎಂಬ ಅಂಶವನ್ನು ಪರಿಶೀಲಿಸಿದಾಗ, ಒಟ್ಟಾರೆ ಬೇಡಿಕೆಯ ಇಳಿಕೆಯಾಗುವ ಅಂದಾಜಿನ ಸನ್ನಿವೇಶದಲ್ಲಿ ಹೂಡಿಕೆ ಹೆಚ್ಚುತ್ತದೆ ಎಂದು ನಂಬಲಾಗದು. ಏಕೆಂದರೆ, ಬಂಡವಾಳಗಾರರು ಮಾರುಕಟ್ಟೆ ವಿಸ್ತರಿಸುವ ನಿರೀಕ್ಷೆಯಿರುವಾಗ ಮಾತ್ರ ಹೂಡಿಕೆ ಮಾಡುತ್ತಾರೆ. ಸರಕಾರವು ನಿಸ್ಸಂದೇಹವಾಗಿ ಅಧಿಕ ಉತ್ಪಾದನಾ ಪ್ರವೃತ್ತಿಯ ಅಂದಾಜನ್ನು ಎದುರಿಸುವ ನಿಟ್ಟಿನಲ್ಲಿ ಅಂದರೆ, ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಸಲುವಾಗಿ, ಮಧ್ಯಪ್ರವೇಶ ಮಾಡಬಹುದು. ಆದರೆ ಅದಕ್ಕಾಗಿ ಹಣ ಒದಗಿಸಿಕೊಳ್ಳಲು ಇರುವ ಏಕೈಕ ಸಾಧನವನ್ನು (ಅಂದರೆ, ಶ್ರೀಮಂತರ ಮೇಲೆ ವಿಧಿಸುವ ತೆರಿಗೆಯನ್ನು ಹೆಚ್ಚಿಸಬೇಕಾಗುವ ಮತ್ತು ಬಜೆಟ್ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಕ್ರಮಗಳನ್ನು) ಜಾಗತೀಕರಣಗೊಂಡ ಹಣಕಾಸು ಬಂಡವಾಳದ ವಿರೋಧದಿಂದಾಗಿ ಬಳಸುವಂತಿಲ್ಲ.

ಹಾಗಾಗಿ, ಸರ್ಕಾರವು ಹೊಂದಿರುವ ಜಿಡಿಪಿ ಬೆಳವಣಿಗೆ ದರದ ವ್ಯಾಮೋಹವು ಬಡತನದ ಹೆಚ್ಚಳವನ್ನು ತಡೆಯುವಲ್ಲಿ ಯಶಸ್ವಿಯಾಗುವುದಿಲ್ಲ ಅಥವಾ ಸ್ವತಃ ಜಿಡಿಪಿ ಬೆಳವಣಿಗೆ ದರ ಇಳಿಕೆಯನ್ನು ತಡೆಯುವಲ್ಲಿಯೂ ಯಶಸ್ವಿಯಾಗುವುದಿಲ್ಲ. ●

ಹಾಸನ–ಲೈಂಗಿಕ ದೌರ್ಜನ್ಯದ ಅಘಾತಕಾರಿ...... ಪುಟ 3 ರಿಂದ

ಮುಖಂಡರಾದ ದೇವರಾಜೇಗೌಡರು, ಬಿಜೆಪಿ ರಾಜ್ಯಾಧ್ಯಕ್ಷರಿಗೆ ಹಾಸನ ಕ್ಷೇತ್ರದ ಬಿಜೆಪಿ–ಜೆಡಿ(ಎಸ್) ಮೈತ್ರಿಕೂಟದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಪ್ರಜ್ವಲ್ ರೇವಣ್ಣಗೆ ಅವಕಾಶ ನೀಡಬಾರದು ಎಂದು ಪತ್ರ ಬರೆದಿದ್ದು, ಅದರಲ್ಲಿ ಸದರಿ ಲೈಂಗಿಕ ದೌರ್ಜನ್ಯದ ಹಗರಣ ಹಾಗೂ ವಿಡಿಯೋಗಳ ಪ್ರಸ್ತಾಪ ಇರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ವಿಡಿಯೋ ಪ್ರಸರಣದ ಸಂಬಂಧವಾಗಿ ದೂರು ದಾಖಲಾಗಿದೆ. ಬಿಜೆಪಿ ರಾಜ್ಯ ನಾಯಕರಿಗೆ ಹಗರಣದ ಮಾಹಿತಿ ಇದ್ದೂ ಸಹ ಪ್ರಜ್ವಲ್ ರೇವಣ್ಣನನ್ನು ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಿರುವುದು ನಾಚಿಕೆಗೇಡಿನ ವಿಷಯ. ಇದು ಬಿಜೆಪಿ–ಜೆಡಿ(ಎಸ್) ಎರಡೂ ಪಕ್ಷಗಳೂ ತಲೆ ತಗ್ಗಿಸಬೇಕಾದ ವಿಚಾರ. ಆದರೆ ಅಂತಹ ನೈತಿಕತೆ ಆ ಪಕ್ಷಗಳಲ್ಲಿ ಎಳ್ಳೂ ಕಾಣುತ್ತಿಲ್ಲ. ನೇಹಾ ಪಾಟೀಲ್ ಕೊಲೆ ವಿಷಯದಲ್ಲಿ ದುರುದ್ದೇಶಪೂರ್ವಕವಾಗಿ ಪ್ರಕರಣಕ್ಕೆ ಕೋಮು ಬಣ್ಣ ಕೊಟ್ಟು ಮುಸ್ಲಿಂ ದ್ವೇಷ ಹರಡಲು ಹೆಣಗಿದ ಬಿಜೆಪಿ ನಾಯಕರು, ಈಗ ಗಾಢ ಮೌನಕ್ಕೆ ಮೊರೆ ಹೋಗಿರುವುದು, ಪ್ರತಿಕ್ರಿಯಿಸುವುದು ಅನಿವಾರ್ಯವಾದಾಗ ಕಾಟಾಚಾರದ ಹೇಳಿಕೆ ಕೊಡುತ್ತಿರುವುದು, ಅವರ ತತ್ವ ಭ್ರಷ್ಟತೆಗೆ ಸಾಕ್ಷಿಯಾಗಿದೆ. ●

ಸಾರ್ವಜನಿಕ ಆರೋಗ್ಯ ಅನುದಾನ ಕಡಿತ, ಖಾಸಗಿ ವಿಮೆ ಕಂಪನಿಗಳಿಗೆ ಸುಗ್ಗಿ..... ಪುಟ 2 ರಿಂದ

ಬಿಡುಗಡೆ ಮಾಡಿಲ್ಲ.

ಮರಣಗಳ ಕುರಿತ 'ನಾಗರೀಕ ನೋಂದಣಿ ವ್ಯವಸ್ಥೆಯ ದತ್ತಾಂಶಗಳ ಆಧಾರಿತವಾದ ಮತ್ತು ನಿಯತಕಾಲಿಕವಾದ ವರದಿಯು 2014 ರ ನಂತರ ದೊರೆಯುವುದಿಲ್ಲ, 2014 ಕ್ಕೇ ಕೊನೆ. ರೋಗಗಳು ಮತ್ತು ಚಿಕಿತ್ಸೆಯ ವೆಚ್ಚಗಳಿಗೆ ಸಂಬಂಧಿಸಿದ 'ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆ'ಯ ವರದಿ 2018ರ ನಂತರ ದೊರೆಯುವುದಿಲ್ಲ. 2018 ರಲ್ಲಿ ನಡೆಸಲಾದ 75 ನೇ ಸುತ್ತಿನ 'ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆ' (ಎನ್.ಎಸ್.ಎಸ್.)ಯು ಆರೋಗ್ಯ ಚಿಕಿತ್ಸೆಯ ವೆಚ್ಚದಲ್ಲಿ ಭಾರಿ ಏರಿಕೆ ಆಗಿರುವುದನ್ನು ತೋರಿಸಿದೆ. ಕಡೆಯದಾಗಿ 2019–21 ರಲ್ಲಿ ನಡೆಸಲಾಗಿರುವ, ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಗಳ ಮತ್ತೊಂದು ಬಹುಮುಖ್ಯ ಮೂಲವಾಗಿರುವ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ'(ಎನ್.ಎಫ್.ಎಚ್.ಎಸ್.)ಯು ಆರೋಗ್ಯ ಮತ್ತು ಪೌಷ್ಟಿಕಾಂಶಗಳ ವಿಷಯದಲ್ಲಿ ಪರಿಸ್ಥಿತಿಯು ನಿರೀಕ್ಷೆಗಿಂತಲೂ ಮತ್ತು ಸರಕಾರದ ಪ್ರಚಾರಕ್ಕಿಂತಲೂ ಬಹಳ ಕೆಳಗಿದೆ ಎಂಬುದನ್ನು ತೋರಿಸುತ್ತದೆ.

ಕಳೆದ ಐದು ವರ್ಷಗಳಲ್ಲಿ ಔಷಧ ಉದ್ಯಮವು 46 ಶತಕೋಟಿ (ಬಿಲಿಯನ್) ಡಾಲರ್ ವಹಿವಾಟಿನಿಂದ 130 ಶತಕೋಟಿ ಡಾಲರ್‌ಗಳಿಗೆ ವಿಸ್ತರಿಸಿದೆ. ಆಸ್ಪತ್ರೆ ಉದ್ಯಮದ ವಹಿವಾಟು 2017 ರಲ್ಲಿ 62 ಶತಕೋಟಿ ಡಾಲರ್‌ನಿಂದ 2023 ರಲ್ಲಿ 132 ಶತಕೋಟಿ ಡಾಲರ್‌ಗೆ ಏರಿದೆ. ಡಿಜಿಟಲ್ ಆರೋಗ್ಯ ಚಿಕಿತ್ಸೆಯ ಮಾರುಕಟ್ಟೆಯು ನಾಲ್ಕುಪಟ್ಟು ಹೆಚ್ಚಾಗಿ 485 ಶತಕೋಟಿ ಡಾಲರ್‌ಗಳಿಗೇರಿದೆ. ಔಷಧ ಉದ್ಯಮದಲ್ಲಿ ಬೇರೆ ಉದ್ಯಮಗಳಿಗಿಂತಲೂ ಹೆಚ್ಚು (ಅಂದರೆ 133) ಸೂಪರ್ ಶ್ರೀಮಂತರಿದ್ದಾರೆ. ಚುನಾವಣಾ ಬಾಂಡ್‌ಗಳನ್ನು ಅತಿದೊಡ್ಡ ಪ್ರಮಾಣದಲ್ಲಿ ಖರೀದಿಸಿರುವ ಕಂಪನಿಗಳಲ್ಲಿ ಅನೈತಿಕ ಮತ್ತು ಅಕ್ರಮ ವ್ಯವಹಾರಗಳಲ್ಲಿ ತೊಡಗಿದ ಔಷಧ ಕಂಪನಿಗಳೇ ಮುಂಚೂಣಿಯಲ್ಲಿವೆ ಎಂಬುದು ಬಹಳ ಕುತೂಹಲಕರವಾದ ವಿಷಯವಾಗಿದೆ.

ಭಾರತದ ಒಕ್ಕೂಟ ಸ್ವರೂಪದ ಮೇಲೆ ಈಗ ನಡೆಯುತ್ತಿರುವ ದಾಳಿಯು ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ವಿನಾಶಕಾರಿ ಎಂಬುದು ಈಗಲೂ ಸಾಬೀತಾಗುತ್ತಿದೆ ಮತ್ತು ಮುಂದೆಯೂ ಸಾಬೀತಾಗಲಿದೆ. ರಾಜ್ಯ ಸರಕಾರಗಳಿಗೆ ನೀಡಲಾಗುತ್ತಿದ್ದ ಆರೋಗ್ಯ ಅನುದಾನಗಳನ್ನು ಕಡಿತಗೊಳಿಸಲಾಗುತ್ತಿದೆ ಹಾಗೂ ಅದೇ ಸಮಯದಲ್ಲಿ ಆರೋಗ್ಯ ಕ್ಷೇತ್ರದ ಮೇಲಿನ ಕೇಂದ್ರದ ಹಿಡಿತ–ನಿಯಂತ್ರಣವು ಹೆಚ್ಚುತ್ತಿದೆ.

ಮೂರು ಹೊಸ ಕಾಯ್ದೆಗಳು–ರಾಷ್ಟ್ರೀಯ ವೈದ್ಯಕೀಯ ಕಮಿಷನ್‌ಗಳ ಕಾಯ್ದೆ, ರಾಷ್ಟ್ರೀಯ ಸಹಾಯಕ ಆರೋಗ್ಯ ಕಾರ್ಯಕರ್ತರ ಕಾಯ್ದೆ ಮತ್ತು ರಾಷ್ಟ್ರೀಯ ನರ್ಸಿಂಗ್ ಕಮಿಷನ್ ಕಾಯ್ದೆ ಇವುಗಳನ್ನು ಅಂಗೀಕರಿಸಲಾಗಿದೆ. ಈ ಮೂಲಕ ವೈದ್ಯಕೀಯ ಸಂಸ್ಥೆಗಳಿಗೆ ಕೇಂದ್ರೀಕೃತವಾದ ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳನ್ನು ಹೇರಲಾಗಿದೆ. ಮತ್ತು ಈಗ ಅಂತಿಮ ಪರೀಕ್ಷೆಗಳನ್ನು ಕೇಂದ್ರೀಕರಣಗೊಳಿಸಲಾಗಿದೆ. ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ಕೋಟಾವನ್ನು ಹೆಚ್ಚಿಸಲಾಗಿದೆ ಮತ್ತು ಈ ಕೋಟಾದಲ್ಲಿ ವಿದ್ಯಾರ್ಥಿಗಳ ಪ್ರವೇಶದ ಅರ್ಹತೆಗೆ ಕನಿಷ್ಟ ಅಂಕಗಳನ್ನು ಕಡಿಮೆ ನಿಗದಿಗೊಳಿಸಲು ಮತ್ತು ಹೆಚ್ಚು ಶುಲ್ಕವನ್ನು ವಸೂಲಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಒಟ್ಟು ಬೆಳವಣಿಗೆಗಳಿಂದ ಹಿಂದೆಲ್ಲ ಭ್ರಷ್ಟಾಚಾರ ಎಂದು ಕರೆಯುತ್ತಿದ್ದುದನ್ನು ಈಗ ಕಾನೂನುಬದ್ಧಗೊಳಿಸಲಾಗಿದೆ. ಸುಪ್ರಿಂ ಕೋರ್ಟ್ ಪದೇ ಪದೇ ಆದೇಶ ನೀಡಿದ್ದರೂ ಸಹ ಈ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಭೋದಕ ಸಮುದಾಯದ ಮಾಹಿತಿ ಮತ್ತು ಅವರ ಹಾಜರಾತಿ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ ಎಂದರೆ ಅದನ್ನೂ ಸಹ ಮಾಡುತ್ತಿಲ್ಲ.

ಸಾರ್ವಜನಿಕ ಆರೋಗ್ಯ ಕ್ಷೇತ್ರದ ಮೇಲೆ ಮತ್ತು ಮಹಿಳೆಯರು, ಆದಿವಾಸಿಗಳು, ದಲಿತರು ಮುಂತಾದ ವಿಭಾಗಗಳ ಮೇಲೆ ಬಿಜೆಪಿ ಸರಕಾರದ ಆರೋಗ್ಯ ನೀತಿಯ ಪರಿಣಾಮಗಳು ವಿನಾಶಕಾರಿಯಾಗಿವೆ ಎಂಬುದು ಸ್ಪಷ್ಟವಾಗಿದೆ.

ಎಲ್ಲರಿಗೂ ಉಚಿತ ಆರೋಗ್ಯ ಸೌಕರ್ಯವನ್ನು ನೀಡಿ!
ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಕಾಪಾಡಿ!
ಬಿಜೆಪಿಯನ್ನು ಸೋಲಿಸಿ!

ಕೋಮುವಾದಿ–ಬಂಡವಾಳಶಾಹಿ ಅಳಿಯಲಿ........ ಪುಟ 16 ರಿಂದ

ಮೋದಿ ಆಡಳಿತ ಮತ್ತು ಕೋಮುವಾದಿ ಮತ್ತು ಕಾರ್ಪೊರೇಟ್ ಸಖ್ಯತೆಯನ್ನು ಕಿತ್ತೆಸೆಯಲಿ ಎಂದು ಕರೆ ನೀಡುತ್ತದೆ.

ಮೋದಿಯ ಹತ್ತು ವರ್ಷಗಳ ಆಡಳಿತ ಕಾರ್ಮಿಕ ವರ್ಗ ಸೇರಿದಂತೆ ಎಲ್ಲ ಸಮುದಾಯದ ಮೇಲೆ ನಿರಂತರ ದಾಳಿಗಳನ್ನು ನಡೆಸಿದೆ. ಇದರ ನಡುವೆಯೂ ಕಾರ್ಮಿಕ ವರ್ಗ ಪೈಶಾಚಿಕ ಕಾರ್ಮಿಕ ಸಂಹಿತೆಗಳನ್ನು ತಡೆಯುವಲ್ಲಿ ಯಶಸ್ವಿಯಾಗಿವೆ. ಕಾರ್ಮಿಕರ ಹಕ್ಕುಗಳು ಮಾತ್ರವಲ್ಲ ಕಾರ್ಮಿಕರ ಬದುಕು ಅತ್ಯಂತ ಘೋರವಾಗಿದೆ. ಮೋದಿ ಆಡಳಿತ ಎಲ್ಲ ಸಮುದಾಯಕ್ಕೂ ಮತ್ತು ದೇಶಕ್ಕೂ ದುರಂತಮಯವಾಗಿದೆ. ನಿರುದ್ಯೋಗ ಗರಿಷ್ಠ ಮಟ್ಟವನ್ನು ತಲುಪಿದೆ, ಹಸಿವು, ಬಡತನ ಮಿತಿ ಮೀರಿದೆ. ಆಹಾರ, ಆರೋಗ್ಯ, ಪೌಷ್ಠಿಕತೆ, ಶಿಕ್ಷಣ, ಸಾರಿಗೆ/ಸಂಪರ್ಕ, ವಿದ್ಯುತ್ ಮುಂತಾದವು ಸರಕುಗಳಾಗಿ ಮಾರ್ಪಟ್ಟಿವೆ. ಇವು ಬೃಹತ್ ಕಂಪನಿಗಳ ಲಾಭದಾಯಕ ಕ್ಷೇತ್ರಗಳಾಗಿವೆ. ಮನೆಗಳ ಸಾಲ ಹಿಂದೆಂದೂ ಕಾಣದಷ್ಟು ಎತ್ತರಕ್ಕೆ ಏರಿದೆ.

ಮಾತ್ರವಲ್ಲದೆ ಬಿಜೆಪಿಯ ತಾತ್ವಿಕ ಗುರುವಾದ ಆರ್‌ಎಸ್‌ಎಸ್ ಕೋಮು ವಿಷವನ್ನು ಹಬ್ಬುತ್ತಿದ್ದು ದುಡಿಯುವ ಜನರ ಐಕ್ಯತೆಯನ್ನು ಮುರಿಯುತ್ತಿದೆ. ಅವರ ಚಳವಳಿಯನ್ನು ಚಳುವಳಿಯನ್ನು ದುರ್ಬಲಗೊಳಿಸುತ್ತಿದೆ. ದೇಶದ ಜಾತ್ಯತೀತ ಸಂವಿಧಾನವನ್ನು ಬುಡಮೇಲುಗೊಳಿಸುತ್ತಿದೆ. ಇದರ ಸ್ಥಳದಲ್ಲಿ ಮನುಸ್ಮೃತಿಯನ್ನು ಸ್ಥಾಪಿಸಲು ಉದ್ದೇಶಿಸಿದೆ. ಆ ಮೂಲಕ ದಲಿತರು, ಬುಡಕಟ್ಟು ಜನರು ಮತ್ತು ಮಹಿಳೆಯರನ್ನು ನಿಕೃಷ್ಟ ತಂದು ನಿಲ್ಲಿಸಲಿದೆ. ಆರ್‌ಎಸ್‌ಎಸ್ ಹಿಂದೂ ರಾಷ್ಟ್ರವನ್ನು ಸ್ಥಾಪಿಸಲು ಮುಂದಾಗಿದೆ. ಇದು ಆರ್‌ಎಸ್‌ಎಸ್‌ನ ರಾಜಕೀಯ ಉದ್ದೇಶವಾಗಿದೆ. ಅದಕ್ಕೆ ಹಿಂದೂ ಸಮುದಾಯದ ಹಿತ ಮತ್ತು ಉತ್ತಮ ಜೀವನ ಅಗತ್ಯವಿಲ್ಲ.

"ನಾ ಕಾವೂಂಗಾ" "ನಾ ಕಾನೇ ದೂಂಗಾ" ಬರೀ ಘೋಷಣೆಯಾಗಿದ್ದು ಚುನಾವಣಾ ಬಾಂಡ್‌ಗಳಲ್ಲಿ ಅದರ ಬಂಡವಾಳ ಬಯಲಾಗಿದೆ. ಚುನಾವಣಾ ಬಾಂಡ್‌ಗಳು ಜಗತ್ತಿನ ಅತಿದೊಡ್ಡ ಭ್ರಷ್ಟಾಚಾರವಾಗಿದೆ. ಮೋದಿ ಸರ್ಕಾರ ಕಾರ್ಪೊರೇಟ್ ಡೋನರ್‌ಗಳಿಗೆ ಹೇಗೆ ಲಾಭ ಮಾಡಿಕೊಟ್ಟಿದೆ ಎಂಬುದಕ್ಕೆ ದೊಡ್ಡ ಉದಾಹರಣೆಯಾಗಿದೆ. ಹತ್ತು ವರ್ಷಗಳ ಆಡಳಿತ ಕೇವಲ ಆರಂಭವಾಗಿದ್ದು ಮುಖ್ಯ ಆಡಳಿತ ಮೂರನೆ ಅವಧಿಗೆ ಆಯ್ಕೆಯಾದಾಗ ಬರಲಿದೆ ಎಂದು ಮೋದಿಯೇ ಸ್ವತಃ ಘೋಷಿಸಿದ್ದಾರೆ. ಮೂರನೆ ಅವಧಿಗೆ ಅವರ ಆಡಳಿತ ಬಂದ ತಕ್ಷಣ ಕಾರ್ಮಿಕರು, ರೈತರ ಮತ್ತು ಇತರೆ ಶೋಷಿತರ ನಿರ್ಲಕ್ಷ ಆರಂಭವಾಗಲಿದೆ. ಅಂಬೇಡ್ಕರ್ ರಚಿಸಿದ ಸಂವಿಧಾನ ಆರ್‌ಎಸ್‌ಎಸ್‌ನ ನಿರ್ದೇಶನದಂತೆ ಬದಲಾಗಲಿದೆ. ಸಂಸದೀಯ ವ್ಯವಸ್ಥೆ ಬುಡಮೇಲಾಗಲಿದ್ದು ಸರ್ವಾಧಿಕಾರಿ ಆಡಳಿತ ಅಸ್ತಿತ್ವಕ್ಕೆ ಬರಲಿದೆ.

ಸಿಐಟಿಯು ಕಾರ್ಮಿಕ ವರ್ಗ ಮತ್ತು ಜನರ ನಡುವೆ ಈ ಕುರಿತು ಜಾಗೃತಿ ಮೂಡಿಸುತ್ತಿದೆ. ಮತ್ತು ಮೋದಿ ಆಡಳಿತದ ಹೊಸ ಆಡಳಿತ ನೀತಿಗಳ ಕುರಿತು ಹಾಗೂ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಸಾಮ್ರಾಜ್ಯಶಾಹಿ ಕುರಿತ ಜಾಗೃತಿಯನ್ನು ಮೂಡಿಸುತ್ತಿದೆ. ●

ಪ್ರಧಾನಿಗಳ ವಿರುದ್ಧ ಸಿಪಿಐ(ಎಂ) ಮುಖಂಡರ ದೂರು.... ಪುಟ 7 ರಿಂದ

ಮತ್ತು ತನ್ನ ಎಲ್ಲಾ ನಾಗರಿಕರಿಗೆ ಜಾತ್ಯತೀತತೆ ಮತ್ತು ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸುವ ಈ ದೇಶದ ರಾಷ್ಟ್ರೀಯ ಸಮಗ್ರತೆ ಮತ್ತು ಏಕತೆಗೆ ತೀವ್ರವಾಗಿ ತೊಂದರೆಯನ್ನು ಉಂಟುಮಾಡುತ್ತದೆ, ಮತ್ತು ಮುಸ್ಲಿಮರು ಮತ್ತು ಭಾರತೀಯ ಪ್ರಜೆಗಳು ಇವೆರಡೂ ಆಗಿದ್ದಾರೆ ಎಂಬ ಅವರ ಅಸ್ಮಿತೆಗೆ ಮತ್ತು ಧಾರ್ಮಿಕ ನಂಬಿಕೆಗಳಿಗೆ ಅವಮಾನವಮಾಡುತ್ತದೆ ಎಂದು ಬೃಂದಾಕಾರಟ್ ಮತ್ತು ಗ್ರೆವಾಲ್ ಈ ದೂರಿನಲ್ಲಿ ಹೇಳಿದ್ದಾರೆ.

ಪ್ರಚಾರದ ಭಾಗವಾಗಿ ಭಾಷಣದ ಸಂದರ್ಭವನ್ನು ಗಮನಿಸಿದರೆ ಮತ್ತು ಮುಂಬರುವ ಚುನಾವಣೆಗಳನ್ನು ಗಮನಿಸಿದರೆ, ಪ್ರಧಾನ ಮಂತ್ರಿಗಳ ಮಾತುಗಳು ಪ್ರಚೋದನಕಾರಿ ಮತ್ತು ಹಾನಿಕಾರಕ ಪರಿಣಾಮಗಳಿಗೆ ಕಾರಣವಾಗಬಹುದು. ಇದಲ್ಲದೆ, ಇಂತಹ ಸಂದರ್ಭದಲ್ಲಿ, ಭಾಷಣದ ಸಂಬಂಧಿತ ಭಾಗವನ್ನು ಭಾರತದಾದ್ಯಂತ ಪ್ರಸಾರ ಮಾಡಲಾಗಿರುವುದರಿಂದ, ಈ ಹೇಳಿಕೆಗಳ ಪ್ರಭಾವವು ದೇಶವ್ಯಾಪಿಯಾಗಿದ್ದು ನಿಮ್ಮ ಪೊಲೀಸ್ ಠಾಣೆಯ ವ್ಯಾಪ್ತಿಗೂ ಬರುತ್ತದೆ. ಯಾವುದೇ ನಾಗರಿಕರು ಅವರ ಸ್ಥಾನಮಾನ ಎಷ್ಟೇ ಉನ್ನತವಾಗಿದ್ದರೂ ಸಹ ಕಾನೂನನ್ನು ಮೀರಿ ಹೋಗಲು ಸಾಧ್ಯವಿಲ್ಲ. ಆದ್ದರಿಂದ ಮೋದಿಯವರ ವಿರುದ್ಧ ಉಲ್ಲೇಖಿಸಲಾದ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸುವುದು ನಿಮ್ಮ ಜವಾಬ್ದಾರಿಯಾಗಿದೆ" ಎಂದು ಈ ಪತ್ರದ ಮೂಲಕ ಪೊಲೀಸ್ ಠಾಣೆಯ ಮುಖ್ಯಸ್ಥರ ಗಮನಕ್ಕೆ ತಂದಿದೆ. ●

ದೇಶದ ಐಕ್ಯತೆಗೆ ತೀವ್ರ ಧಕ್ಕೆ ತರಲಿರುವ..... ಪುಟ 6 ರಿಂದ

ಪ್ರಧಾನಿ ಪಟ್ಟ ಅಲಂಕರಿಸಿದ ಮೋದಿ 'ಅಭಿವೃದ್ಧಿ' ಎಂಬ ಮಂತ್ರದಂಡ ಹಿಡಿದು ಯುವಜನರನ್ನು ಸೆಳೆದಿದ್ದರು. ಎರಡು ಕೋಟಿ ಉದ್ಯೋಗ ಸೃಷ್ಟಿಯಾಗುತ್ತದೆ, ವಿದೇಶದಿಂದ ಕಪ್ಪು ಹಣ ತಂದು ಹಂಚಲಾಗುತ್ತದೆ, ಭ್ರಷ್ಟಾಚಾರಕ್ಕೆ ಕಡಿವಾಣ ಬೀಳುತ್ತದೆ, ಬೆಲೆ ಇಳಿಕೆಯಾಗುತ್ತದೆ ಎಂದು ನಿರೀಕ್ಷಿಸಿದ್ದ ಜನತೆಗೆ ಮೊದಲ ಐದು ವರ್ಷಗಳಲ್ಲಿ ತೀವ್ರ ನಿರಾಸೆಯಾಗಿತ್ತು. ಆ ವೈಫಲ್ಯದಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು 2019ರಲ್ಲಿ ನಡೆದ ಪುಲ್ವಾಮಾ ಘಟನೆಯನ್ನು ಬಳಸಿಕೊಂಡು ಪಾಕಿಸ್ತಾನದ ಮೇಲೆ ಸರ್ಜಿಕಲ್ ಸ್ಟ್ರೈಕ್ ಹೆಸರಿನಲ್ಲಿ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲಾಗಿದೆ ಎಂಬ ಭ್ರಮೆಯನ್ನು ಹುಟ್ಟುಹಾಕಿ ಜನರ ಭಾವನೆಗಳನ್ನು ಮತಗಳಾಗಿ ಪರಿವರ್ತಿಸಿದರು. ಆದರೆ ಭಯೋತ್ಪಾದನೆ ನಿರ್ಮೂಲನೆಯಾಗಲಿಲ್ಲ, ಆ ಭಯೋತ್ಪಾದನೆ ನಿರ್ಮೂಲನೆ ನೆಪದಲ್ಲಿ ಕಾಶ್ಮೀರದ 370 ನೇ ವಿಧಿಯನ್ನು ರದ್ದುಗೊಳಿಸಲಾಯಿತು. ಅದರ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಟ್ಟಿತು. ಹಿಂದೂ ಮುಸ್ಲೀಮರೆಂಬ ಬೇದವಿಲ್ಲದೆ, ಬಡ ರೈತರ ಜಮೀನುಗಳನ್ನು (ಕಾಶ್ಮೀರಿ ಪಂಡಿತರ ಜಮೀನೂ ಸೇರಿದಂತೆ) ಅದಾನಿ ಮತ್ತು ಅಂಬಾನಿಗೆ ನೀಡಲಾಗುತ್ತಿದೆ. ಸಣ್ಣ ಉದ್ಯಮಿಗಳು ಮತ್ತು ಯುವಕರು ಜೀವನೋಪಾಯಕ್ಕಾಗಿ ಅವಲಂಬಿಸಿರುವ ಪ್ರವಾಸೋದ್ಯಮವನ್ನು ದೊಡ್ಡ ಕಂಪನಿಗಳಿಗೆ ವಹಿಸಲಾಗಿದೆ. ಇದರಿಂದ ಕಾಶ್ಮೀರಿಗಳಲ್ಲಿ ಅಭದ್ರತೆ ಹೆಚ್ಚುತ್ತಿದ್ದು, ಭಯೋತ್ಪಾದನೆಯತ್ತ ಮುಖ ಮಾಡುತ್ತಿದ್ದಾರೆ.

ಅಂದು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ ಬಿಜೆಪಿ ನಾಯಕ ಸತ್ಯಪಾಲ್ ಮಲಿಕ್, ಸೈನಿಕರನ್ನು ವಿಮಾನದಲ್ಲಿ ಕಳುಹಿಸಬೇಕು ಮತ್ತು ರಸ್ತೆ ಮೂಲಕ ಕಳುಹಿಸಬಾರದು ಎಂದು ಹೇಳಿದರು, ಆದರೆ ಮೋದಿ ಸರ್ಕಾರ 40 ವೀರ ಯೋಧರ ಸಾವಿಗೆ ಕಾರಣವಾಯಿತು. ಈ ಸಂಗತಿಯನ್ನು ಇದೇ ರಾಜ್ಯಪಾಲರು ದೇಶದ ಜನತೆಯ ಗಮನಕ್ಕೆ ತಂದ ನಂತರ ಕೋಪಗೊಂಡ ಬಿಜೆಪಿ, ರಾಜ್ಯಪಾಲರ ವಿರುದ್ದ ಇಡಿ ಅಸ್ತ್ರ ಪ್ರಯೋಗಿಸಿ ಬೆದರಿಕೆ ಹಾಕಿದೆ. 2019–24 ರ ನಡುವೆ ದೇಶವು ಯಾವುದೇ ಅಭಿವೃದ್ಧಿಯನ್ನು ಕಂಡಿಲ್ಲ ಮತ್ತು ಕಳೆದ 45 ವರ್ಷಗಳಲ್ಲಿ ಹಿಂದೆಂದಿಗಿಂತಲೂ ನಿರುದ್ಯೋಗ ಮೇಲುಗೈ ಸಾಧಿಸಿದೆ. ಬೆಲೆಗಳು ಗಗನಕ್ಕೇರುತ್ತಿವೆ. ಚುನಾವಣಾ ಬಾಂಡ್‌ಗಳ ಹೆಸರಿನಲ್ಲಿ ಬಿಜೆಪಿ ನಡೆಸಿರುವ ಸಾವಿರಾರು ಕೋಟಿ ಹಗರಣ ಮೋದಿಯವರ ನಿಜ ರೂಪವನ್ನು ಬಯಲು ಮಾಡಿದೆ.

ಮುಂದಿನ ದಿನಗಳಲ್ಲಿ ನಿರಂಕುಶಾಧಿಕಾರದ ಅಪಾಯ

ವಿರೋಧ ಪಕ್ಷಗಳ ಮೇಲೆ, ಅವರನ್ನು ಪ್ರಶ್ನಿಸಿದವರ ಮೇಲೆ ಮತ್ತು ಸತ್ಯಗಳನ್ನು ಬರೆಯುವ ಪತ್ರಕರ್ತರ ಮೇಲೆ ಇಡಿ, ಐಟಿ, ಸಿಬಿಐ, ಎನ್‌ಐಎ ಮತ್ತು ಯುಎಪಿಎ(ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆ) ಕಾನೂನುಗಳನ್ನು ಬಳಸಲಾಗುತ್ತಿದೆ. ಚುನಾವಣೆಯನ್ನು ಫ್ರೆಡ್ ಮಾಡಲು ಚುನಾವಣಾ ಆಯೋಗವನ್ನು ನೇಮಿಸುವ ಹಕ್ಕನ್ನು ಅದು ಕಾಯ್ದಿರಿಸಿದೆ. ಪ್ರಜಾಪ್ರಭುತ್ವದ ಕತ್ತು ಹಿಸುಕಿ ದೇಶದ ಮೇಲೆ ನಿರಂಕುಶಾಧಿಕಾರವನ್ನು ಹೇರತೊಡಗಿದ್ದಾರೆ. ಜನರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮೋದಿ ವಿಫಲವಾಗಿರುವುದರಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರದ ಭಾಗವಾಗಿ ರಾಜಸ್ಥಾನದಲ್ಲಿ ಮಾತನಾಡುತ್ತಾ ಮೋದಿ ತಮ್ಮ ಸ್ವಾರ್ಥ ರಾಜಕೀಯ ಅಜೆಂಡಾವನ್ನು ಜನರ ಮೇಲೆ ಹೇರುತ್ತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಈ ದುಷ್ಟ ಯೋಜನೆಯನ್ನು ಸೋಲಿಸಿ ದೇಶದ ಭವಿಷ್ಯ, ಸಂವಿಧಾನ ಮತ್ತು ಜನರ ಏಕತೆಯನ್ನು ರಕ್ಷಿಸುವ ಜವಾಬ್ದಾರಿ ಮತದಾರರ ಮೇಲಿದೆ.

–ಸಿಚಿ

NEW No. MAG(3)/NPP/205/2021-2022
JANASHAKTHI KANNADA VARA PATRIKE April 29-May 5, 2024 Price: Rs. 10/- Date of Publication: 26 April 2024 RNI No. KARKAN /2006/17926 Posted on 01-05-2024
Posted at BG PSO, BG - 560026 **Posted at Periodical Rate -** Rs. 2

ಕೋಮುವಾದಿ–ಬಂಡವಾಳಶಾಹಿ ಅಳಿಯಲಿ

ಮೇ ದಿನದ ಪ್ರಣಾಳಿಕೆ

(ಪ್ರತಿ ವರ್ಷದ ಮೇ ದಿನದ ಪ್ರಣಾಳಿಕೆಯನ್ನು ಸಿಐಟಿಯು ಅಖಿಲ ಭಾರತ ಕೇಂದ್ರ ಸಮಿತಿ ಬಿಡುಗಡೆ ಮಾಡುತ್ತದೆ. ಈ ಅಂಶಗಳನ್ನು ದಿಕ್ಸೂಚಿಯಾಗಿ ಬಳಸಲಾಗುತ್ತದೆ. ಈ ವರ್ಷದ ಮೇ ದಿನದ ಪ್ರಣಾಣಿಕೆಯ ಅಂಶಗಳು ಇಲ್ಲಿವೆ.)

ಜಗತ್ತಿನಾದ್ಯಂತ ಬಂಡವಾಳಶಾಹಿ ವಿರುದ್ಧ ಶ್ರಮಿಸುತ್ತಿರುವ ಮತ್ತು ಅಪಾರ ಪ್ರಾಣತ್ಯಾಗದಿಂದ ಗಳಿಸಿದ ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು ಶ್ರಮಿಸುತ್ತಿರುವ ಜಗತ್ತಿನ ಎಲ್ಲ ಕಾರ್ಮಿಕ ಬಂಧುಗಳಿಗೆ ಸಿಐಟಿಯು ಮೇ ದಿನಾಚರಣೆಯ ಶುಭಾಶಯಗಳನ್ನು ಸಲ್ಲಿಸುತ್ತದೆ.

ವರ್ಗ ಹೋರಾಟದ ಗುರಿ ಹೊಂದಿರುವ ಮತ್ತು ಸಮರಧೀರವಾದ ವಿಶ್ವದ ಏಕೈಕ ಜಾಗತಿಕ ಕಾರ್ಮಿಕ ಸಂಘಟನೆಯಾದ ಡಬ್ಲ್ಯೂಎಫ್‌ಟಿಯುಗೂ ಸಿಐಟಿಯು ಶುಭಾಶಯಗಳನ್ನು ತಿಳಿಸುತ್ತದೆ. ಡಬ್ಲ್ಯೂಎಫ್‌ಟಿಯು ಜಗತ್ತಿನಾದ್ಯಂತ ಕಾರ್ಮಿಕರನ್ನು ಸಂಘಟಿಸುತ್ತಿರುವ ಏಕೈಕ ಸಂಘಟನೆಯಾಗಿದ್ದು ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶೋಷಣೆ ವಿರುದ್ಧ ಶ್ರಮಿಸುತ್ತಿದೆ.

ಅಷ್ಟೇ ಅಲ್ಲದೆ ಸಮಾಜವಾದಿ ದೇಶಗಳಾದ ಚೀನಾ, ಕ್ಯೂಬಾ, ವಿಯೆಟ್ನಾಂ ಮತ್ತು ಉತ್ತರ ಕೊರಿಯಾಗಳಿಗೂ ಸಿಐಟಿಯು ತನ್ನ ಶುಭಾಶಯಗಳನ್ನು ಸಲ್ಲಿಸುತ್ತದೆ. ಜಗತ್ತಿನಾದ್ಯಂತ ಸೃಷ್ಟಿಯಾಗಿರುವ ಬಿಕ್ಕಟ್ಟಿನ ನಡುವೆಯೂ ಸಮಾಜವಾದಿ ದೇಶಗಳು ತಮ್ಮ ಜನರ ಜೀವನವನ್ನು ಉತ್ತಮಗೊಳಿಸುವಲ್ಲಿ, ಸಾರ್ವತ್ರಿಕ ಆರೋಗ್ಯ ಮತ್ತು ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿವೆ. ಕಳೆದ ಆರು ದಶಕಗಳಿಂದಲೂ ಕ್ಯೂಬಾ ಮೇಲೆ ಅಮೆರಿಕ ಸಾಮ್ರಾಜ್ಯಶಾಹಿ ಹೇರಿರುವ ದಿಗ್ಬಂಧನವನ್ನು ಸಿಐಟಿಯು ಕಟುವಾಗಿ ಟೀಕಿಸಿದೆ. ದಿಗ್ಬಂಧನಗಳ ನಡುವೆಯೂ ಕ್ಯೂಬಾ ಜಗತ್ತಿನಲ್ಲಿಯೇ ಅತ್ಯುತ್ತಮ ಆರೋಗ್ಯ ಸೇವೆಗಳನ್ನು ಕಲ್ಪಿಸುತ್ತಿರುವ ದೇಶವಾಗಿದೆ. ಜೊತೆಗೆ ಹಲವಾರು ದೇಶಗಳಿಗೆ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ.



ಕೇರಳದಲ್ಲಿನ ಎಲ್‌ಡಿಎಫ್ ಸರ್ಕಾರಕ್ಕೆ ಸಿಐಟಿಯು ಶುಭಾಶಯಗಳನ್ನು ಸಲ್ಲಿಸುತ್ತದೆ. ಕೇರಳ ಎಡರಂಗ ಸರ್ಕಾರ ಜನಪರ ಯೋಜನೆಗಳನ್ನು ಜಾರಿಗೆ ತರುತ್ತಿದ್ದು, ಕಾರ್ಮಿಕರ ಜೀವನ ಮತ್ತು ಹಕ್ಕುಗಳನ್ನು ರಕ್ಷಿಸುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರದ ಅಮಾನವೀಯ, ವಿವೇಚನಾರಹಿತ ಆರ್ಥಿಕ ತಡೆಗಳನ್ನು ಒಡ್ಡಿದ್ದರೂ ಈ ಎಲ್ಲ ಸವಾಲುಗಳನ್ನು ಎಡರಂಗ ಸರ್ಕಾರ ಮೆಟ್ಟಿನಿಂತಿದೆ. ಕೇರಳ ಸರ್ಕಾರ ಕಾರ್ಮಿಕ ಕಲ್ಯಾಣ ಮಂಡಳಿಗಳಿಂದ ವಿವಿಧ ರೀತಿಯ ಸವಲತ್ತುಗಳನ್ನು ಕಾರ್ಮಿಕರಿಗೆ ಒದಗಿಸುತ್ತಿದೆ. ಜೊತೆಗೆ ವಲಸೆ ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಿ ಸೇವೆಗಳನ್ನು ಕಲ್ಪಿಸುತ್ತಿದೆ.

ತ್ರಿಪುರಾದಲ್ಲಿ ಹೋರಾಟ ನಡೆಸುತ್ತಿರುವ ಕಾರ್ಮಿಕರು, ಕಾರ್ಯಕರ್ತರು ಮತ್ತು ಬಿಜೆಪಿ ಗೂಂಡಾಗಳಿಂದ ಧಾಳಿಗೆ ಒಳಗಾಗಿರುವ ಕಾರ್ಮಿಕರ ಜೊತೆಗೆ ಸಿಐಟಿಯು ಐಕ್ಯಮತ್ಯವನ್ನು ವ್ಯಕ್ತಪಡಿಸುತ್ತದೆ ಹಾಗೂ ಎಡ ಕಾರ್ಮಿಕರೊಂದಿಗೆ ನಿಂತಿರುವ ಜನಸಮುದಾಯಕ್ಕೂ ಸಿಐಟಿಯು ಮೇ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತದೆ. ಪಶ್ಚಿಮ ಬಂಗಾಳದಲ್ಲಿನ ಟಿಎಂಸಿ ಗೂಂಡಾಗಳೊಂದಿಗೆ ಹೋರಾಟಗಳನ್ನು ನಡೆಸುತ್ತಿರುವ ಅಲ್ಲಿನ ಕಾರ್ಮಿಕರಿಗೂ ಸಿಐಟಿಯು ಶುಭಾಶಯಗಳನ್ನು ತಿಳಿಸುತ್ತಿದೆ.

ಈ ಮೇ ದಿನದ ಸಂದರ್ಭದಲ್ಲಿ ಪ್ಯಾಲೆಸ್ತೇನ್ ಮೇಲೆ ಇಸ್ರೇಲ್‌ನ ಜನಾಂಗೀಯ ಯುದ್ಧವನ್ನು ಸಿಐಟಿಯು ತೀವ್ರವಾಗಿ ಖಂಡಿಸುತ್ತದೆ. 7ನೇ ಅಕ್ಟೋಬರ್ 2023ರಿಂದ ಆರಂಭವಾದ ಈ ಯುದ್ಧದಲ್ಲಿ 33,000 ಕ್ಕೂ ಹೆಚ್ಚು ಜನ ಅಸುನೀಗಿದ್ದು ಈ ಪೈಕಿ ಅರ್ಧದಷ್ಟು ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ. ಇಸ್ರೇಲ್ ಆಸ್ಪತ್ರೆ ಮತ್ತು ವಸತಿ ಪ್ರದೇಶಗಳನ್ನು ಗುರಿ ಮಾಡಿ ದಾಳಿಗಳನ್ನು ನಡೆಸಿತ್ತು. ಗಾಜಾದೊಂದಿಗೆ ಎಲ್ಲ ಸಂಪರ್ಕಗಳನ್ನು ಕಡಿತಗೊಳಿಸಿತ್ತು. ಗಾಜಾಪಟ್ಟಿಯಲ್ಲಿನ ಜನ ವಸ್ತುಶಃ ಅನಾಥರಾಗಿದ್ದರು. ಅಮೆರಿಕ, ಬ್ರಿಟನ್, ಯೂರೋಪ್, ಮತ್ತು ಇಸ್ರೇಲ್‌ನಲ್ಲಿರುವ ಯಹೂದಿಗಳು ಸೇರಿದಂತೆ ಇಡೀ ಜಗತ್ತು ಈ ಜನಾಂಗೀಯ ಯುದ್ಧವನ್ನು ವಿರೋಧಿಸಿತ್ತು ಮತ್ತು ಪ್ಯಾಲೆಸ್ತೀನ್‌ಗೆ ಬೆಂಬಲವಾಗಿ ನಿಂತಿದ್ದವು. ಇಸ್ರೇಲ್ ಯುದ್ಧದ ನೂರನೆ ದಿನ ಜಗತ್ತಿನ ಎಲ್ಲ ಖಂಡಗಳಲ್ಲಿ, 45 ದೇಶಗಳ 1120ಕ್ಕೂ ಹೆಚ್ಚು ದೇಶಗಳಲ್ಲಿ ಬೃಹತ್ ಪ್ರತಿಭಟನೆಗಳನ್ನು ಸಂಘಟಿಸಲಾಗಿತ್ತು. ಅಮೆರಿಕದ ಕೆಲವು ದೊಡ್ಡ ದೊಡ್ಡ ಕಂಪನಿಗಳು ಸಹ ಇಸ್ರೇಲ್ ಯುದ್ಧವನ್ನು ವಿರೋಧಿಸಿದ್ದವು ಮತ್ತು ಪ್ಯಾಲೆಸ್ತೀನ್ ಜನರಿಗೆ ಬೆಂಬಲ ವ್ಯಕ್ತಪಡಿಸಿದ್ದವು. ಕೆಲವು ಯುದ್ಧ ವಿರಾಮ ಮಾತುಗಳನ್ನು ಹೊರತುಪಡಿಸಿದರೆ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಅಮೆರಿಕ ಇಸ್ರೇಲ್‌ಗೆ ಬೆಂಬಲವಾಗಿ ನಿಂತಿದ್ದರು. ಇದರೊಂದಿಗೆ ತನ್ನ ಆಶಾಢಭೂತಿತವನ್ನು ತೋರಿಸಿದ್ದರು. ಸಿಐಟಿಯು ಜಗತ್ತಿನಾದ್ಯಂತ ಪ್ಯಾಲೆಸ್ತೀನ್‌ಗೆ ಬೆಂಬಲವಾಗಿ ನಿಂತವರಿಗೆ ಶುಭಾಶಯಗಳನ್ನು ಸಲ್ಲಿಸುತ್ತದೆ ಮತ್ತು ಪ್ಯಾಲೆಸ್ತೀನ್‌ಗೆ ಬೆಂಬಲವಾಗಿ ನಿಂತವರೊಂದಿಗೆ ನಿಲ್ಲುತ್ತದೆ.

ಗಾಜಾಗೆ ಎಲ್ಲ ಸಾರಿಗೆ ಮುಕ್ತವಾಗಿ ಚಲಿಸಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ. 1967ರಲ್ಲಿ ಇದ್ದ ಗಡಿಗಳನ್ನು ಮತ್ತು ಪೂರ್ವ ಜೆರುಸಲೆಂ ಅದರ ರಾಜಧಾನಿ ಎಂಬುದನ್ನು ಹಾಗೂ ಪ್ಯಾಲೆಸ್ತೀನ್ ಜನರ ತಾಯ್ನಾಡಿನ ಬೇಡಿಕೆಯನ್ನು ಸಿಐಟಿಯು ಬೆಂಬಲಿಸುತ್ತದೆ.

ಪ್ಯಾಲೆಸ್ತೀನ್ ವಿಚಾರವಾಗಿ ಮೋದಿ ಸರ್ಕಾರದ ನಿಲುವನ್ನು ಮತ್ತು ಆದಿಯಿಂದಲೂ ಪ್ಯಾಲೆಸ್ತೀನ್‌ಗೆ ಬೆಂಬಲವಾಗಿದ್ದ ಭಾರತದ ನಿಲುವನ್ನು ಮೋದಿ ಸರ್ಕಾರ ಬದಲಾಯಿಸಿದ್ದನ್ನು ಸಿಐಟಿಯು ತೀವ್ರವಾಗಿ ವಿರೋಧಿಸುತ್ತದೆ. ಮೋದಿ ಆಡಳಿತದ ಅವಧಿಯಲ್ಲಿ ಭಾರತ ಇಸ್ರೇಲ್‌ನ ಶಸ್ತ್ರಾಸ್ತ್ರಗಳಿಗೆ ದೊಡ್ಡ ಗಿರಾಕಿಯಾಗಿದೆ ಮತ್ತು ಅತಿ ಸೂಕ್ಷ್ಮ ಶಸ್ತ್ರಾಸ್ತ್ರಗಳಿಗೆ ದೊಡ್ಡ ಗ್ರಾಹಕನಾಗಿದೆ. ಜೊತೆಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಇಸ್ರೇಲ್‌ಗೆ ರವಾನಿಸುವುದನ್ನು ಸಿಐಟಿಯು ತೀವ್ರವಾಗಿ ಖಂಡಿಸುತ್ತದೆ. ನಮ್ಮ ಕಾರ್ಮಿಕರ ಜೀವವನ್ನು ಆತಂಕಕ್ಕೆ ದೂಡುವುದು ಮಾತ್ರವಲ್ಲದೆ ಅವರನ್ನು ಇಸ್ರೇಲ್‌ನ ಜನಾಂಗೀಯ ಯುದ್ಧದಲ್ಲಿ ಪರೋಕ್ಷ ಪಾಲುದಾರರನ್ನಾಗಿ ಮಾಡುವುದನ್ನು ತೀವ್ರವಾಗಿ ಖಂಡಿಸುತ್ತದೆ.

ಉಕ್ರೇನ್ ಮೇಲಿನ ಸಾಮ್ರಾಜ್ಯಶಾಹಿ ಯುದ್ಧ ಮೂರನೆ ವರ್ಷಕ್ಕೆ ಕಾಲಿಟ್ಟಿದೆ. ರಷ್ಯಾವನ್ನು ದುರ್ಬಲಗೊಳಿಸುವ ತಮ್ಮ ಗುರಿಯಿಂದ ಮುಂದೆ ಸಾಗುವ ಬದಲು ರಷ್ಯಾ ಮತ್ತು ಯೂರೋಪಿಯನ್ ಒಕ್ಕೂಟ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ರವಾನೆ ಮಾಡುವ ಮೂಲಕ ಯುದ್ಧವನ್ನು ಇನ್ನಷ್ಟು ಪ್ರಯೋಜಿಸುತ್ತಿವೆ. ಅಮೆರಿಕ 75 ಬಿಲಿಯನ್ ಡಾಲರ್‌ಗಳನ್ನು ಉಕ್ರೇನ್ ಯುದ್ಧಕ್ಕೆ ನೀಡಿದೆ. ಉಕ್ರೆನ್ ಯುದ್ಧದಲ್ಲಿ ಲಕ್ಷಾಂತರ ಜನ ಅಸುನೀಗಿದ್ದಲ್ಲದೆ ಲಕ್ಷೋಪಲಕ್ಷ ಜನ ಮನೆ ಮಠ ಕಳೆದುಕೊಂಡು ಅನಾಥರಾದರು. ಮತ್ತೊಂದು ಕಡೆ ಅಮೆರಿಕ, ಫ್ರಾನ್ಸ್, ಇಸ್ರೇಲ್ ಮತ್ತಿತರ ದೇಶಗಳ ಶಸ್ತ್ರಾಸ್ತ್ರ ಕಂಪನಿಗಳು ತೈಲ ಕಂಪನಿಗಳು ಕೋಟ್ಯಂತರ ಡಾಲರ್ ಲಾಭ ಗಳಿಸಿದವು. ಅಮೆರಿಕದ ತೈಲ ಕಂಪನಿ ಎಕ್ಸಾನ್ ಮೊಬಿಲ್ 2023ರಲ್ಲಿ 55 ಶತಕೋಟಿ ಡಾಲರ್ ಲಾಭವನ್ನು ಗಳಿಸಿತು. ಜೊತೆಗೆ ಉಕ್ರೆನ್–ನ್ಯಾಟೊ ಯುದ್ಧವು ಕಚ್ಚಾ ತೈಲ ದರಗಳನ್ನು ಅಪಾರ ಪ್ರಮಾಣದಲ್ಲಿ ಹೆಚ್ಚಿಸಿದವು.

ಬೃಹತ್ ಬಹುರಾಷ್ಟ್ರೀಯ ಕಂಪನಿಗಳ ಬೆಂಬಲದೊಂದಿಗೆ ಸಾಮ್ರಾಜ್ಯಶಾಹಿಗಳು ಜಗತ್ತಿನಾದ್ಯಂತ ಯುದ್ಧಕ್ಕೆ ಪ್ರಚೋದಿಸುತ್ತಿವೆ. ಅದರಲ್ಲೂ ವಿಶೇಷವಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ಯುದ್ಧವನ್ನು ಬೆಂಬಲಿಸುತ್ತಿವೆ. ಎಲ್ಲ ಸಾಮ್ರಾಜ್ಯಶಾಹಿ ಯುದ್ಧಗಳನ್ನು ಸಿಐಟಿಯು ತೀವ್ರವಾಗಿ ಖಂಡಿಸುತ್ತದೆ. ಜೊತೆಗೆ ಜಗತ್ತಿನ ವಿವಿಧ ಭಾಗಗಳಲ್ಲಿ ಸೇನಾ ಮಧ್ಯಪ್ರವೇಶವನ್ನು ತೀವ್ರವಾಗಿ ವಿರೋಧಿಸುತ್ತದೆ. ನ್ಯಾಟೋವನ್ನು ಕೂಡಲೆ ವಿಸರ್ಜಿಸಿ ಶಾಂತಿಯನ್ನು ನೆಲೆಸಲು ಅನುವು ಮಾಡಿಕೊಡಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ.

ಸಾಮ್ರಾಜ್ಯಶಾಹಿ ಯುದ್ಧಗಳಿಗೆ ಪರ್ಯಾಯವಾಗಿ ಚೀನಾ ಶಾಂತಿ ಸ್ಥಾಪಿಸಲು ಕ್ರಮಗಳನ್ನು ಕೈಗೊಂಡಿತು. ಇರಾನ್ ಮತ್ತು ಸೌದಿ ಅರೇಬಿಯಾ ನಡುವೆ ಶಾಂತಿಗೆ ಶ್ರಮಿಸಿತು. ಸಿರಿಯಾ ಮೇಲೆ ಅರಬ್ ಲೀಗ್ ವಿಧಿಸಿರುವ ದಿಗ್ಬಂಧನವನ್ನು ಹಿಂಪಡೆಯಲು ಶ್ರಮಿಸಿತು. ಸೌದಿ ಮತ್ತು ವಿಯೆಟ್ನಾಂ ನಡುವೆ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲು ಚೀನಾ ಮುಂದಾಯಿತು. ಚೀನಾ ಮತ್ತು ರಷ್ಯಾಗಳು ಒಪ್ಪಂದಗಳನ್ನು ಏರ್ಪಡಿಸಿಕೊಂಡವು. ಈ ದ್ವಿಪಕ್ಷೀಯ ಮಾತುಕತೆಗಳಿಂದಾಗಿ ಡಾಲರ್ ಮೇಲಿನ ಅವಲಂಬನೆಯನ್ನು ಶೇಕಡ 50ರಷ್ಟು ಕಡಿಮೆ ಮಾಡಿದವು. ಸೋವಿಯತ್ ಯುದ್ದದ ನಂತರದಲ್ಲಿ ಇದು ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ.

ಈ ಮೇ ದಿನದಂದು ಅಭಿವೃದ್ಧಿ ಹೊಂದಿದ ದೇಶಗಳು ಸೇರಿದಂತೆ ಜಗತ್ತಿನ ಎಲ್ಲ ದೇಶಗಳಲ್ಲಿ ಬಂಡವಾಳಶಾಹಿ ವಿರುದ್ಧದ ಹೋರಾಟದಲ್ಲಿ ಶ್ರಮಿಸಿದ ಕಾರ್ಮಿಕರಿಗೆ ಸಿಐಟಿಯು ಶುಬಾಶಯಗಳನ್ನು ಸಲ್ಲಿಸುತ್ತದೆ.

ಹೊಸ ಆರ್ಥಿಕ ನೀತಿಗಳ ವಿರುದ್ಧದ ಅಸಮಾಧಾನವನ್ನು ಅಮೆರಿಕ, ಇಟಲಿ, ಫ್ರಾನ್ಸ್, ಜರ್ಮನಿ ಸೇರಿದಂತೆ ಮತ್ತಿತರ ಬಲಪಂಥೀಯ ದೇಶಗಳು ಬಳಸಿಕೊಳ್ಳುತ್ತಿವೆ ಎಂಬುದನ್ನು ಸಿಐಟಿಯು ಅರಿತುಕೊಂಡಿದೆ. ಈ ಬಲಪಂಥೀಯ ಶಕ್ತಿಗಳು ಜನಾಂಗೀಯ ವಾದವನ್ನು ಜನರ ನಡುವೆ ಬಿತ್ತುತ್ತಿವೆ.

ಇಂದು ಬಂಡವಾಳಶಾಹಿ ವ್ಯವಸ್ಥೆ ಕಾರ್ಮಿಕರು, ದಮನಿತರ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿಲ್ಲ ಎಂಬುದನ್ನು ಸಿಐಟಿಯು ದೃಢೀಕರಿಸಿದೆ. ಜನರ ಘನತೆಯ ಬದುಕು, ಉದ್ಯೋಗ, ಜೀವನ ವೇತನ, ಮನೆ, ಆರೋಗ್ಯ ಮತ್ತು ಶಿಕ್ಷಣ ನೀಡುವಲ್ಲಿ ಬಂಡವಾಳಶಾಹಿ ವ್ಯವಸ್ಥೆ ವಿಫಲವಾಗಿದೆ. ಬಂಡವಾಳಶಾಹಿ ದುರಾಸೆ ಕಾರ್ಮಿಕ ವರ್ಗದ ಶೋಷಣೆ ಮತ್ತು ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡುತ್ತಿರುವುದು ಮಾತ್ರವಲ್ಲ, ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುತ್ತಿದೆ.

18ನೇ ಲೋಕಸಭೆಗೆ ಚುನಾವಣೆಗಳು ನಡೆಯುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ, ದೇಶದ ಕಾರ್ಮಿಕ ವರ್ಗ ದಿನವೊಂದಕ್ಕೆ 8 ಗಂಟೆಗಳ ಕೆಲಸ ಎಂಬ ತನ್ನ ಮೂಲಭೂತ ಹಕ್ಕು ಸೇರಿದಂತೆ ತನ್ನೆಲ್ಲ ಹಕ್ಕುಗಳನ್ನು ರಕ್ಷಿಸಿಕೊಳ್ಳಲಿ ಜೊತೆಗೆ **ಪುಟ 15 ಕ್ಕೆ**

ಸಿಐಟಿಯು ಪ್ರತಿಜ್ಞೆ

ಕಾರ್ಮಿಕ ವಿರೋಧಿ, ರೈತ ವಿರೊಧಿ, ಜನ ವಿರೋಧಿ ಮತ್ತು ಬಿಜೆಪಿ ವಿರೋಧಿ ನೀತಿಗಳನ್ನು ಈ ಚುನಾವಣೆಯಲ್ಲಿ ಸೋಲಿಸಲು ಬಿಜೆಪಿ ಕರೆ ನೀಡುತ್ತದೆ. ಕಾರ್ಮಿಕ ಐಕ್ಯತೆ ಮತ್ತು ಕೋಮುವಾದಿಗಳನ್ನು ನಿರ್ಣಾಯಕವಾಗಿ ಸೋಲಿಸಲು ಸಿಐಟಿಯು ಕರೆ ನೀಡುತ್ತದೆ.

ಮೇ ದಿನ ಚಿರಾಯುವಾಗಲಿ
ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ
ಕಾರ್ಮಿಕರು–ರೈತರ ಐಕ್ಯತೆ ಚಿರಾಯುವಾಗಲಿದೆ.
ಸಮಾಜವಾದ ಚಿರಾಯುವಾಗಲಿ
ಬಂಡವಾಳಶಾಹಿ ಅಳಿಯಲಿ
ಸಾಮ್ರಾಜ್ಯಶಾಹಿ ಅಳಿಯಲಿ
ಜಗತ್ತಿನ ಕಾರ್ಮಿಕರ ಚಳವಳಿ ಚಿರಾಯುವಾಗಲಿ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**